# 01-10-2021

## ರಾಜಸ್ಥಾನದಲ್ಲಿ ಪಟಾಕಿ ನಿಷೇಧ



* ಇದೀಗ ರಾಜಸ್ಥಾನ ಸರ್ಕಾರವು ತನ್ನ ರಾಜ್ಯದಲ್ಲಿ ಇದೇ ಅಕ್ಟೋಬರ್ 1 ರಿಂದ 2022 ರ ಜನವರಿ 31 ರವರೆಗೆ ಪಟಾಕಿ ಮಾರಾಟ ಹಾಗೂ ಸಿಡಿಸುವದನ್ನು ನಿಷೇಧಿಸಲಾಗಿದೆ ಎಂದು ಆದೇಶ ಹೊರಡಿಸಿದೆ.
* ಇತ್ತೀಚಿಗೆ ದೆಹಲಿಯಲ್ಲಿ ಕೂಡ 3 ತಿಂಗಳ ವರೆಗೆ ಪಟಾಕಿ ಸಿಡಿಸುವದನ್ನು ನಿಷೇಧಿಸಲಾಗಿದೆ ಎಂದು ದೆಹಲಿ ಮಾಲಿನ್ಯ ನಿಯಂತ್ರಣ ಸಮಿತಿಯು ಆದೇಶ ಹೊರಡಿಸಿದೆ.
* ಪ್ರಸ್ತುತ ದೀಪಾವಳಿ ಹಾಗೂ ದಸರಾ ಹಬ್ಬಗಳ ಆಚರಣೆಯಲ್ಲಿ ಪಟಾಕಿಗಳನ್ನು ಸಿಡಿಸುವುದರಿಂದ ವಿಪರೀತ ವಾಯುಮಾಲಿನ್ಯ ಉಂಟಾಗುತ್ತದೆ ಎಂಬ ಕಾರಣದಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ, ಒಂದು ವೇಳೆ ರಾಜಸ್ಥಾನ ಸರ್ಕಾರದ ಈ ಆದೇಶದ ಮೀರಿ ಪಟಾಕಿಯ ಮಾರಾಟ ಹಾಗೂ ಸಿಡಿಸುವುದನ್ನು ಕಂಡು ಬಂದರೆ ಅಂತವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವದು ಎಂದು ರಾಜಸ್ಥಾನ ಸರ್ಕಾರ ತಿಳಿಸಿದೆ.
* ಒಡಿಶಾ ರಾಜ್ಯದಲ್ಲಿಯೂ ಕೂಡ ದಸರಾ, ಹಾಗೂ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿಯನ್ನು ಮಾರಾಟ ಹಾಗೂ ಸಿಡಿಸುವುದಕ್ಕೆ ನಿಷೇಧ ಹೇರಲಾಗಿದೆ.

## ಭಾರತ ಹಾಕಿ ತಂಡದ ಡಿಫೆಂಡರ್ 'ರೂಪಿಂದರ್ ಪಾಲ್ ಸಿಂಗ್' ಮತ್ತು 'ಬಿರೇಂದ್ರ ಲಾಕ್ರ' ಅಂತಾರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಣೆ



* ಪ್ರಸ್ತುತ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಕಂಚಿನ ಪದಕ ವಿಜೇತರಾದ ಭಾರತೀಯ ಹಾಕಿ ತಂಡದ ಸದಸ್ಯ ರೂಪಿಂದರ್ ಪಾಲ್ ಸಿಂಗ್ ಅವರು ಅಂತಾರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿದ್ದಾರೆ.
* ರೂಪೀಂದರ್ ಪಾಲ್ ಸಿಂಗ್ ಅಂತಾರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿದ ನಂತರ ಮತ್ತೊಬ್ಬ ಭಾರತೀಯ ಹಾಕಿ ಆಟಗಾರ ಬಿರೇಂದ್ರ ಲಾಕ್ರ ಅವರು ಕೂಡಾ ಅಂತಾರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿದ್ದಾರೆ.
* ಪ್ರಸ್ತುತ ಹಾಕಿ ಇಂಡಿಯಾದ ಟ್ವಿಟರ್ ನ ಅಧಿಕೃತ ಖಾತೆಯಲ್ಲಿ ಲಕ್ರಾ ನಿವೃತ್ತಿಯನ್ನು ಪ್ರಕಟಿಸಲಾಗಿದೆ, ಪ್ರಸ್ತುತ ಇವರು ಒಡಿಶಾದ ಸ್ಟಾರ್ ರಾಷ್ಟ್ರೀಯ ತಂಡದಿಂದ ನಿವೃತ್ತಿಯನ್ನು ಘೋಷಿಸಿದ್ದಾರೆ ಎಂದು ಹಾಕಿ ಇಂಡಿಯಾ ಟ್ವೀಟ್ ಮೂಲಕ ಈ ಮಾಹಿತಿ ನೀಡಿದೆ.
* ಇತ್ತೀಚಿಗೆ ಟೋಕಿಯೊದಲ್ಲಿ ನಡೆದ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಡಿಫೆಂಡರ್ ಲಾಕ್ರ ಅವರು ಕಂಚು ಪದಕ ಗೆದ್ದ ಟೀಂ ಇಂಡಿಯಾದ ಸದಸ್ಯ ಆಟಗಾರರಾಗಿದ್ದರು, ಅಷ್ಟೇ ಅಲ್ಲದೇ, ಈ ಹಿಂದೆ 2014 ರಲ್ಲಿ ಚಿನ್ನದ ಪದಕವನ್ನು ಜಯಿಸಿ ಇಂಚಿಯಾನ್ ಏಷ್ಯನ್ ಗೇಮ್ಸ್ ತಂಡದ ಆಟಗಾರರಾಗಿದ್ದರು, ಹಾಗೂ 2018 ಜಕಾರ್ತದಲ್ಲಿ ಕಂಚು ಜಯಿಸಿದ್ದರು.

## ಭಾರತದ ಶ್ರೀಮಂತ ವ್ಯಕ್ತಿಯಾಗಿ ಮುಖೇಶ್ ಅಂಬಾನಿ



* 2021 ರ ಐಐಎಫ್ಎಲ್ ವೆಲ್ತ್ ಹುರುನ್ ಇಂಡಿಯಾ ರಿಚ್ ಲಿಸ್ಟ್ ನೀಡಿರುವ ಮಾಹಿತಿಯ ಪ್ರಕಾರ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಖೇಶ್ ಅಂಬಾನಿ ಅವರು ಸತತವಾಗಿ 10 ನೇ ವರ್ಷವು ಭಾರತದ ಶ್ರೀಮಂತ ವ್ಯಕ್ತಿಯಾಗಿದ್ದಾರೆ.
* ಸದ್ಯ ಮುಖೇಶ್ ಅಂಬಾನಿ ಅವರು ಅಸ್ತಿ ಮೌಲ್ಯವು 7,18,000 ಕೋಟಿ ರೂ. ಗಳಷ್ಟಿದೆ.
* 2021 ರ ಸೆಪ್ಟೆಂಬರ್. 15 ವೇಳೆಗೆ ಐಐಎಫ್ಎಲ್ ವೆಲ್ತ್ ಹುರುನ್ ಶ್ರೀಮಂತ ಪಟ್ಟಿಯಲ್ಲಿ ದೇಶಾದ್ಯಂತ 119 ನಗರಗಳ 1,007 ವ್ಯಕ್ತಿಗಳ ನಿವ್ವಳ ಮೌಲ್ಯ 1,000 ಕೋಟಿ ರೂ. ಗಳಷ್ಟಿದೆ, ಆದರೆ ಈ ಪಟ್ಟಿಯಲ್ಲಿ ಇದೀಗ 229 ಜನ ಹೊಸಬರಿದ್ದಾರೆ.
* ಪ್ರಸ್ತುತ ಭಾರತದಲ್ಲಿ 2021 ರ ಅವಧಿಗೆ 237 ಬಿಲಿಯನೇರ್‌ಗಳಿದ್ದಾರೆ.

## ಫ್ರಾನ್ಸ್ ಮಾಜಿ ಅಧ್ಯಕ್ಷ ನಿಕೋಲಸ್ ಸರ್ಕೋಜಿಗೆ ಜೈಲು ಶಿಕ್ಷೆ



* ಫ್ರಾನ್ಸ್'ನ ನ್ಯಾಯಾಲಯವು ಮಾಜಿ ಅಧ್ಯಕ್ಷ ನಿಕೋಲಸ್ ಸರ್ಕೋಜಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.
* ಮಾಜಿ ಅಧ್ಯಕ್ಷ ನಿಕೋಲಸ್ ಸರ್ಕೋಜಿ ಅವರು 2012 ರ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲ್ಲಲು ಅಕ್ರಮವಾಗಿ ಹಣ ಹಂಚಿಕೆ ಮಾಡಿದ್ದಾರೆ ಎಂಬ ಆರೋಪದಡಿ ಇವರಿಗೆ ಫ್ರಾನ್ಸ್ ನ ನ್ಯಾಯಾಲಯವು ಒಂದು ವರ್ಷ ಜೈಲು ಶಿಕ್ಷೆ ವಿಧಿಸಿದೆ.
* ಮಾಜಿ ಅಧ್ಯಕ್ಷ ನಿಕೋಲಸ್ ಸರ್ಕೋಜಿ ಅವರು ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಸಾಧ್ಯತೆಗಳಿವೆ, ಈ ಕಾರಣದಿಂದ ಎಲೆಕ್ಟ್ರಾನಿಕ್ ಟ್ಯಾಗ್ ನೊಂದಿಗೆ ಮನೆಯಲ್ಲಿಯೇ ಶಿಕ್ಷೆಯನ್ನು ಅನುಭವಿಸಬಹುದು ಎಂದು ಫ್ರಾನ್ಸ್ ನ ನ್ಯಾಯಾಲಯದ ಜಡ್ಜ್ ಒಬ್ಬರು ತಿಳಿಸಿದ್ದಾರೆ.
* ಮಾಜಿ ಅಧ್ಯಕ್ಷ ಸರ್ಕೋಜಿ ಅವರು 2007 ರಿಂದ 2012 ರ

ವರೆಗೂ ಫ್ರಾನ್ಸ್ ಅಧ್ಯಕ್ಷರಾಗಿದ್ದರು.
* ಈ ಹಿಂದೆ ನ್ಯಾಯಾಧೀಶರಿಗೆ ಲಂಚ ನೀಡಿಕೆ ಪ್ರಕರಣದಲ್ಲಿ ನಿಕೋಲಸ್ ಸರ್ಕೋಜಿ ಅವರಿಗೆ ಫ್ರಾನ್ಸ್ ನ್ಯಾಯಾಲಯ ಮಾರ್ಚ್ ನಲ್ಲಿ 3 ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು, ಆದರೆ ಇವರಿಗೆ ಈ ಜೈಲು ಶಿಕ್ಷೆಯಲ್ಲಿ ಎರಡು ವರ್ಷದ ಶಿಕ್ಷೆ ಅಮಾನತು ಮಾಡಲಾಗಿದೆ, ಕೇವಲ ಒಂದು ವರ್ಷದ ಅವಧಿಗೆ ಜೈಲಿಗೆ ಹೋಗಬೇಕಾಗುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

## ಸಚಿವ ಶ್ರೀರಾಮುಲು ಅವರಿಂದ ಬೆಂಗಳೂರಿನಲ್ಲಿ 'ಇ ಬಸ್' ಗೆ ಚಾಲನೆ



* ಬೆಂಗಳೂರು ಮಹಾನಗರ ಸಾರಿಗೆ (BMTC) ಯ ವಿದ್ಯುತ್ ಚಾಲಿತ ಬಸ್(ಇ ಬಸ್)ಗೆ ರಾಜ್ಯ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರು ಚಾಲನೆ ನೀಡಿದ್ದಾರೆ.
* ಈ ವಿದ್ಯುತ್ ಚಾಲಿತ ಬಸ್(ಇ ಬಸ್)ಗೆ ಕೆಂಗೇರಿಯ ಬಸ್ ವಿಭಾಗದಲ್ಲಿ ಚಾಲನೆಯನ್ನು ನೀಡಲಾಗಿದೆ, ಪ್ರಸ್ತುತ ಈ ಬಸ್ ನ್ನು ಉತ್ತರ ಪ್ರದೇಶ ರಾಜ್ಯದ ಜೆಬಿಎಂ ಆಟೋ ಲಿಮಿಟೆಡ್ ಕಂಪನಿ ಸಿದ್ಧಪಡಿಸಿದೆ ಎಂದು ತಿಳಿದು ಬಂದಿದೆ.
* ಈ ವಿದ್ಯುತ್ ಚಾಲಿತ ಬಸ್ ಒಂದು ಬಾರಿ ಸಂಪೂರ್ಣ ಚಾರ್ಜ್ ಮಾಡಿದರೆ ಸುಮಾರು 220 ಕಿಮೀ. ವರೆಗೆ ಸಂಚರಿಸುವ ಸಾಮರ್ಥ್ಯವಿದೆ ಎಂದು ತಿಳಿಸಿದ್ದಾರೆ.
* ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಈ ವಿದ್ಯುತ್ ಚಾಲಿತ ಬಸ್ ಗಳಿಗಾಗಿ 130 ಕೋಟಿ ರೂ. ಮೀಸಲಿಡಲಾಗಿದೆ, ಡಿಸೆಂಬರ್ ಅಂತ್ಯದವರೆಗೆ 93 ವಿದ್ಯುತ್ ಚಾಲಿತ ಬಸ್‌ಗಳು ಸಾರ್ವಜನಿಕರ ಬಳಕೆಗೆ ಲಭ್ಯವಿರಲಿವೆ ಎಂದು ತಿಳಿಸಿದ್ದಾರೆ.

## ಆಯುಷ್ ಸಚಿವಾಲಯವು 'ಬಾಲ ರಕ್ಷಾ ಕಿಟ್'ನ್ನು ಅಭಿವೃದ್ಧಿಪಡಿಸಿದೆ.




* ಪ್ರಸ್ತುತ ಅಖಿಲ ಭಾರತ ಆಯುರ್ವೇದ ಸಂಸ್ಥೆಯು ಕೋವಿಡ್ 19 3 ನೇ ಅಲೆಯು ಎದುರಾಗುವ ಹಿನ್ನಲೆಯಿಂದಾಗಿ 16 ವರ್ಷದೊಳಗಿನ ಮಕ್ಕಳ ದೇಹದಲ್ಲಿ ನಿರೋಧಕ ಶಕ್ತಿಯನ್ನು ವೃದ್ಧಿಸಲು 'ಬಾಲ ರಕ್ಷಾ ಕಿಟ್ 'ನ್ನು ಅಭಿವೃದ್ಧಿಪಡಿಸಿದೆ.
* ಅಖಿಲ ಭಾರತ ಆಯುರ್ವೇದ ಸಂಸ್ಥೆಯು ಆಯುಷ್ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ.
* ಈ 'ಬಾಲ ರಕ್ಷಾ ಕಿಟ್'ನ್ನು ತುಳಸಿ, ಒಣದ್ರಾಕ್ಷಿ, ಅಮೃತಬಳ್ಳಿ, ದಾಲ್ಚಿನ್ನಿ, ಬೇರಿನ ರಸ ಬಳಸಿ ಸಿದ್ಧಪಡಿಸಲಾಗಿದೆ, ಹಾಗೂ ಇದು ಸಿರಪ್, ಚ್ಯವನಪ್ರಾಶ, ತೈಲವನ್ನೂ ಒಳಗೊಂಡಿರಲಿದೆ, ಮಕ್ಕಳು ನಿಯಮಿತವಾಗಿ ಇದನ್ನು ಸೇವನೆ ಮಾಡುವದರಿಂದ ಅವರಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಯಾಗಲಿದೆ ಎಂದು ತಿಳಿಸಿದ್ದಾರೆ.
* ಭಾರತ ಸರ್ಕಾರದ ಅಂಗ ಸಂಸ್ಥೆಯಾದ ಉತ್ತರಾಖಂಡ್ ನಲ್ಲಿನ ಭಾರತೀಯ ವೈದ್ಯಕೀಯ ಔಷದ ಕಂಪನಿ ಘಟಕದಲ್ಲಿ ಇದನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿಸಲಾಗಿದೆ.
* ಅಖಿಲ ಭಾರತ ಆಯುರ್ವೇದ ಸಂಸ್ಥೆಯು ರಾಷ್ಟ್ರೀಯ ಆಯುರ್ವೇದ ದಿನ ನವೆಂಬರ್. 02 ರಂದು ಅಂದಾಜು 10 ಸಾವಿರ 'ಬಾಲ ರಕ್ಷಾ ಕಿಟ್ 'ಗಳನ್ನು ಉಚಿತವಾಗಿ ವಿತರಣೆ ಮಾಡಲಿದೆ.

## ಫ್ಲಿಪ್ ಕಾರ್ಟ್ ನಿಂದ ನೇಕಾರರ ಕರಕುಶಲ ವಸ್ತುಗಳ ಮಾರಾಟಕ್ಕೆ 'ಸಮರ್ಥ್' ಯೋಜನೆ




* ಭಾರತದ ಪ್ರಮುಖ ಇ ಕಾಮರ್ಸ್ ಸಂಸ್ಥೆಯಾಗಿರುವ ಫ್ಲಿಪ್‌ಕಾರ್ಟ್ ಇದೀಗ 8 ನೇ ಆವೃತ್ತಿಯ ಬಿಗ್ ಬಿಲಿಯನ್ ಡೇಸ್ ಆರಂಭಿಸಲಿದೆ, ಇದರೊಂದಿಗೆ ಫ್ಲಿಪ್‌ಕಾರ್ಟ್ ನೇಕಾರರ ಕರಕುಶಲ ವಸ್ತುಗಳ ಮಾರಾಟಕ್ಕೆ 'ಸಮರ್ಥ್' ಯೋಜನೆಗೆ ಅವಕಾಶ ನೀಡಿದೆ.
* ಫ್ಲಿಪ್ಕಾರ್ಟ್ ಈ ಯೋಜನೆ ಅಡಿಯಲ್ಲಿ ಕುಶಲಕರ್ಮಿಗಳು ಹಾಗೂ ನೇಕಾರರೊಂದಿಗೆ ನಿರಂತರ ಸಂಪರ್ಕದಲ್ಲಿದೆ, ಈ ಯೋಜನೆಯಿಂದಾಗಿ ಇವರ ಜೀವನೋಪಾಯ ಮತ್ತು ವ್ಯವಹಾರವನ್ನು ಬೆಳವಣಿಗೆ ಮಾಡಿಕೊಳ್ಳಲು ಒಂದು ಅವಕಾಶವನ್ನು ಒದಗಿಸಿದೆ.
* ಫ್ಲಿಪ್ಕಾರ್ಟ್ ಇದೀಗ ಆನ್‌ಲೈನ್‌ನಲ್ಲಿ ಖರೀದಿಸುವ ಗ್ರಾಹಕರಿಗಾಗಿ 'ಆರ್ಟ್ ಫಾರ್ಮ್ಸ್ ಆಫ್ ಇಂಡಿಯಾ' ಎಂಬ ನೂತನ ಪರಿಕಲ್ಪನೆಯಡಿಯಲ್ಲಿ ಉತ್ಪನ್ನಗಳನ್ನು ಸಂಗ್ರಹಿಸಿದೆ, ಹಾಗೂ ಈ ವರ್ಷ, 'ಆರ್ಟ್ ಫಾರ್ಮ್ಸ್ ಆಫ್ ಇಂಡಿಯಾ ದೇಶಾದ್ಯಂತ ಗ್ರಾಹಕರಿಗೆ ಉತ್ಪನ್ನಗಳನ್ನು ಪೂರೈಕೆ ಮಾಡಲಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಬುಡಕಟ್ಟು ಸಮುದಾಯದ ಕುಶಲಕರ್ಮಿಗಳು ಸಿದ್ಧಪಡಿಸಿರುವ ಉತ್ಪನ್ನಗಳಿಗೆ ಉತ್ತೇಜನ ನೀಡುವದು ಹಾಗೂ ಮಾರುಕಟ್ಟೆಯನ್ನು ಒದಗಿಸುವ ಹೊಣೆಗಾರಿಕೆಯನ್ನು ಬುಡಕಟ್ಟು ಕಲ್ಯಾಣ ಸಚಿವಾಲಯ ಹೊಂದಿದೆ.

## ಹೈಕೋರ್ಟ್‌ಗಳಿಗೆ 16 ನ್ಯಾಯಮೂರ್ತಿಗಳ ನೇಮಕಕ್ಕೆ ಅನುಮೋದನೆ



* ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಕೊಲಿಜಿಯಂ, ಇದೀಗ ವಿವಿಧ '4' ಹೈಕೋರ್ಟ್‌ಗಳಿಗೆ 16 ನ್ಯಾಯಮೂರ್ತಿಗಳನ್ನೂ ನೇಮಿಸಲು ಅನುಮೋದನೆ ನೀಡಿದೆ.
* ಪ್ರಸ್ತುತ ಬಾಂಬೆ, ಗುಜರಾತ್, ಒರಿಸ್ಸಾ, ಹಾಗೂ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗಳಿಗೆ ಈ 16 ನ್ಯಾಯಮೂರ್ತಿಗಳ ನೇಮಕವಾಗಲಿದೆ ಎಂದು ತಿಳಿಸಲಾಗಿದೆ.
* ಪ್ರಸ್ತುತ ಕೊಲಿಜಿಯಂನ ಸಭೆಯು 6 ಮಂದಿ ನ್ಯಾಯಾಂಗ ಅಧಿಕಾರಿಗಳು, ಹಾಗೂ 10 ವಕೀಲರನ್ನು ನ್ಯಾಯಮೂರ್ತಿಗಳಾಗಿ ನಿಯೋಜನೆ ಮಾಡಬೇಕೆಂಬ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ.
* ಪ್ರಸ್ತುತ ಬಾಂಬೆ ಹೈಕೋರ್ಟ್‌ಗೆ: ಎ.ಎಲ್.ಪಾನ್ಸಾರೆ, ಎಸ್.ಎಸ್.ಮೋರೆ, ಯು.ಎಸ್.ಜೋಶಿ ಫಾಲ್ಕೆ ಮತ್ತು ಬಿ.ಪಿ.ದೇಶಪಾಂಡೆ ಅವರನ್ನು ನೇಮಿಸಲು ಕೊಲಿಜಿಯಂ ಶಿಫಾರಸ್ಸು ಮಾಡಿದೆ.
* ಒರಿಸ್ಸಾ ಹೈಕೋರ್ಟ್‌ಗೆ: ವಕೀಲರಾದ ಆದಿತ್ಯ ಕುಮಾರ್ ಮೊಹಾಪಾತ್ರ, ಮೃಗಂಕಾ ಶೇಖರ್ ಸಾಹೂ, ನ್ಯಾಯಾಂಗ ಅಧಿಕಾರಿಗಳಾದ ರಾಧಾಕೃಷ್ಣ ಪಟ್ನಾಯಕ್, ಶಶಿಕಾಂತ ಮಿಶ್ರಾಅವರನ್ನು ನೇಮಕ ಮಾಡಲು ಕೊಲಿಜಿಯಂ ಶಿಫಾರಸ್ಸು ಮಾಡಿದೆ.
* ಗುಜರಾತ್ ಹೈಕೋರ್ಟ್‌ಗೆ: ವಕೀಲರಾದ ಮೌನ ಮನೀಶ್ ಭಟ್, ಸಮೀರ್ ಜೆ.ದವೆ, ಹೇಮಂತ್ ಎಂ.ಪ್ರಚ್ಚಾಕ್, ಸಂದೀಪ್ ಎನ್.ಭಟ್, ಅನಿರುದ್ಧ ಪ್ರಧ್ಯುಮ್ನ ಮಾಯಿ, ನಿರಲ್ ರಶ್ಮಿಕಾಂತ್ ಮೆಹ್ತಾ, ನಿಶಾ ಮೆಹೆಂದರ ಭಾಯ್ ಥಾಕೋರ್ ಅವರನ್ನು ನೇಮಕ ಮಾಡಲು ಕೊಲಿಜಿಯಂ ಶಿಫಾರಸ್ಸು ಮಾಡಿದೆ.
* ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗೆ: ನ್ಯಾಯಮೂರ್ತಿಯಾಗಿ ವಕೀಲ ಸಂದೀಪ್ ಮೌದ್ಗಿಲ್ ಅವರ ಹೆಸರನ್ನು ಕೊಲಿಜಿಯಂ ಶಿಫಾರಸ್ಸು ಮಾಡಿದೆ ಎನ್ನಲಾಗಿದೆ.

### HAL ನಿಂದ 25 ಹೆಲಿಕಾಪ್ಟರ್ ಖರೀದಿಗೆ ಅನುಮೋದನೆ



* ಕೇಂದ್ರ ಸರ್ಕಾರವು 3,850 ಕೋಟಿ ವೆಚ್ಚದಲ್ಲಿ HAL ನಿಂದ 25 ಎಎಲ್‌ಎಚ್ ಮಾರ್ಕ್ 3 ಹೆಲಿಕಾಪ್ಟರ್‌ಗಳ ಖರೀದಿಗೆ ಒಪ್ಪಿಗೆಯನ್ನು ನೀಡಿದೆ.
* ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯ ಕೇಂದ್ರ ರಕ್ಷಣಾ ಖರೀದಿ ಮಂಡಳಿಯು ಹೆಲಿಕಾಪ್ಟರ್‌ಗಳು, ಶಸ್ತ್ರಾಸ್ತ್ರಗಳು, ರಾಕೆಟ್‌ಗಳು ಹಾಗೂ ಮಿಲಿಟರಿ ಹಾರ್ಡ್‌ವೇರ್ ಸೇರಿ ಒಟ್ಟಾರೆ 13,165 ಕೋಟಿ ರೂ. ವೆಚ್ಚದ ರಕ್ಷಣಾ ಸಾಮಗ್ರಿಗಳ ಖರೀದಿಗೆ ಅನುಮೋದನೆಯನ್ನು ನೀಡಿದೆ.

### 'ಪಿಎಂ ಪೋಷಣ್' ಯೋಜನೆಗೆ ಚಾಲನೆ




* ಕೇಂದ್ರ ಸಚಿವ ಸಂಪುಟವು ಪ್ರಸ್ತುತ ದೇಶದಾದ್ಯಂತ ಇರುವ ಸರ್ಕಾರಿ ಹಾಗೂ ಅನುದಾನಿತ ಪೂರ್ವ ಪ್ರಾಥಮಿಕ, ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಬಿಸಿಯೂಟ ನೀಡುವ 'ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್' ಯೋಜನೆಗೆ ಅನುಮೋದನೆ ನೀಡಿದೆ.
* ಸದ್ಯ ದೇಶದಲ್ಲಿ ಚಾಲ್ತಿಯಲ್ಲಿರುವ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು 'ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್' ಯೋಜನೆಯಲ್ಲಿ ವಿಲೀನಗೊಳಿಸಲಾಗುವುದು, ಹಾಗೂ ಈ ಯೋಜನೆಯು 2021 ರಿಂದ 2026 ವರೆಗೆ ಜಾರಿಯಲ್ಲಿರಲಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ತಿಳಿಸಿದ್ದಾರೆ.
* ಪ್ರಸ್ತುತ ಈ 'ಪಿಎಂ ಪೋಷಣ್' ಯೋಜನೆಯು ದೇಶದಲ್ಲಿನ 11.20 ಲಕ್ಷ ಶಾಲೆಗಳ 11.80 ಕೋಟಿ ಮಕ್ಕಳಿಗೆ ಇದರ ಪ್ರಯೋಜನ ಲಭ್ಯವಾಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಿಳಿಸಿದ್ದಾರೆ.
* ಕೇಂದ್ರ ಸರ್ಕಾರವು ಒಟ್ಟಾರೆ 1,30,794.90 ಕೋಟಿ ರೂ. ವೆಚ್ಚದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ ಎಂದು ತಿಳಿದು ಬಂದಿದೆ.
* ಕೇಂದ್ರ ಸರ್ಕಾರದ ಈ ಯೋಜನೆ ಅಡಿಯಲ್ಲಿ ಎಲ್ಲ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿನ 1 ರಿಂದ 8 ತರಗತಿಯ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

## 02-10-2021

### ಸಂದೀಪ್ ಸಿಂಗ್ ವಾಯು ಪಡೆಯ ವೈಸ್ ಮಾರ್ಷಲ್ ಆಗಿ ಅಧಿಕಾರ ಸ್ವೀಕಾರ



* ಪ್ರಸ್ತುತ ಸಂದೀಪ್ ಸಿಂಗ್ ಅವರು ಭಾರತೀಯ ವಾಯು ಪಡೆಯ ನೂತನ ವೈಸ್ ಮಾರ್ಷಲ್'ಆಗಿ ಅಧಿಕಾರ ವಹಿಸಿಕೊಂಡರು, ಇತ್ತೀಚಿಗೆ ವಿ.ಆರ್. ಚೌಧರಿ ಅವರು ಭಾರತೀಯ ವಾಯು ಪಡೆಯ 27 ನೇ ಚೀಫ್ ಮಾರ್ಷಲ್'ಆಗಿ ಅಧಿಕಾರ ವಹಿಸಿಕೊಂಡರು, ಇವರ ಈ ಸ್ಥಾನಕ್ಕೆ ಸಂದೀಪ್ ಸಿಂಗ್ ಅವರನ್ನು ನೇಮಕ ಮಾಡಲಾಗಿದೆ.
* ಈ ಹಿಂದೆ 1983 ರಲ್ಲಿ ಸಂದೀಪ್ ಸಿಂಗ್ ಅವರು ಭಾರತೀಯ ವಾಯು ಪಡೆಯ ಯುದ್ಧ ವಿಮಾನದ ಪೈಲೆಟ್ ಆಗಿ ನೇಮಕಗೊಂಡರು, ಅಷ್ಟೇ ಅಲ್ಲದೆ ಇವರು 4,400 ಗಂಟೆ ಕಾಲ ವಿಮಾನ ಹಾರಾಟ ನಡೆಸಿದ ಅನುಭವವನ್ನು ಹೊಂದಿದ್ದಾರೆ, ಹೀಗೆ ಅನೇಕ ವಾಯು ಪಡೆಯ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

## ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರಿಗೆ 'ಶರಣಶ್ರೀ', ಮತ್ತು 'ಬಸವಭೂಷಣ' ಪ್ರಶಸ್ತಿ

* ಪ್ರಸ್ತುತ ಚಿತ್ರದುರ್ಗದಲ್ಲಿನ ಮುರುಘಾಮಠ ಶರಣ ಸಂಸ್ಕೃತಿ ಉತ್ಸವದಲ್ಲಿ ಪ್ರಧಾನ ಮಾಡಲಾಗುವ 'ಬಸವಭೂಷಣ' ಪ್ರಶಸ್ತಿಗೆ ಪ್ರಸ್ತುತ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಯ್ಕೆ ಮಾಡಲಾಗಿದೆ, ಅದೇ ರೀತಿ 'ಶರಣಶ್ರೀ' ಪ್ರಶಸ್ತಿಗೆ ರಾಜ್ಯದ ಮಾಜಿ



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

* ಪ್ರಸ್ತುತ ಈ ಪ್ರಶಸ್ತಿ ಪ್ರಧಾನವು ಇದೆ ಅಕ್ಟೋಬರ್.18 ರಂದು ಮುರುಘಾಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನೀಡಲಾಗುತ್ತದೆ ಎಂದು ಶಿವಮೂರ್ತಿ ಮುರುಘಾ ಶರಣರು ತಿಳಿಸಿದ್ದಾರೆ.

* ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ 7 ವಿಶ್ವದಾಖಲೆ ನಿರ್ಮಿಸಿದ ಉಡುಪಿಯ ಬಾಲ ಪ್ರತಿಭೆ ತನುಶ್ರೀ ಅವರನ್ನು ಭರಮಣ್ಣನಾಯಕ ಶೌರ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ, ಅಷ್ಟೇ ಅಲ್ಲದೇ ಮುರುಘಾಶ್ರೀ ಹಾಗೂ ಶೌರ್ಯ ಪ್ರಶಸ್ತಿಯು 25 ಸಾವಿರ ರೂ. ಮತ್ತು ಪ್ರಶಸ್ತಿ ಫಲಕವನ್ನು ನೀಡಲಾಗುತ್ತದೆ.

* ಪ್ರಸ್ತುತ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಮತ್ತು ಬಾಹ್ಯಾಕಾಶ ವಿಜ್ಞಾನಿ ಕೆ.ಕಸ್ತೂರಿ ರಂಗನ್ ಅವರನ್ನು 'ಬಸವಶ್ರೀ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ, ಈ ಪ್ರಶಸ್ತಿಯನ್ನು ಇದೆ ಅಕ್ಟೋಬರ್. 17 ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದಿದ್ದಾರೆ.

## ಮನು ಭಾಕರ್‌ಗೆ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್ ನಲ್ಲಿ ಚಿನ್ನ




* ಪ್ರಸ್ತುತ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಶೂಟರ್‌ಗಳು ಒಂದೇ ದಿನದಲ್ಲಿ ಒಂದು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕಗಳನ್ನೂ ಜಯಿಸಿದ್ದಾರೆ.

* ಮನು ಭಾಕರ್‌ಗೆ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್ ಷಿಪ್'ನ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ, ಹಾಗೂ ಇದೇ ವಿಭಾಗದಲ್ಲಿ ಪಾಲ್ಗೊಂಡಿರುವ ಇಶಾ ಸಿಂಗ್ ಬೆಳ್ಳಿ ಪದಕವನ್ನು ಜಯಿಸಿದ್ದಾರೆ, ಟರ್ಕಿಯ ಯೆಸ್‌ಮಿನ್ ಬೇಜಾ ಯಿಲ್ಮಾಜ್ ಕಂಚು ತಮ್ಮದಾಗಿಸಿಕೊಂಡಿದ್ದಾರೆ.

* ರುದ್ರಾಕ್ಷ್ ಬಾಳಾಸಾಹೇಬ್ ಪಾಟೀಲ್ ಅವರು ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ, ಹಾಗೂ ಮಹಿಳೆಯರ ವಿಭಾಗದಲ್ಲಿ ರಮಿತಾ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.

## ಕನ್ನಡಿಗ ಎಸ್ ವಿ ಸುನೀಲ್ ಅಂತಾರಾಷ್ಟ್ರೀಯ ಹಾಕಿಗೆ ವಿದಾಯ



* ಕನ್ನಡಿಗ ಎಸ್‌ವಿ ಸುನೀಲ್ ಅವರು ಈ ಹಿಂದೆ ಕಳೆದ 14 ವರ್ಷಗಳಿಂದ ರಾಷ್ಟ್ರೀಯ ಹಾಕಿ ತಂಡದ ಭಾಗವಾಗಿದ್ದರು, ಇದೀಗ ಇವರು ಅಂತಾರಾಷ್ಟ್ರೀಯ ಹಾಕಿಗೆ ವಿದಾಯ ಘೋಷಣೆ ಮಾಡಿದ್ದಾರೆ.

* ಎಸ್‌ವಿ ಸುನೀಲ್ ಅವರು 2014 ರ ಏಷ್ಯಾಡ್ ಸ್ವರ್ಣ ಪದಕ ವಿಜೇತ ಭಾರತ ತಂಡದ ಆಟಗಾರರಾಗಿದ್ದರು, ಹಾಗೂ ಇವರು ರಾಷ್ಟ್ರೀಯ ತಂಡದ ಪರವಾಗಿ 264 ಪಂದ್ಯಗಳಲ್ಲಿ ಆಟವಾಡಿ 72 ಗೋಲು ಗಳಿಸಿದ್ದರು.

* ಎಸ್‌ವಿ ಸುನೀಲ್ ಅವರು 2007 ರಲ್ಲಿ ಏಷ್ಯಾಕಪ್‌ನಲ್ಲಿ ಪಾಲ್ಗೊಳ್ಳುವ ಮೂಲಕ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು, ಮತ್ತೇ 2012 ರ ಲಂಡನ್ ಹಾಗೂ 2016 ರ ರಿಯೋ ಒಲಿಂಪಿಕ್ಸ್‌ನಲ್ಲಿ ತಂಡದಲ್ಲಿ ಆಟವಾಡಿದ್ದರು.

* ಎಸ್‌ವಿ. ಸುನೀಲ್ ಅವರು 2011 ರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ, 2012 ರ ಟೂರ್ನಿಯಲ್ಲಿ ಬೆಳ್ಳಿ ಪದಕವನ್ನು ಜಯಿಸಿರುವ ತಂಡದ ಸದಸ್ಯರಾಗಿದ್ದರು, ಮತ್ತೇ 2014 ರ ಏಷ್ಯಾಡ್‌ನಲ್ಲಿ ಸ್ವರ್ಣ, 2018ರ ಏಷ್ಯಾಡ್‌ನಲ್ಲಿ ಕಂಚು ಮತ್ತೇ 2017 ರ ಏಷ್ಯಾಕಪ್‌ನಲ್ಲಿ ಚಿನ್ನ ಜಯಿಸಿರುವ ತಂಡದ ಸದಸ್ಯರಾಗಿದ್ದರು,

* ಭಾರತ ತಂಡವು 2016 ರ ಹಾಗೂ 2018 ರ ಎಫ್ ಐಎಚ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಬೆಳ್ಳಿ ಪದಕವನ್ನು ಜಯಿಸಿತ್ತು, 2014 ರ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಜಯಿಸಿರುವ ತಂಡದ ಸದಸ್ಯ ಆಟಗಾರರಾಗಿದ್ದರು.

## ಸ್ವಚ್ಛ ಭಾರತ್ ಮಿಷನ್ 2 ನೇ ಹಂತದ ಯೋಜನೆಗಳಿಗೆ ಚಾಲನೆ



* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ವಚ್ಛ ಭಾರತ್ ಮಿಷನ್ ಅರ್ಬನ್ ಹಾಗೂ ಅಮೃತ್ ಕಾರ್ಯಕ್ರಮದ 2ನೇ ಹಂತದ ಯೋಜನೆಗಳಿಗೆ ಚಾಲನೆ ನೀಡಿದರು.

* ಪ್ರಸ್ತುತ ಸ್ವಚ್ಛ ಭಾರತ್ ಮಿಷನ್ 2 ನೇ ಹಂತದ ಯೋಜನೆಗಳಲ್ಲಿ ನಗರ ಪ್ರದೇಶಗಳನ್ನು ತ್ಯಾಜ್ಯ ಮುಕ್ತವಾಗಿಸುವುದು, ಹಾಗೂ

ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡುವದು ಎಂದು ತಿಳಿಸಿದ್ದಾರೆ.
* ಸುಮಾರು 4,700 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ, 2.68 ಕೋಟಿ ರೂ. ವೆಚ್ಚದಲ್ಲಿ ನಗರ ಪ್ರದೇಶಗಳಿಗೆ ಸಮರ್ಪಕ ಕುಡಿಯುವನೀರು ಸೌಲಭ್ಯ ಒದಗಿಸುವದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.
* ಪ್ರಸ್ತುತ 1.41 ಲಕ್ಷ ಕೋಟಿ ಹಣವನ್ನು ಈ ಸ್ವಚ್ಛಭಾರತ್ ಮಿಷನ್‌ನ 2 ನೇ ಹಂತದ ಯೋಜನೆಗೆ ನಿಗದಿಪಡಿಸಿದೆ, ಹಾಗೂ ಅಮೃತ್ 2.0 ಯೋಜನೆಗಾಗಿ 2.87 ಲಕ್ಷ ಕೋಟಿ ರೂ. ಹಣ ನಿಗದಿಪಡಿಸಲಾಗಿದೆ.
* ಸ್ವಚ್ಛ ಭಾರತ್ ಮಿಷನ್ 2.0 ಯೋಜನೆ ಅಡಿಯಲ್ಲಿ ಎಲ್ಲ ನಗರಗಳನ್ನು ತ್ಯಾಜ್ಯ ಮುಕ್ತಗೊಳಿಸುವಿಕೆ, ಬಯಲು ಶೌಚಮುಕ್ತಗೊಳಿಸುವಿಕೆ, ಹಾಗೂ ನಗರ ಪ್ರದೇಶಗಳಲ್ಲಿ ನೈರ್ಮಲ್ಯ ರಕ್ಷಣೆಗೆ ಹೆಚ್ಚಿನ ಒತ್ತು ನೀಡುವದು, ಅಷ್ಟೇ ಅಲ್ಲದೇ ಘನ್ಯ ತ್ಯಾಜ್ಯವನ್ನು ವಿಂಗಡಿಸಿ 3R'ನ ಅಡಿಯಲ್ಲಿ (ರೆಡ್ಯೂಸ್, ರೀ ಯೂಸ್ ಮತ್ತು ರೀ ಸೈಕಲ್) ನಿರ್ವಹಣೆ ಮಾಡುವ ಗುರಿ ಹೊಂದಿದೆ.

### ಶತಕ ಬಾರಿಸಿ ಇತಿಹಾಸ ನಿರ್ಮಿಸಿದ ಸ್ಮೃತಿ ಮಂದಾನ



* ಪ್ರಸ್ತುತ ಆಸ್ಟ್ರೇಲಿಯಾ ವಿರುದ್ಧ ನಡೆಯುತ್ತಿರುವ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರು ಶತಕ ಬಾರಿಸಿ ನೂತನ ದಾಖಲೆಯ ಇತಿಹಾಸ ನಿರ್ಮಿಸಿದ್ದಾರೆ.
* ಸ್ಮೃತಿ ಮಂದಾನ ಅವರು ಆಸ್ಟ್ರೇಲಿಯಾ ನಡೆಯುತ್ತಿರುವ ಮಹಿಳಾ ಟೆಸ್ಟ್ ಕ್ರಿಕೆಟ್‌ನಲ್ಲಿ ಶತಕ ಬಾರಿಸಿದ ಭಾರತದ ಮೊಟ್ಟ ಮೊದಲ ಆಟಗಾರ್ತಿ ಇವರಾಗಿದ್ದಾರೆ.

### 'ಏರ್ ಇಂಡಿಯಾ' ಬಿಡ್ ಖರೀದಿಸಿದ 'ಟಾಟಾ ಸನ್ಸ್'





* ಇತ್ತೀಚಿಗೆ ಭಾರತೀಯ ಸರ್ಕಾರಿ ಸ್ವಾಮ್ಯದ ಏರ್ ಇಂಡಿಯಾ ಸಂಸ್ಥೆಯ (Air India) ಖರೀದಿಗಾಗಿ ಬಿಡ್ ನಡೆಸಲಾಯಿತು, ಈ ಬಿಡ್ ನಲ್ಲಿ ಅಂತಿಮವಾಗಿ ಏರ್ ಇಂಡಿಯಾ ಸಂಸ್ಥೆಯನ್ನು ಟಾಟಾ ಸನ್ಸ್ ಖರೀದಿಸಿದೆ ಎಂದು ತಿಳಿದು ಬಂದಿದೆ.
* ರಾಷ್ಟ್ರೀಯ ವಾಹಕ ಏರ್ ಇಂಡಿಯಾವನ್ನು ಸ್ವಾಧೀನಪಡಿಸಿಕೊಳ್ಳುವ ಅಂತಿಮ ಬಿಡ್'ನ್ನು ಸಾಲ್ಟ್ ಟು ಸಾಫ್ಟ್ ವೇರ್ ಸಮೂಹವು ಸೆಪ್ಟೆಂಬರ್. 15 ರಂದು ವಿಮಾನಯಾನಕ್ಕಾಗಿ ಅಂತಿಮ ಬಿಡ್ ನೀಡಿತ್ತು, ಇದೀಗ ಈ ಬಿಡ್'ನ್ನು ಟಾಟಾ ಸನ್ಸ್ ಸಂಸ್ಥೆಯು ಪಡೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ.
* ಪ್ರಸ್ತುತ ಈ ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್ ಟಾಟಾ ಗ್ರೂಪ್'ನ ಹಿಡುವಳಿ ಕಂಪನಿಯಾಗಿದೆ, ಭಾರತದಾದ್ಯಂತ ಚಹಾ ತೋಟಗಳು ಮತ್ತು ಉಕ್ಕಿನ ಕಾರ್ಖಾನೆಗಳು ಸೇರಿದಂತೆ ಟಾಟಾ ಸಮೂಹದ ಬಹುಪಾಲು ಷೇರುಗಳನ್ನು ಹೊಂದಿದೆ.
* ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್'ನ್ನು 1868 ರಲ್ಲಿ ಟಾಟಾ ಗ್ರೂಪ್, ಜಮ್ಸೆಟ್ಜಿ ಟಾಟಾ ಅವರು ಸ್ಥಾಪಿಸಿದ್ದಾರೆ, ಹಾಗೂ ಇದು ಮುಂಬೈನಲ್ಲಿ ತನ್ನ ಪ್ರಧಾನ ಕಚೇರಿಯನ್ನು ಹೊಂದಿದೆ.
* ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್: ಟಾಟಾ ಸಮೂಹ, ಟಾಟಾ ಕನ್ಸಲ್ಟೆನ್ಸಿ ಸೇವೆಗಳು ಎಂಬ ಅಂಗಸಂಸ್ಥೆಗಳನ್ನು ಹೊಂದಿದೆ.

### ಗೊಜನೂರ ಗ್ರಾಮಕ್ಕೆ 2 ನೇ ಬಾರಿಗೂ ಗಾಂಧಿ ಗ್ರಾಮ ಪುರಸ್ಕಾರ



* ಪ್ರಸ್ತುತ 2020 21 ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರವು ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಗೊಜನೂರ ಗ್ರಾಮ ಪಂಚಾಯಿತಿಗೆ ಲಭಿಸಿದೆ.
* ಈ ಹಿಂದೆ ಗೊಜನೂರ ಗ್ರಾಮ ಪಂಚಾಯಿತಿ 2013 14 ನೇ ಸಾಲಿನಲ್ಲೂಯು ಕೂಡ ಈ ಪುರಸ್ಕಾರವನ್ನು ಪಡೆದುಕೊಂಡಿತ್ತು.
* ಪ್ರಸ್ತುತ ಈ ಗೊಜನೂರ ಗ್ರಾಮ ಪಂಚಾಯಿತಿಯು ಗೊಜನೂರ, ಅಕ್ಕಿಗುಂದ, ಹಾಗೂ ಅಕ್ಕಿಗುಂದ ತಾಂಡಾ 3 ಗ್ರಾಮಗಳನ್ನು ಒಳಗೊಂಡಿದೆ, ಈ ಗ್ರಾಮ ಪಂಚಾಯಿತಿಯು ಒಟ್ಟಾರೆ 5508 ಜನಸಂಖ್ಯೆಯನ್ನು ಹೊಂದಿದೆ.
* ಈ ಗ್ರಾಮ ಪಂಚಾಯತಿಯು 2020 21 ರಲ್ಲಿ ನಮ್ಮ ಗ್ರಾಮ ನಮ್ಮ ಯೋಜನೆಯಡಿಲ್ಲಿನ ಕ್ರಿಯಾ ಯೋಜನೆ ರಚಿಸಿತ್ತು ಅದರಂತೆಯೇ ಇ ಗ್ರಾಮವು ಎಲ್ಲ ಕ್ರಿಯಾ ಯೋಜನೆಗಳನ್ನು ಶೇ.100 ರಷ್ಟು ಅನುಷ್ಠಾನಗೊಳಿಸಿತ್ತು.
* ಈ ಗ್ರಾಮ ಪಂಚಾಯತಿಯು ವ್ಯಾಪ್ತಿಯ 5 ಸರ್ಕಾರಿ ಶಾಲೆ, 1 ಮೊರಾರ್ಜಿ ವಸತಿ ಶಾಲೆಯ ಅಭಿವೃದ್ಧಿ ಕಾರ್ಯವನ್ನು ಹಮ್ಮಿಕೊಂಡಿತ್ತು, ಹಾಗೂ ವಸತಿ ಯೋಜನೆಯಡಿಲ್ಲಿ ಮಂಜೂರಾಗಿರುವ ಶೇ.80 ರಷ್ಟು ಮನೆಗಳನ್ನೂ ನಿರ್ಮಾಣ ಮಾಡಿದೆ, ಬಹು ಗ್ರಾಮ ಕುಡಿಯುವ ನೀರು ಯೋಜನೆಯಡಿ ಗ್ರಾಮ ಪಂಚಾಯತಿಯು ವ್ಯಾಪ್ತಿಗೆ ಬರುವ ಗ್ರಾಮದ ಎಲ್ಲರಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುತ್ತಿದೆ, ಪಂಚಾಯತ್‌ರಾಜ್ ಇಲಾಖೆಯು ಈ ಎಲ್ಲ ಅಂಕಿ ಅಂಶಗಳನ್ನು ಪರಿಗಣಿಸಿ ಗೊಜನೂರ ಗ್ರಾಮ ಪಂಚಾಯತಿಯುನ್ನು 2 ನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರ ಪುಶಸ್ತಿಗೆ ಆಯ್ಕೆ ಮಾಡಿದೆ.

### ಆಸ್ಟ್ರೇಲಿಯಾದ ಔಷಧ ನಿಯಂತ್ರಕವು ಭಾರತದ ಕೋವಿಶೀಲ್ಡ್ ಲಸಿಕೆಗೆ ಅನುಮೋದನೆ



* ಪ್ರಸ್ತುತ ಭಾರತದ ಸೀರಮ್ ಇನ್‌ಸ್ಟಿಟ್ಯೂಟ್ ತಯಾರಿಸಿದ ಕೋವಿಶೀಲ್ಡ್ ಲಸಿಕೆಗೆ ಆಸ್ಟ್ರೇಲಿಯಾದ ಉನ್ನತ ವೈದ್ಯಕೀಯ ನಿಯಂತ್ರಕ ಮಂಡಳಿಯು ಅನುಮೋದನೆ ನೀಡಿದೆ.
* ಈ ಅನುಮೋದನೆಯಿಂದಾಗಿ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಆಸ್ಟ್ರೇಲಿಯಾ ದೇಶಕ್ಕೆ ಪ್ರಯಾಣ ಬೆಳೆಸಲು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.
* ಚಿಕಿತ್ಸಾ ಸರಕುಗಳ ಆಡಳಿತವು ಕೊರೊನಾವ್ಯಾಕ್ ಹಾಗೂ ಕೋವಿಶೀಲ್ಡ್ ಲಸಿಕೆಗಳನ್ನು 'ಮಾನ್ಯತೆ ಪಡೆದ ಲಸಿಕೆಗಳು' ಎಂದು ಪರಿಗಣಿಸಿದೆ, ಅಂತರರಾಷ್ಟ್ರೀಯ ಪ್ರಯಾಣಿಕರು ಈ ಲಸಿಕೆಗಳನ್ನೂ ಪಡೆದುಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ತಿಳಿಸಲಾಗಿದೆ ಎಂದು ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ ಸ್ಕಾಟ್ ಮಾರಿಸನ್ ಅವರ ಕಚೇರಿಯು ಮಾಹಿತಿ ನೀಡಿದೆ.
* ಚಿಕಿತ್ಸಾ ಸರಕುಗಳ ಆಡಳಿತವು(TGA) ಎಂಬುವದು ಆಸ್ಟ್ರೇಲಿಯಾದ ಔಷಧಗಳು ಮತ್ತು ವೈದ್ಯಕೀಯ ಸಾಧನಗಳ ನಿಯಂತ್ರಕವಾಗಿದೆ.
* ಒಂದು ವೇಳೆ ಚಿಕಿತ್ಸಾ ಸರಕುಗಳ ಆಡಳಿತದಿಂದ ಮಾನ್ಯತೆ ಪಡೆಯದ ಲಸಿಕೆಗಳನ್ನು ಹಾಕಿಸಿಕೊಂಡಿರುವ, ಅಥವಾ ಲಸಿಕೆಯನ್ನೇ ಹಾಕಿಸಿಕೊಳ್ಳದ ಜನರು ಆಸ್ಟ್ರೇಲಿಯಾಕ್ಕೆ ಬಂದ ನಂತರ ಸುಮಾರು 14 ದಿನಗಳ ಕ್ವಾರಂಟೈನ್‌ನಲ್ಲಿರಬೇಕು ಎಂದು ತಿಳಿಸಿದೆ.

## ಅಂತರಾಷ್ಟ್ರೀಯ ಅನುವಾದ ದಿನ




* ಅಂತರರಾಷ್ಟ್ರೀಯ ಭಾಷಾಂತರ(ಅನುವಾದ) ದಿನವನ್ನು ಸೆಪ್ಟೆಂಬರ್ 30 ರಂದು ಆಚರಣೆ ಮಾಡಲಾಯಿತು.
* ಅಂತರಾಷ್ಟ್ರೀಯ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುವಲ್ಲಿ ಗಣನೀಯ ಕೊಡುಗೆ ನೀಡಿರುವ ಹಿನ್ನಲೆಯಿಂದಾಗಿ ಭಾಷಾ ತಜ್ಞರ ಕೆಲಸವನ್ನು ಗೌರವಿಸಲಾಯಿತು.
* ಸೇಂಟ್ ಜೆರೋಮ್ ಸಾವಿನ ದಿನವನ್ನು ಸೆಪ್ಟೆಂಬರ್. 30 ರಂದು ಆಚರಿಸಲಾಗುತ್ತದೆ, ಇವರು ಬೈಬಲ್ ಭಾಷಾಂತರಕಾರರಾಗಿದ್ದರು, ಹಾಗೂ ಇವರನ್ನು 'ಭಾಷಾಶಾಸ್ತ್ರಜ್ಞರ ಪೋಷಕ ಸಂತ' ಎಂದು ಪರಿಗಣಿಸಲಾಗಿದೆ.
* ಈ ದಿನವನ್ನು 2021ರ 'ಅನುವಾದದಲ್ಲಿ ಯುನೈಟೆಡ್' ಎಂಬ ವಿಷಯದ ಅಡಿಯಲ್ಲಿ ಆಚರಣೆ ಮಾಡಲಾಯಿತು ಹಾಗೂ ಭಾಷಾ ತಜ್ಞರ ಕೆಲಸವನ್ನು ಗೌರವಿಸಲು ಆಚರಣೆ ಮಾಡಲಾಗುತ್ತದೆ.
* ಈ ಅಂತರಾಷ್ಟ್ರೀಯ ಅನುವಾದ ದಿನವನ್ನು 1953 ರಲ್ಲಿ ಆಚರಣೆ ಮಾಡಲು ಆರಂಭಿಸಲಾಯಿತು. ಆ ದಿನದಿಂದ ಈ ದಿನವನ್ನು 'ಇಂಟರ್‌ನ್ಯಾಷನಲ್ ಫೆಡರೇಶನ್ ಆಫ್ ಟ್ರಾನ್ಸ್ಲೇಟರ್ಸ್' ಆಯೋಜಿಸುತ್ತಿದೆ.

# 04-10-2021

## ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ ನಲ್ಲಿ ಭಾರತಕ್ಕೆ ಕಂಚು




* ಭಾರತೀಯ ಪುರುಷರ ಟೇಬಲ್ ಟೆನಿಸ್ ತಂಡವು ಇತ್ತೀಚಿಗೆ ನಡೆದ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಜಯಿಸಿದೆ.
* ಭಾರತ ತಂಡವು ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನ ಸೆಮಿಫೈನಲ್ ನಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಸೋಲ ಅನುಭವಿಸಿ ಕಂಚಿನ ಪದಕ ಪಡೆದಿದೆ.
* ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ ಪಂದ್ಯಾವಳಿಯನ್ನು ಟೇಬಲ್ ಟೆನಿಸ್ ಫೆಡರೇಶನ್ ಆಫ್ ಏಷ್ಯಾ (TTFA) 1952 ರಿಂದ 1972 ರವರೆಗೆ ಆಯೋಜಿಸಿತ್ತು.
* ರಾಷ್ಟ್ರೀಯ ಟೇಬಲ್ ಟೆನ್ನಿಸ್ ಅಸೋಸಿಯೇಶನ್‌ಗಳ ನಡುವಿನ ಸಂಘರ್ಷದಿಂದಾಗಿ, ಏಷಿಯಾ ಟೇಬಲ್ ಟೆನಿಸ್ ಯೂನಿಯನ್ ಏಷ್ಯಾದಲ್ಲಿ ತನ್ನದೇ ಏಷ್ಯನ್ ಚಾಂಪಿಯನ್‌ಶಿಪ್ ಪಂದ್ಯಗಳನ್ನು ಪ್ರಾರಂಭಿಸಿತು.
* ಅಂತರಾಷ್ಟ್ರೀಯ ಟೇಬಲ್ ಟೆನಿಸ್ ಫೆಡರೇಶನ್ ಇದೊಂದು ರಾಷ್ಟ್ರೀಯ ಟೇಬಲ್ ಟೆನ್ನಿಸ್ ಸಂಘಗಳ ಆಡಳಿತ ಮಂಡಳಿಯಾಗಿದೆ.
* ಈ ಹಿಂದೆ 1926 ರಿಂದ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ಗಳ ಪಂದ್ಯಾವಳಿಗಳನ್ನೂ ನಡೆಸಲಾಗುತ್ತಿದೆ, ಮತ್ತೆ ಇದನ್ನು 1957 ರಿಂದ, ಇದನ್ನು ದ್ವೈವಾರ್ಷಿಕವಾಗಿ ನಡೆಸಲಾಗುತ್ತಿದೆ.

## ರಕ್ಷಣಾ ಕೈಗಾರಿಕಾ ಭದ್ರತೆಯಲ್ಲಿ JWG ಯನ್ನು ಸ್ಥಾಪಿಸಲು ಮುಂದಾದ ಭಾರತ ಯುಎಸ್



* 2021 ರ ಸೆಪ್ಟೆಂಬರ್. 27 ರಿಂದ ಅಕ್ಟೋಬರ್. 01 ರವರೆಗೆ ನವದೆಹಲಿಯಲ್ಲಿ ಭಾರತ ಮತ್ತು ಯುನೈಟೆಡ್ ಸ್ಟೇಟ್ಸ್ ದೇಶಗಳು ಕೈಗಾರಿಕಾ ಭದ್ರತಾ ಒಪ್ಪಂದದ ಶೃಂಗಸಭೆಯನ್ನು ನಡೆಸಲಾಯಿತು.
* ಪ್ರಸ್ತುತ ಉಭಯ ದೇಶಗಳ ರಕ್ಷಣಾ ಉದ್ಯಮಗಳ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ಈ ಶೃಂಗಸಭೆಯನ್ನು ಆಯೋಜಿಸಲಾಗಿದೆ, ಈ ಸಭೆಯನ್ನು ಭದ್ರತಾ ಪ್ರಾಧಿಕಾರಗಳು ವಹಿಸಿಕೊಂಡಿದ್ದವು.

* ಕೈಗಾರಿಕಾ ಭದ್ರತಾ ಒಪ್ಪಂದ (ISA): ಭಾರತ ಅಮೆರಿಕದ ಭಾಗವಾಗಿದೆ. ಮಿಲಿಟರಿ ಮಾಹಿತಿ ಒಪ್ಪಂದದ ಸಾಮಾನ್ಯ ಭದ್ರತೆ (GSOMIA)ಯಾಗಿದೆ. 2019 ರ ಡಿಸೆಂಬರ್ ನಲ್ಲಿ ಅಮೆರಿಕಾದ ವಾಷಿಂಗ್ಟನ್‌ನಲ್ಲಿ ಜರುಗಿದ ಎರಡನೇ 2+2 ಸಂವಾದದಲ್ಲಿ ಇದಕ್ಕೆ ಒಪ್ಪಿಗೆ ನೀಡಿ ಸಹಿ ಹಾಕಲಾಯಿತು.
* ಈ ಹಿಂದೆ 2002 ರಲ್ಲಿ ಭಾರತ ಮತ್ತು ಯುಎಸ್ ನಡುವೆ GSOMIA ಗೆ ಸಹಿ ಹಾಕಲಾಯಿತು, ಈ ಒಪ್ಪಂದವು ಗುಪ್ತಚರ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲು ಮಿಲಿಟರಿಗಳಿಗೆ ಅವಕಾಶ ನೀಡುತ್ತದೆ.

## ಜಿಐ(GI) ಟ್ಯಾಗ್ ಮಾನ್ಯತೆ ಪಡೆದ 'ವಾಡಾ ಕೋಲಂ ಅಕ್ಕಿ'



* ಪ್ರಸ್ತುತ ಭೌಗೋಳಿಕ ಸೂಚಿ(GI ಟ್ಯಾಗ್)ಯ ಮಾನ್ಯತೆಯನ್ನು ಪಡೆದ 'ಕೋಲಂ ಅಕ್ಕಿ', ಈ ಅಕ್ಕಿಯನ್ನು ಮಹಾರಾಷ್ಟ್ರ ರಾಜ್ಯದ ಪಾಲ್ಘರ್ ಜಿಲ್ಲೆಯ ವಾಡಾ ಪ್ರದೇಶದಲ್ಲಿ ಅತೀ ಹೆಚ್ಚಾಗಿ ಬೆಳೆಯುತ್ತಾರೆ.
* ಇದೀಗ ಈ ಅಕ್ಕಿಯು 'ವಾಡಾ ಕೋಲಂ ಅಕ್ಕಿ' ಎಂದೇ ಪ್ರಖ್ಯಾತಿ ಪಡೆದಿದೆ, ಹಾಗೂ ಈ ಅಕ್ಕಿಯನ್ನು 'ಝಿನಿ' ಅಥವಾ 'ಜ್ವಿನಿ ಅಕ್ಕಿ' ಎಂದು ಕರೆಯುತ್ತಾರೆ, ಎಂದು ಅಲ್ಲಿನ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಂಕುಶ್ ಮಾನೆ ಅವರು ಮಾಹಿತಿ ನೀಡಿದ್ದಾರೆ.
* ಸದ್ಯ ಸ್ಥಳೀಯ ಮಾರುಕಟ್ಟೆಯಲ್ಲಿ ಈ ಅಕ್ಕಿಯ ತಳಿಗೆ ಪ್ರತಿ ಒಂದು ಕೆ.ಜಿ ದರ 60 70 ರೂ. ವಿದೆ, ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತೀ ಹೆಚ್ಚಿನ ಬೇಡಿಕೆ ಇದೆ ಎನ್ನಲಾಗಿದೆ.
* ಮಹಾರಾಷ್ಟ್ರದ ರಾಜ್ಯದ ಪಾಲ್ಘರ್ ಜಿಲ್ಲೆಯ ವಾಡಾ ತಾಲ್ಲೂಕಿನ ಸುಮಾರು 180 ಗ್ರಾಮಗಳ 2,500 ರೈತರು ಈ ಅಕ್ಕಿಯನ್ನು ಬೆಳೆಯುವ ಕೃಷಿಯಲ್ಲಿ ತೊಡಗಿದ್ದಾರೆ ಎಂದು ತಿಳಿದು ಬಂದಿದೆ.

## ಉತ್ತರ ಪ್ರದೇಶ ಸರ್ಕಾರದ ಹೊಸ ಯೋಜನೆಗೆ ಕಂಗನಾ ರಣಾವತ್ ರಾಯಭಾರಿ



* ಪ್ರಸ್ತುತ ಉತ್ತರ ಪ್ರದೇಶ ರಾಜ್ಯ ಸರ್ಕಾರವು ಹೊಸ ಯೋಜನೆಯನ್ನು ತಂದಿದೆ ಅದುವೇ 'ಒಂದು ಜಿಲ್ಲೆ ಒಂದು ಉತ್ಪನ್ನ' ಈ ಯೋಜನೆಗೆ ಬಾಲಿವುಡ್ ನಟಿ ಕಂಗನಾ ರಣಾವತ್ ಅವರನ್ನು ರಾಯಭಾರಿಯಾಗಿ ಆಯ್ಕೆಮಾಡಿದ್ದಾರೆ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಈ ಮಾಹಿತಿಯನ್ನು ನೀಡಿದ್ದಾರೆ.
* ಈ 'ಒಂದು ಜಿಲ್ಲೆ ಒಂದು ಉತ್ಪನ್ನ' ಎಂಬ ಯೋಜನೆಯನ್ನು ಉತ್ತರ ಪ್ರದೇಶದ 75 ಜಿಲ್ಲೆಗಳಲ್ಲಿ ಸಾಂಪ್ರದಾಯಿಕ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದ್ದಾರೆ.

## ಜಗತ್ತಿನ ಅತಿ ದೊಡ್ಡ ರಾಷ್ಟ್ರಧ್ವಜ ಲೇಹ್ ನಲ್ಲಿ ಅನಾವರಣ



* ಪ್ರಸ್ತುತ ಮಹಾತ್ಮಾಗಾಂಧೀಜಿಯವರ 152 ನೇ ಜನ್ಮದಿನದ ಅಂಗವಾಗಿ ಲಡಾಖ್ ನ ಲೇಹ್ ನಲ್ಲಿ ಜಗತ್ತಿನ ಅತಿ ದೊಡ್ಡ ರಾಷ್ಟ್ರಧ್ವಜವನ್ನು ಅನಾವರಣಗೊಳಿಸಲಾಯಿತು.
* ಈ ರಾಷ್ಟ್ರಧ್ವಜವನ್ನು ಭಾರತೀಯ ಸೇನೆಯ 57 ಎಂಜಿನಿಯರ್ ರೆಜಿಮೆಂಟ್ ಸಿದ್ಧಪಡಿಸಿದೆ, ಇದನ್ನು ಲಡಾಕ್ ನ ಲೆಫ್ಟಿನೆಂಟ್ ಗವರ್ನರ್ ಆರ್.ಕೆ. ಮಾಥುರ್ ಅವರು ಅನಾವರಣಗೊಳಿಸಿದ್ದಾರೆ.
* ಪ್ರಸ್ತುತ ಭಾರತೀಯ ಈ ರಾಷ್ಟ್ರಧ್ವಜವು ಸುಮಾರು 225 ಅಡಿ ಉದ್ದ ಮತ್ತು 150 ಅಡಿ ಅಗಲ, ಅಷ್ಟೇ ಅಲ್ಲದೆ ಇದು 1 ಸಾವಿರ ಕೆ.ಜಿ. ತೂಕವನ್ನು ಹೊಂದಿದೆ.

## ರಾಷ್ಟ್ರೀಯ ಜಲಜೀವನ ಮಿಷನ್‌ಗೆ ಪ್ರಧಾನಿ ಮೋದಿ ಚಾಲನೆ



* ಪ್ರಧಾನಿ ಮೋದಿ ಅವರು ಈ ಹಿಂದೆ 2019 ರಲ್ಲಿ ಜಲಜೀವನ ಮಿಷನ್‌ಗೆ ಚಾಲನೆಯನ್ನು ನೀಡಿದ್ದರು, ಈ ಯೋಜನೆ ಅಡಿಯಲ್ಲಿ ಅಂದರೆ 2 ವರ್ಷಗಳಲ್ಲಿ 5 ಕೋಟಿ ಮನೆಗಳಿಗೆ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.
* ಸದ್ಯ ಸರಿ ಸುಮಾರು 1.25 ಲಕ್ಷ ಗ್ರಾಮಗಳ ಪ್ರತಿಯೊಂದು ಮನೆಯಲ್ಲಿಯೂ ಕೂಡ ಇದೀಗ ನಲ್ಲಿ ನೀರು ಲಭ್ಯವಾಗುತ್ತಿದೆ ಎಂದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.
* ಪ್ರಸ್ತುತ ಈ ಜಲಜೀವನ್ ಮಿಷನ್ ಎನ್ನುವುದು ಒಂದು ಗ್ರಾಮಕೇಂದ್ರಿತ ಯೋಜನೆಯಾಗಿದೆ, ಈ ಯೋಜನೆ ಅಡಿಯಲ್ಲಿ ಪ್ರತಿ ಗ್ರಾಮದ ಜನರಿಗೆ ನೀರು ಒದಗಿಸುವು ಗುರಿಯನ್ನು ಹೊಂದಿದೆ.
* ಪ್ರಧಾನಿ ಮೋದಿ ಅವರು ಈ ಜಲಜೀವನ ಯೋಜನೆ ಕುರಿತು ಮಾಹಿತಿಯನ್ನು ಒದಗಿಸಲು ಜಲಜೀವನ ಮಿಷನ್ ಮೊಬೈಲ್ ಆಯಪ್ ನ್ನು ಬಿಡುಗಡೆ ಗೊಳಿಸಿದ್ದಾರೆ.

## ಕರ್ನಾಟಕಕ್ಕೆ 'ಯಶಸ್ವಿ ಕೋವಿಡ್ 19 ನಿರ್ವಹಣೆಗಾಗಿ 'ರಾಜ್ಯ ವಿಭಾಗದ ಅತ್ಯುತ್ತಮ ಪ್ರಶಸ್ತಿ'



* ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಅಕ್ಟೋಬರ್. 02 ರಂದು 'ಕೋವಿಡ್ 19 ವಿರುದ್ಧ ಹೋರಾಡುತ್ತಿರುವ ಅತ್ಯುತ್ತಮ ರಾಜ್ಯ' (Best State Combating Covid 19) ವಿಭಾಗದ ಇಂಡಿಯಾ ಟುಡೇ ಹೆಲ್ತ್ ಗಿರಿ ಪ್ರಶಸ್ತಿ'ಗೆ ಕರ್ನಾಟಕ ರಾಜ್ಯ ಆಯ್ಕೆಯಾಗಿದೆ, ಈ ಪ್ರಶಸ್ತಿಯನ್ನು 'ದಿ ಇಂಡಿಯಾ ಟುಡೇ ಗ್ರೂಪ್ ಪ್ರಧಾನ ಮಾಡಿದೆ, ಈ ಪ್ರಶಸ್ತಿಯನ್ನು ರಾಜ್ಯ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಕೆ.ಸುಧಾಕರ್ ಅವರು ಈ ಪ್ರಶಸ್ತಿ ಸ್ವೀಕಾರ ಮಾಡಿದರು.
* ಕರ್ನಾಟಕ ರಾಜ್ಯವು ಈ ಹಿಂದೆ ಕಳೆದ ಒಂದೂವರೆ ವರ್ಷದಿಂದ ಕೋವಿಡ್ 19 ವಿರುದ್ಧ ಹೋರಾಟ ನಡೆಸುತ್ತಿದೆ, ಈ ಹಿನ್ನಲೆಯಿಂದಾಗಿ ರಾಜ್ಯಕ್ಕೆ ಪ್ರಶಸ್ತಿ ಲಭಿಸಿದೆ.
* ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು, ಕರ್ನಾಟಕ ರಾಜ್ಯ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದಾರೆ.

## ಪ್ರಪ್ರಥಮ ಬಾರಿಗೆ ಕತಾರ್ ನಲ್ಲಿ ಶಾಸಕಾಂಗ ಮಂಡಳಿ ಮತದಾನ



* ಇದೇ ಪ್ರಪ್ರಥಮ ಬಾರಿಗೆ ಕತಾರ್ ನಾಗರಿಕರು ಶಾಸಕಾಂಗ ಮಂಡಳಿ ಆಯ್ಕೆಗಾಗಿ ಮತದಾನವನ್ನು ನಡೆಸಿದರು.
* ಪ್ರಸ್ತುತ ಈ ಮೊದಲಿನಿಂದಲೂ ಕತಾರ್ ರಾಜನ ಆಳ್ವಿಕೆಯಲ್ಲಿತ್ತು.
* ಇದೀಗ ಕತಾರ್ 2022 ರ ವಿಶ್ವಕಪ್ ಫುಟ್ ಬಾಲ್ ಆತಿಥ್ಯವನ್ನು ವಹಿಸಿಕೊಂಡಿದೆ, ಇದರಿಂದಾಗಿ ರಾಜಪ್ರಭುತ್ವವನ್ನು ಹೊಂದಿರುವ ಕತಾರ್ ಇದೀಗ ಜಾಗತಿಕ ಮಟ್ಟದಲ್ಲಿನ ಪ್ರಜಾಪ್ರಭುತ್ವ ಹೊಂದಿರುವ ರಾಷ್ಟ್ರಗಳಿಂದ ಒತ್ತಡವನ್ನು ಎದುರಿಸುವ ಪರಿಸ್ಥಿತಿ ಉಂಟಾಗಿದೆ.
* ಪ್ರಸ್ತುತ ರಾಜಪ್ರಭುತ್ವ ವ್ಯವಸ್ಥೆಯನ್ನು ಸುಧಾರಿಸಲು ಭದ್ರತಾ ಮಂಡಳಿ ಈ ಮತದಾನದ ಕ್ರಮಗಳನ್ನು ಕೈಗೊಂಡಿದೆ.

## ಹೊಸ ಜಾತಿಯ ಕುರುಡು ಸಿಹಿನೀರಿನ ಈಲ್ ಮುಂಬೈನಲ್ಲಿ ಪತ್ತೆ



* ಹೊಸ ಜಾತಿಯ ಕುರುಡು ಸಿಹಿನೀರಿನ ಈಲ್ ಝೂಯೋಲೋಜಿಕಲ್ ಸರ್ವೇ ಆಫ್ ಇಂಡಿಯಾ (ZSI) ದ '4' ವಿಜ್ಞಾನಿಗಳಿಂದ ಪತ್ತೆ.
* ಪ್ರಸ್ತುತ ಈ ಈಲ್ ಜಾತಿಯನ್ನು ಮಹಾರಾಷ್ಟ್ರದ ಮುಂಬೈನ ಬಾವಿಯಿಂದ ಪತ್ತೆ ಹಚ್ಚಲಾಗಿದೆ, ಇದು ಕಂಡು ಬಂದಿರುವ ನಗರಕ್ಕೆ ಗೌರವ ಸಲ್ಲಿಸಲು ಜಾತಿಗಳಿಗೆ 'ರಕ್ತಮಿಚ್ಚಿ ಮುಂಬೈ' ಎಂದು ಹೆಸರಿಸಲಾಗಿದೆ, ಇದು ಭಾರತದ ರಕ್ತಮಿಚ್ಚಿ ಕುಲದಿಂದ ಹುಟ್ಟಿದ 5 ನೇ ಜಾತಿಯಾಗಿದೆ.
* ರಕ್ತಮಿಷ್ಟಿಗಳ ಇದು ಜೌಗು ಈಲ್‌ಗಳ ಕುಲವು ಭಾರತಕ್ಕೆ ಸ್ಥಳೀಯವಾಗಿದೆ, ಆದರೆ 3 ಪ್ರಭೇದಗಳು ಪಶ್ಚಿಮ ಘಟ್ಟಗಳಿಂದ ಕಂಡು ಬಂದರೆ, ಇನ್ನೊಂದು ಜಾತಿಯು ಈಶಾನ್ಯ ಭಾರತದಿಂದ ಕಂಡು ಬಂದಿದೆ, ಪ್ರಸ್ತುತ ಈ ಜಾತಿಗಳು ಭೂಗರ್ಭದಲ್ಲಿ ವಾಸಿಸುತ್ತವೆ.

## ಕಾಶ್ಮೀರ ವಾಲ್ನಟ್ಸ್ನ (walnuts)ನ ಮೊದಲ ಸರಕು ಫ್ಲ್ಯಾಗ್ ಮಾಡಲಾಗಿದೆ.



* ಪ್ರಸ್ತುತ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ 'ಒಂದು ಜಿಲ್ಲೆ ಒಂದು ಉತ್ಪನ್ನ' ಉಪಕ್ರಮದ ಅಡಿಯಲ್ಲಿ ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದ ಬುಡ್ಗಾಮ್ ಜಿಲ್ಲೆಯಿಂದ ಕಾಶ್ಮೀರಿ ವಾಲ್ನಟ್ಸ್ನ ನ ಮೊದಲ ಸರಕನ್ನು ಫ್ಲ್ಯಾಗ್ ಮಾಡಲಾಗಿದೆ.
* ಪ್ರಸ್ತುತ ಕಾಶ್ಮೀರಿ ವಾಲ್ನಟ್ಸ್ನ ನ 2,000 ಕೆಜಿ ತೂಕದ ಟ್ರಕ್ ನ್ನು ಜಮ್ಮು ಮತ್ತು ಕಾಶ್ಮೀರದ ಬುಡ್ಗಮ್ ಜಿಲ್ಲೆಯಿಂದ ಕರ್ನಾಟಕ ರಾಜ್ಯದ ಬೆಂಗಳೂರಿಗೆ ರವಾನಿಸಲಾಗಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಭಾರತದ ಶೇ. 90 ಅಡಿಕೆ ಉತ್ಪಾದನೆಯ ಕಾಶ್ಮೀರದಿಂದ ಆಗುತ್ತಿದೆ.
* ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ 'ಒಂದು ಜಿಲ್ಲೆ ಒಂದು ಉತ್ಪನ್ನ' ಅಡಿಯಲ್ಲಿ ಕಾಶ್ಮೀರ ವಾಲ್ನಟ್‌ಗಳ ದೊಡ್ಡ ಲಭ್ಯತೆಯನ್ನು ಹೊಂದಿದೆ ಆದರೂ ಈ ವಾಲ್ನಟ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.
* ಜಮ್ಮು ಮತ್ತು ಕಾಶ್ಮೀರದ ಬುಡ್‌ಗಾಂ ಜಿಲ್ಲೆಯಲ್ಲಿ ಈ ವಾಲ್ನಟ್ಸ್ನ (walnuts)ನ ಮೊದಲ ಸರಕು ಫ್ಲ್ಯಾಗ್ ಆಫ್ ಕಾರ್ಯಕ್ರಮಕ್ಕೆ ಒಂದು ದುಂಡುಮೇಜಿನ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ, ಹಾಗೂ ಈ ಸಮ್ಮೇಳನದಲ್ಲಿ ತೋಟಗಾರಿಕಾ ತಜ್ಞರು ಮತ್ತು ವ್ಯಾಪಾರ ಪ್ರತಿನಿಧಿಗಳು ಅದರದೇ ಆದ ಮಾರ್ಗಗಳನ್ನೂ ತಿಳಿಸಿದರು.

# 05-10-2021

## ಮೊದಲ ಬಾರಿಗೆ ಬಾಹ್ಯಾಕಾಶದಲ್ಲಿ ಸಿನಿಮಾ ಚಿತ್ರೀಕರಣಕ್ಕೆ ಅನುಮತಿ



* ಇದೇ ಮೊದಲ ಬಾರಿಗೆ ಬಾಹ್ಯಾಕಾಶದಲ್ಲಿ ಸಿನಿಮಾ ಚಿತ್ರೀಕರಣಕ್ಕೆ ರೋಸ್ಕೋಸ್ಮೋಸ್ ಅನುಮತಿ ನೀಡಿದೆ.
* ಪ್ರಸ್ತುತ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ನಟಿ ಯೂಲಿಯಾ ಪೆರೆಸಿಲ್ಡ್, ನಿರ್ದೇಶಕ ಕ್ಲಿಮ್ ಶಿಪೆಂಕೊ ಮತ್ತು ಗಗನಯಾತ್ರಿ ಆಂಟನ್ ಶಕಾಪ್ಲೆರೋವ್ ಅವರು ಸಿನಿಮಾ ಚಿತ್ರೀಕರಣಕ್ಕಾಗಿ ಪ್ರಯಾಣ ಬೆಳಸಲಿದ್ದಾರೆ ಎಂದು ರಷ್ಯಾದ ರಾಜ್ಯ ಬಾಹ್ಯಾಕಾಶ ನಿಗಮ ರೋಸ್ಕೋಸ್ಮೋಸ್ ಮಾಹಿತಿ ನೀಡಿದೆ.
* ಕಳೆದ ನವೆಂಬರ್‌ನಲ್ಲಿ ಬಾಹ್ಯಾಕಾಶದಲ್ಲಿ ಚಲನಚಿತ್ರದ ನಿರ್ಮಾಣದ ಯೋಜನೆಯನ್ನು ರೋಸ್ಕೋಸ್ಮೋಸ್ ಹಾಗೂ ರಷ್ಯಾದ ಚಾನೆಲ್ ಒನ್ ಅನಾವರಣಗೊಳಿಸಿತು.
* ಈ ಸಿನಿಮಾ ಚಿತ್ರೀಕರಣಕ್ಕಾಗಿ ಬಾಹ್ಯಾಕಾಶ ತೆರಳಲು ಸೊಯುಜ್ ಎಂಎಸ್ 19 ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಲಾಗುವುದು, ಮತ್ತೆ ಅದೇ ಸೋಯುಜ್ ಎಂಎಸ್ 18 ಮೂಲಕ ಭೂಮಿಗೆ ವಾಪಸಾಗಲಿದ್ದಾರೆ ಎಂದು ತಿಳಿದು ಬಂದಿದೆ.

## ಅಮೇರಿಕದ ಇಬ್ಬರು ವಿಜ್ಞಾನಿಗಳಿಗೆ ನೊಬೆಲ್ ಪ್ರಶಸ್ತಿ



* ಪ್ರಸ್ತುತ ಅಮೇರಿಕದ ವಿಜ್ಞಾನಿ ಹಾಗೂ ಸಂಶೋಧಕರಾಗಿರುವ ಡೇವಿಡ್ ಜೂಲಿಯಸ್ ಹಾಗೂ ಆರ್ಡೆಮ್ ಪಟಪೂಟಿಯನ್ ಅವರಿಗೆ ಈ ಬಾರಿ ಜಂಟಿಯಾಗಿ 2021 ರ ವೈದ್ಯಕೀಯ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ನೊಬೆಲ್ ಸಮಿತಿಯು ಮಾಹಿತಿಯನ್ನು ನೀಡಿದೆ.
* ಈ ಅಮೇರಿಕದ ವಿಜ್ಞಾನಿಗಳು ಚರ್ಮದಲ್ಲಿನ ಸ್ಪರ್ಶ ಹಾಗೂ ತಾಪಮಾನ ಗ್ರಾಹಕ ವ್ಯವಸ್ಥೆಯ ಬಗೆಗಿನ ಸಂಶೋಧನೆಗಳಿಗಾಗಿ ಇವರಿಗೆ ಈ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಸಮಿತಿ ತಿಳಿಸಿದೆ.
* ಪ್ರತಿಷ್ಠಿತ ಈ ನೊಬೆಲ್ ಪ್ರಶಸ್ತಿಯು ಚಿನ್ನದ ಪದಕ ಹಾಗೂ 10 ಮಿಲಿಯನ್ ಸ್ವೀಡಿಷ್ ಕ್ರೋನರ್ ಅಂದರೆ 8.50 ಕೋಟಿ ರೂ. ಮೊತ್ತದ ಹಣವನ್ನು ಹೊಂದಿರುತ್ತದೆ.

## ಜಪಾನ್ ದೇಶದ 100 ನೇ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ 'ಫುಮಿಯೋ ಕಿಶಿಡಾ'



* ಇತ್ತೀಚಿಗೆ ಜಪಾನ್ ದೇಶದ ಯೋಶಿಹಿದೆ ಸುಗಾ ಅವರ ರಾಜೀನಾಮೆ ಹಿನ್ನಲೆಯಿಂದಾಗಿ ಫುಮಿಯೋ ಕಿಶಿಡಾ ಅವರು ಜಪಾನ್ ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.
* ಪ್ರಸ್ತುತ ಫುಮಿಯೋ ಕಿಶಿಡಾ ಅವರು ಜಪಾನ್ ದೇಶದ 100 ನೇ ಪ್ರಧಾನಮಂತ್ರಿಯಾಗಿದ್ದಾರೆ, ಇವರಿಗೆ ಭಾರತೀಯ ಪ್ರಧಾನಿ ಮೋದಿ ಅವರು ಅಭಿನಂದನೆಗಳನ್ನೂ ತಿಳಿಸಿದ್ದಾರೆ.
* ನೂತನ ಪ್ರಧಾನಿ ಫುಮಿಯೋ ಕಿಶಿಡಾ ಅವರೊಂದಿಗೆ ಸೇರಿ ವಿಶೇಷ ಕಾರ್ಯತಂತ್ರ, ಜಾಗತಿಕ ಪಾಲುದಾರಿಕೆ, ಶಾಂತಿ ಬಲಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಸಿದ್ದವಾಗಿದ್ದೇನೆ ಎಂದು ಪ್ರಧಾನಿ ಮೋದಿ ಅವರು ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

## 12 ಹೊಸ ಪ್ರಭೇದದ ಹಲ್ಲಿಗಳು ಪಶ್ಚಿಮ ಘಟ್ಟಗಳಲ್ಲಿ ಪತ್ತೆ



* ಪ್ರಸ್ತುತ ಬೆಂಗಳೂರು ಮತ್ತು ಮುಂಬೈನ ಜೀವ ವಿಜ್ಞಾನ ತಜ್ಞರ ತಂಡವು ಸರಿ ಸುಮಾರು 12 ಜಾತಿಯ ಹಲ್ಲಿಗಳನ್ನು ಪಶ್ಚಿಮ ಘಟ್ಟಗಳಲ್ಲಿ ಪತ್ತೆ ಹಚ್ಚಿದ್ದಾರೆ.
* ಪಶ್ಚಿಮ ಘಟ್ಟಗಳಲ್ಲಿ ಪತ್ತೆಯಾಗಿರುವ ಹಲ್ಲಿಗಳು ಬಲಿಷ್ಠ, ಮಿಂಚಿನ ವೇಗದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವೇಗವಾಗಿ ಚಲಿಸುತ್ತವೆ, ಅಷ್ಟೇ ಅಲ್ಲದೆ ಪಶ್ಚಿಮ ಘಟ್ಟಗಳಲ್ಲಿ ಇನ್ನೂ ಸುಮಾರು 18 ಜಾತಿಯ ಹಲ್ಲಿಗಳು ಇರಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
* ಈ ಹಿಂದೆ 2009 ರಿಂದ 2014 ರವರೆಗೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಅಧೀನದಲ್ಲಿರುವ ಸೆಂಟರ್ ಫಾರ್ ಎಕಾಲಜಿಕಲ್ ಸೈನ್ಸಸ್, ನ್ಯಾಶನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸಸ್, ಹಾಗೂ ಮುಂಬೈನ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಸಂಸ್ಥೆಯ ತಜ್ಞರ ತಂಡವು ಸಂಶೋಧನೆಯನ್ನು ನಡೆಸಿ ಈ ಹಲ್ಲಿಯ ಪ್ರಭೇದಗಳನ್ನು ಪತ್ತೆ ಮಾಡಿದ್ದಾರೆ.
* ಈ ಹಲ್ಲಿಯ ಪ್ರಭೇದಗಳು ಪಶ್ಚಿಮ ಹಾಗೂ ಪೂರ್ವ ಘಟ್ಟಗಳು, ಈಶಾನ್ಯ ವಲಯ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಕಂಡುಬರುತ್ತವೆ.
* ಸಂಶೋಧಕರು ಹೊಸದಾಗಿ ಪತ್ತೆಯಾಗಿರುವ 12 ಪ್ರಭೇದಗಳ ಹಲ್ಲಿಗಳಿಗೆ ಸಿನೆಮಾಸ್ಪಿಸ್ ಜಾಕೇಲಿ ಅಥವಾ ಜಾಕೀಸ್ ಡೇ ಗಿಕೋ ಎಂದು ಹೆಸರಿಟ್ಟಿದ್ದಾರೆ.

## 26 ಸಾವಿರ ಕೋಟಿಗೆ ಎಸ್‌ಬಿ ಎನರ್ಜಿ ಇಂಡಿಯಾ ಕಂಪನಿ ಇದೀಗ ಅದಾನಿ ಗ್ರೋಪ್ ಗೆ




* ಪ್ರಸ್ತುತ ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಕಂಪನಿಯು 26 ಸಾವಿರ ಕೋಟಿ ರೂ.ಗೆ ಎಸ್‌ಬಿ ಎನರ್ಜಿ ಇಂಡಿಯಾ ಕಂಪನಿಯನ್ನು ತನ್ನ ಅಧೀನಕ್ಕೆ ಪಡೆದುಕೊಂಡಿದೆ.
* ಪ್ರಸ್ತುತ ಎಸ್‌ಬಿ ಎನರ್ಜಿ ಹೋಲ್ಡಿಂಗ್ಸ್ ಲಿಮಿಟೆಡ್ ಕಂಪನಿಯನ್ನು, ಜಗತ್ತಿನ ಅತಿದೊಡ್ಡ ಸೌರ ವಿದ್ಯುತ್ ಅಭಿವೃದ್ಧಿ ಕಂಪನಿಯಾಗಿರುವ ಎಜಿಇಎಲ್ ಸ್ವಾಧೀನಪಡಿಸಿಕೊಂಡಿದೆ.
* ಈ ಎಸ್‌ಬಿ ಎನರ್ಜಿ ಇಂಡಿಯಾ ಕಂಪನಿಯು ಈ ಹಿಂದೆ ಇದು ಜಪಾನ್ ಮೂಲದ ಸಾಫ್ಟ್‌ಬ್ಯಾಂಕ್ ಗ್ರೂಪ್ ಕಾರ್ಪ್ ಮತ್ತು ಭಾರ್ತಿ ಗ್ರೂಪ್‌ಗಳ 80:20 ಪಾಲುದಾರಿಕೆಯ ಕಂಪನಿ ಹೊಂದಿತ್ತು.

## ಜೂನಿಯರ್ ವಿಶ್ವ ಶೂಟಿಂಗ್ ಚಾಂಪಿಯನ್‌ಶಿಪ್ ನಲ್ಲಿ ಅಗ್ರಸ್ಥಾನ ಪಡೆದ ಭಾರತ



* ಜೂನಿಯರ್ ವಿಶ್ವ ಶೂಟಿಂಗ್ ಚಾಂಪಿಯನ್‌ಶಿಪ್ ನಲ್ಲಿ ಭಾರತವು ಅಗ್ರಸ್ಥಾನವನ್ನು ಪಡೆದುಕೊಂಡಿದೆ.
* ಪ್ರಸ್ತುತ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಈ 10 ಮೀ. ಏರ್ ಪಿಸ್ತೂಲ್ ವಿಭಾಗದ ಮಿಶ್ರ ಸ್ಪರ್ಧೆಯಲ್ಲಿ ಚಿನ್ನವನ್ನು ಜಯಿಸಿದೆ.
* ಸದ್ಯ ಭಾರತವು ಒಟ್ಟಾರೆ 6 ಚಿನ್ನ, 6 ಬೆಳ್ಳಿ ಮತ್ತು 2 ಕಂಚಿನ ಪದಕಗಳನ್ನೂ ಜಯಿಸಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ.
* ಅಮೇರಿಕ ದೇಶವು 4 ಚಿನ್ನ, 4 ಬೆಳ್ಳಿ ಹಾಗೂ 2 ಕಂಚು ಜಯಿಸಿ ದ್ವಿತೀಯ ಸ್ಥಾನ ಪಡೆದಿದೆ.
* ಪ್ರಸ್ತುತ ಮನು ಭಾಕರ್ ಅವರು ಭಾರತಕ್ಕೆ ಎರಡು ಚಿನ್ನದ ಪದಕಗಳನ್ನು ಜಯಿಸಿದ್ದಾರೆ.
* ಪ್ರಸ್ತುತ ಪುರುಷರ ಏರ್ ಪಿಸ್ತೂಲ್ ತಂಡ ನವೀನ್, ಸರಬ್‌ಜೋತ್ ಸಿಂಗ್ ಹಾಗೂ ಶಿವ ನರ್ವಾಲ್ ರನ್ನು ಒಳಗೊಂಡು ಚಿನ್ನವನ್ನು ಜಯಿಸಿದೆ.
* ಇದೇ 10 ಮೀ. ಏರ್ ರೈಫಲ್ ಮಿಶ್ರ ಸ್ಪರ್ಧೆಯಲ್ಲಿ ಆತ್ಮಿಕಾ ಗುಪ್ತಾ ರಾಜ್‌ಪ್ರೀತ್ ಸಿಂಗ್ ಜೋಡಿಯು ಬೆಳ್ಳಿ ಪದಕವನ್ನು ಜಯಿಸಿವೆ.

## 2021 ರ ಆಗಸ್ಟ್ 142 ವರ್ಷಗಳಲ್ಲಿ 6 ನೇ ಅತ್ಯಂತ ಬಿಸಿ ತಿಂಗಳು



* ಪ್ರಸ್ತುತ 2021 ರ ಆಗಸ್ಟ್ ಭೂಮಿಯ ಮೇಲಿನ 6 ನೇ ಅತ್ಯಂತ ಬಿಸಿ ತಿಂಗಳು ಎಂದು NOAA (ನ್ಯಾಷನಲ್ ಸೆಂಟರ್ ಫಾರ್ ಎನ್ವಿರಾನ್ಮೆಂಟಲ್ ಇನ್ಫಾರ್ಮೇಶನ್ ಅನಾಲಿಸಿಸ್)ಯ ರಾಷ್ಟ್ರೀಯ ಪರಿಸರ ಮಾಹಿತಿ ವಿಶ್ಲೇಷಣೆಯ ತಿಳಿಸಿದೆ.
* ಸುಮಾರು 142 ವರ್ಷಗಳಲ್ಲಿ 2021 ರ ಆಗಸ್ಟ್ 6 ನೇ ಬೆಚ್ಚಗಿನ ತಿಂಗಳು ಎಂದಿದ್ದಾರೆ, ವಿಜ್ಞಾನಿಗಳು ಸರಾಸರಿ ಜಾಗತಿಕ ಭೂಮಿ ಹಾಗೂ ಸಾಗರ ಮೇಲ್ಮೈ ತಾಪಮಾನವು 20ನೇ ಶತಮಾನದ ಸರಾಸರಿಗಿಂತ 1.62 ಡಿಗ್ರಿ ಹೆಚ್ಚಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಏಷ್ಯಾ ತನ್ನ 2 ನೇ ಬೆಚ್ಚಗಿನ ಆಗಸ್ಟ್ ತಿಂಗಳನ್ನು ಹೊಂದಿತ್ತು, ಹಾಗೂ ಆಫ್ರಿಕಾ 3 ನೇ ಆಗಸ್ಟ್ ತಿಂಗಳನ್ನು ಹೊಂದಿತ್ತು.
* ಪ್ರಸ್ತುತ ಭೂಮಿಯ ಮೇಲಿನ 10 ಬೆಚ್ಚಗಿನ ಆಗಸ್ಟ್‌ಗಳಲ್ಲಿ 2009 ರಿಂದ 9 ತಿಂಗಳು ಸಂಭವಿಸಿವೆ.
* 2020 ನೇ ವರ್ಷವು ಉತ್ತರ ಗೋಳಾರ್ಧದಲ್ಲಿ ಅತ್ಯಂತ ಬೇಸಿಗೆಯನ್ನು ಕಂಡಿದೆ, ಜೂನ್ ಆಗಸ್ಟ್ ನ್ನು ಉತ್ತರ ಗೋಳಾರ್ಧದಲ್ಲಿ ಹವಾಮಾನ ಬೇಸಿಗೆ ಎನ್ನುವರು.
* ಭೂಮಿಯ ಮೇಲೆ ದಾಖಲಾದ ಜನವರಿ ಆಗಸ್ಟ್ 6 ನೇ ಬೆಚ್ಚಗಿನ ಅವಧಿಯಾಗಿದೆ, ಇದನ್ನು 20 ನೇ ಶತಮಾನಕ್ಕೆ ಹೋಲಿಸಿದರೆ ಈ ತಾಪಮಾನವು 1.48 ಡಿಗ್ರಿ ಯಾಗಿದೆ.
* ರಾಷ್ಟ್ರೀಯ ಸಾಗರ ಮತ್ತು ವಾಯುಮಂಡಲದ ಆಡಳಿತ (NOAA) ಇದೊಂದು ಅಮೇರಿಕನ್ ವೈಜ್ಞಾನಿಕ ಮತ್ತು ನಿಯಂತ್ರಕ ಏಜೆನ್ಸಿಯಾಗಿದೆ, ಇದು 'ಯುನೈಟೆಡ್ ಸ್ಟೇಟ್ಸ್ ಡಿಪಾರ್ಟ್ಮೆಂಟ್ ಆಫ್ ಕಾಮರ್ಸ್' ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ, ಇದು ಹವಾಮಾನ, ಸಾಗರ ಹಾಗೂ ವಾತಾವರಣದ ಪರಿಸ್ಥಿತಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ.

## ಕಾಮಧೇನು ದೀಪಾವಳಿ 2021 ಅಭಿಯಾನ ಪ್ರಾರಂಭ



* ಪ್ರಸ್ತುತ ಕಾಮಧೇನು ದೀಪಾವಳಿ 2021 ಅಭಿಯಾನಕ್ಕೆ ಮಾಜಿ ಕ್ಯಾಬಿನೆಟ್ ಮಂತ್ರಿ ಮತ್ತು ರಾಷ್ಟ್ರೀಯ ಮಾಜಿ ಅಧ್ಯಕ್ಷ ಕಾಮಧೇನು ಆಯೋಗ್ ಚಾಲನೆ ನೀಡಿದರು.
* ಈ ಅಭಿಯಾನವು ಹಸುವಿನ ಸಗಣಿಯಿಂದ ಸುಮಾರು 100 ಕೋಟಿ ದೀಪಕ್ ದೀಪಗಳು ಹಾಗೂ ಲಕ್ಷ್ಮಿ ಗಣೇಶ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡಲು ಆರಂಭಿಸಲಾಗಿದೆ, ಅಷ್ಟೇ ಅಲ್ಲದೇ ಹಸುವಿನಿಂದ ಪಂಚಗವ್ಯವನ್ನು ಬಳಸಿಕೊಂಡು ದೀಪಕ್, ಕ್ಯಾಂಡಲ್ಸ್, ಲ್ಯಾಂಪ್ಸ್, ಹವನಸಮಗ್ರಿ, ಸಾಂಬ್ರಾಣಿ ಕಪ್, ಹಾರ್ಡ್ ಬೋರ್ಡ್, ಧೂಪಬತ್ತಿ, ಧೂಪದ್ರವ್ಯಗಳು, ವಾಲ್ ಪೀಸ್, ಲಕ್ಷ್ಮಿ ಗಣೇಶ್ ಮೂರ್ತಿ ಹೀಗೆ 300 ವಸ್ತುಗಳನ್ನು ಸಿದ್ದ ಪಡಿಸಲಾಗುತ್ತಿದೆ.
* ರಾಷ್ಟ್ರೀಯ ಕಾಮಧೇನು ಆಯೋಗವು: ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದೆ, ಹಸುಗಳ ರಕ್ಷಣೆಗಾಗಿ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ, ಈ ಸಂಸ್ಥೆಯು ರಾಷ್ಟ್ರೀಯ ಗೋಕುಲ್ ಮಿಷನ್ ನ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತದೆ.

* ಸರ್ಕಾರವು 2014 ರ ಡಿಸೆಂಬರ್‌ನಲ್ಲಿ ಸ್ಥಳೀಯ ಗೋವಿನ ತಳಿಗಳನ್ನು ಅಭಿವೃದ್ಧಿಪಡಿಸುವ ಮತ್ತು ಸಂರಕ್ಷಿಸುವ ಉದ್ದೇಶದಿಂದ ರಾಷ್ಟ್ರೀಯ ಗೋಕುಲ್ ಮಿಷನ್ ನ್ನು ಆರಂಭಿಸಿದೆ.

## 2021 ರ ವನ್ಯಜೀವಿ ವಾರ ಶ್ರೀನಗರದ ಶೇರ್ ಇ ಕಾಶ್ಮೀರ ಅಂತರಾಷ್ಟ್ರೀಯ ಕನ್ವೆನ್ಶನ್ ಸೆಂಟರ್ ನಲ್ಲಿ ಉದ್ಘಾಟಣೆ




* ಪ್ರಸ್ತುತ 2021 ರ ವನ್ಯಜೀವಿ ವಾರವನ್ನು ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು 2021 ರ ಅಕ್ಟೋಬರ್. 2 ರಂದು ಶ್ರೀನಗರದ ಶೇರ್ ಇ ಕಾಶ್ಮೀರ ಅಂತರಾಷ್ಟ್ರೀಯ ಕನ್ವೆನ್ಶನ್ ಸೆಂಟರ್'ನಲ್ಲಿ ಉದ್ಘಾಟಿಸಿದರು.
* ಪ್ರಸ್ತುತ ಇದೇ ಅಕ್ಟೋಬರ್ 2 ರಿಂದ ಅಕ್ಟೋಬರ್ 8 ರವರೆಗೆ ಈ ವನ್ಯಜೀವಿ ವಾರವನ್ನು ಆಚರಿಸಲಾಗುತ್ತದೆ.
* ಈ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಸರ್ಕಾರವು ದಚಿಗಮ್ ರಾಷ್ಟ್ರೀಯ ಉದ್ಯಾನವನ್ನು ಸಾರ್ವಜನಿಕರಿಗಾಗಿ ಪ್ರವೇಶವನ್ನು ನೀಡಿತು.
* ಈ ಮೊದಲು 1957 ರಲ್ಲಿ ಮೊದಲ ವನ್ಯಜೀವಿ ವಾರವನ್ನು ಆಚರಣೆ ಮಾಡಲಾಯಿತು, ಮತ್ತೇ ಭಾರತೀಯ ವನ್ಯಜೀವಿ ಮಂಡಳಿಯು 1952 ರಲ್ಲಿ ಭಾರತದಾದ್ಯಂತ ವನ್ಯಜೀವಿಗಳನ್ನು ರಕ್ಷಿಸುವ ಬಗೆಗಿನ ವಿಷ್ಯಯದ ಬಗ್ಗೆ ಜಾಗೃತಿ ಮೂಡಿಸಲು ಆರಂಬಿಸಿತು.
* 2021 ರ ವನ್ಯಜೀವಿ ವಾರದ ಧ್ಯೆಯೇ ವ್ಯಾಕ: 'ಅರಣ್ಯಗಳು ಮತ್ತು ಜೀವನೋಪಾಯಗಳು ಹಾಗೂ ಜನರು ಮತ್ತು ಗ್ರಹಗಳನ್ನು ಉಳಿಸಿಕೊಳ್ಳುವುದು' ಎಂಬ ವಿಷಯದ ಅಡಿಯಲ್ಲಿ ಆಚರಿಸಲಾಗಿದೆ.

## ಲೋಕಪ್ರಿಯ ಗೋಪಿನಾಥ್ ಬೋರ್ಡೋಲಾಯ್ ಪ್ರಶಸ್ತಿ



* ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು 2021ರ ರಾಷ್ಟ್ರೀಯ ಏಕೀಕರಣ ಮತ್ತು ರಾಷ್ಟ್ರೀಯ ಕೊಡುಗೆಯ 'ಲೋಕಪ್ರಿಯ ಗೋಪಿನಾಥ್ ಬೋರ್ಡೋಲಾಯ್ ಪ್ರಶಸ್ತಿ'ಯನ್ನು ಪ್ರಧಾನ ಮಾಡಿದರು.
* ಪ್ರಸ್ತುತ ಅಸ್ಸಾಂ ನ ಕಸ್ತೂರ್ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನ ಬರಹಗಾರ ನಿರೋದ್ ಕುಮಾರ್ ಬರುವಾ ಅವರಿಗೆ 'ಶಿಲ್ಲಾಂಗ್ ಚೇಂಬರ್ ಕಾಯಿರ್'ಗೆ ಪ್ರಶಸ್ತಿಗಳನ್ನು ನೀಡಲಾಯಿತು, ಈ ಪ್ರಶಸ್ತಿಯು ಅಸ್ಸಾಂನ ಅತಿದೊಡ್ಡ ನಾಗರಿಕ ಪ್ರಶಸ್ತಿಯಾಗಿದೆ, ರಾಷ್ಟ್ರಗಳ ಏಕೀಕರಣಕ್ಕಾಗಿ ಅವರ ಅನುಕರಣೀಯ ಕೊಡುಗೆಗಳಿಗೆ ಗೌರವ ನೀಡಲು ವಿವಿಧ ಸಂಸ್ಥೆ ಮತ್ತು ವ್ಯಕ್ತಿಗಳಿಗೆ ನೀಡಲಾಗುತ್ತದೆ.
* ಈ ಪ್ರಶಸ್ತಿಯು 5 ಲಕ್ಷ ನಗದು ಹಾಗೂ ಪ್ರಮಾಣಪತ್ರವನ್ನು ಹೊಂದಿರುತ್ತದೆ.
* ಈ ಪ್ರಶಸ್ತಿಯುನ್ನು ಅಸ್ಸಾಂನ ಮೊದಲ ಮುಖ್ಯಮಂತ್ರಿ ಲೋಕಪ್ರಿಯ ಗೋಪಿನಾಥ್ ಬೋರ್ಡೋಲಾಯ್ ಅವರ ಹೆಸರಿನಲ್ಲಿ ಪ್ರಧಾನ ಮಾಡಲಾಗುತ್ತದೆ, ಹಾಗೂ ಮುಖ್ಯಮಂತ್ರಿ ಲೋಕಪ್ರಿಯ ಅವರಿಗೆ 1999 ರಲ್ಲಿ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಲಾಗಿದೆ.
* 2001 ರಲ್ಲಿ ಶಿಲ್ಲಾಂಗ್ ಚೇಂಬರ್ ಕಾಯಿರ್'ನ್ನು ಸ್ಥಾಪಿಸಲಾಗಿದೆ, ಇದನ್ನು ಮಾರ್ಗದರ್ಶಕ ಮತ್ತು ಗಾಯಕರಾದ ನೀಲ್ ನಾಂಗ್ಕಿನ್ರಿಹ್ ಅವರು ಸ್ಥಾಪನೆ ಮಾಡಿದ್ದಾರೆ.
* ಮಹಾತ್ಮ ಗಾಂಧಿ ಅಸ್ಸಾಂಗೆ ಭೇಟಿ ನೀಡಿದ ಸಂಧರ್ಭದಲ್ಲಿ ಅಂದರೆ 1946 ಜನವರಿ. 9 ರಂದು ಕಸ್ತೂರ್ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ ನ್ನು ಸ್ಥಾಪಿಸಲಾಗಿದೆ, ಇದೀಗ ಈ ಟ್ರಸ್ಟ ಗ್ರಾಮೀಣ ಮಹಿಳೆ ಮತ್ತು ಮಕ್ಕಳಿಗಾಗಿ ಕಾರ್ಯ ನಿರ್ವಹಿಸುತ್ತಿದೆ.

# 06-10-2021

## ಫ್ಯೂಮಿಯೊ ಕಿಶಿದಾ ಜೋ ಬೈಡನ್ ಅವರು ಚೀನಾ, ಉತ್ತರ ಕೊರಿಯಾ ವಿರುದ್ಧ ಜಂಟಿ ಹೋರಾಟಕ್ಕೆ ಒಪ್ಪಿಗೆ ನೀಡಿದ್ದಾರೆ



* ಪ್ರಸ್ತುತ ಚೀನಾ ಹಾಗೂ ಉತ್ತರ ಕೊರಿಯಾ ದೇಶಗಳ ಸವಾಲುಗಳನ್ನು ಎದುರಿಸಲು ಅಮೇರಿಕಾ ಅಧ್ಯಕ ಜೋ ಬಿಡೆನ್, ಜಪಾನ್ ದೇಶದೊಂದಿಗಿನ ಮೈತ್ರಿಯನ್ನು ಬಲಪಡಿಸಲು, ಹಾಗೂ ರಕ್ಷಣೆಯ ಭರವಸೆಯನ್ನು ಈಡೇರಿಸುವದಾಗಿ ತಿಳಿಸಿದ್ದಾರೆ ಎಂದು ಜಪಾನ್'ನ ನೂತನ ಪ್ರಧಾನಿ ಫ್ಯೂಮಿಯೊ ಕಿಶಿದಾ ಮಾಹಿತಿ ನೀಡಿದ್ದಾರೆ.
* ಪ್ರಸ್ತುತ ಜಪಾನ್ ದೇಶದ ನಿಯಂತ್ರಣದಲ್ಲಿರುವ ಪೂರ್ವ ಚೀನಾ ಸಮುದ್ರ ದ್ವೀಪವಾಗಿರುವ ಸೆಂಕಾಕುವನ್ನು ರಕ್ಷಿಸಲು ಅಮೇರಿಕಾ ದೇಶವು ಸಿದ್ದವಾಗಿದೆ ಜೋ ಬೈಡನ್ ಭರವಸೆ ನೀಡಿದ್ದಾರೆ.
* ಇದೀಗ ಅಮೇರಿಕಾ ದೇಶವು ಸೆಕಾಂಕು ದ್ವೀಪ ಹಾಗೂ ಜಪಾನ್ ರಕ್ಷಣೆಗೆ ಸಿದ್ದವಾಗಿದೆ ಎಂದು ಬೈಡನ್ ತಿಳಿಸಿದ್ದಾರೆ.
* ಚೀನಾ ಹಾಗೂ ಉತ್ತರ ಕೊರಿಯಾ ರಾಷ್ಟ್ರಗಳು ನೀಡುತ್ತಿರುವ ಸವಾಲುಗಳನ್ನು ಅಮೇರಿಕಾ ಮತ್ತು ಜಪಾನ್ ದೇಶಗಳು ಜಂಟಿಯಾಗಿ ನಿಭಾಯಿಸುವುದಾಗಿ ತಿಳಿಸಿವೆ.

## ಪ್ರಧಾನಿ ಮೋದಿಯಿಂದ ಉತ್ತರ ಪ್ರದೇಶದ 75 ಸಾವಿರ ಫಲಾನುಭವಿಗಳಿಗೆ ಮನೆ ಹಸ್ತಾಂತರ



* ಪ್ರಸ್ತುತ ಪ್ರಧಾನಿ ಮೋದಿ ಅವರು ವರ್ಚುವಲ್ ಸಭೆಯ ಮೂಲಕ ಉತ್ತರ ಪ್ರದೇಶದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ(PMAY U) ಯೋಜನೆ ಅಡಿಯಲ್ಲಿ ನಿರ್ಮಾಣಗೊಂಡ 75 ಸಾವಿರ ಮನೆಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಿದರು.
* ಪ್ರಧಾನಿ ಮೋದಿ ಅವರು ಉತ್ತರ ಪ್ರದೇಶದಲ್ಲಿ ನಡೆದ 'ಅಜಾದಿ @75 ನ್ಯೂ ಅರ್ಬನ್ ಇಂಡಿಯಾ ಎಂಬ ಟ್ರಾನ್ಸ್‌ಫಾರ್ಮಿಂಗ್ ಅರ್ಬನ್ ಲ್ಯಾಂಡ್‌ಸ್ಕೇಪ್ ಬಗೆಗಿನ ವಿಚಾರ ಸಂಕೀರ್ಣ ಹಾಗೂ ಎಕ್ಸ್‌ಪೋ ಕಾರ್ಯಕ್ರಮವನ್ನು ಉದ್ಘಾಟಿಸಿದರು.

## ಹರ್ಷವರ್ಧನ್ ಶೃಂಗ್ಲಾ ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸೆ ನಡುವೆ ದ್ವಿಪಕ್ಷೀಯ ಮಾತುಕತೆ



* ಭಾರತೀಯ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರು ಇತ್ತೀಚಿಗೆ ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರೊಂದಿಗೆ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಮಾತುಕತೆಗಳನ್ನು ಚರ್ಚಿಸಿದರು.
* ಹರ್ಷವರ್ಧನ್ ಶೃಂಗ್ಲಾ ಅವರು 4 ದಿನಗಳ ಪ್ರವಾಸಕ್ಕಾಗಿ ಶ್ರೀಲಂಕಾಕ್ಕೆ ಪ್ರಯಾಣ ಬೆಳೆಸಿದ್ದರು ಆ ಸಂಧರ್ಭದಲ್ಲಿ ದ್ವೀಪರಾಷ್ಟ್ರದ ನಾಯಕ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರ ಜೊತೆಗೆ ಉಭಯ ದೇಶಗಳ ನಡುವಿನ ಸ್ನೇಹ ಹಾಗೂ ಸಹಕಾರ ಸಂಬಂಧಗಳ ಬಗ್ಗೆ ಮಾತುಕತೆ ನಡೆಸಿದರು.
* ಎರಡು ದೇಶಗಳ ಚರ್ಚೆಯ ಸಂಧರ್ಭದಲ್ಲಿ ಈ ಹಿಂದೆ 1987 ರಲ್ಲಿ ನಡೆದ ಭಾರತ ಲಂಕಾ ಒಪ್ಪಂದದ ಪ್ರಕಾರ 13 ನೇ ತಿದ್ದುಪಡಿಯು ಅನುಸಾರ ತಮಿಳು ಸಮುದಾಯದವರಿಗೆ ಅಧಿಕಾರ ಹಂಚುವ ವಿಷಯವನ್ನು ಎತ್ತಿ ತೋರಿಸಿದರು ಹಾಗೂ ಇದನ್ನು ಜಾರಿಗೆ ತರಲು ಭಾರತ ಪ್ರಯತ್ನ ಪಡುತ್ತಿದೆ ಎಂದು ತಿಳಿಸಿದರು.

## '3' ವಿಜ್ಞಾನಿಗಳಿಗೆ 'ಭೌತವಿಜ್ಞಾನ ನೊಬೆಲ್' ಪ್ರಶಸ್ತಿ



* ಪ್ರಸ್ತುತ 2021 ನೇ ಸಾಲಿನ ಭೌತವಿಜ್ಞಾನ ನೊಬೆಲ್ ಪ್ರಶಸ್ತಿಯ 3 ವಿಜ್ಞಾನಿಗಳಾದ ಸುಕುರೊ ಮನಬೆ, ಕ್ಲಾಸ್ ಹ್ಯಾಸಲ್‌ಮನ್, ಮತ್ತು ಜಾರ್ಜಿಯೊ ಪಾರಿಸಿ ಎನ್ನುವವರಿಗೆ ಜಂಟಿಯಾಗಿ ಈ ಪ್ರಶಸ್ತಿಯನ್ನು ಘೋಷಣೆ ಮಾಡಲಾಗಿದೆ.
* ಈ ಭೌತವಿಜ್ಞಾನ ನೊಬೆಲ್ ಪ್ರಶಸ್ತಿಯನ್ನು ವಿಶ್ವದ ಭೌತಿಕ ರಚನೆಯ ವಿಶ್ಲೇಷಣೆ ಮತ್ತು ಹವಾಮಾನ ಬದಲಾವಣೆಗಳ ಬಗೆಗೆ ಕೈಗೊಂಡ ಸಂಶೋಧನೆಯನ್ನು ಗಮನದಲ್ಲಿಟ್ಟು ಈ ಪ್ರಶಸ್ತಿಯನ್ನು ಜಂಟಿಯಾಗಿ ವಿಜ್ಞಾನಿಗಳಿಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.
* ಈ ಪ್ರಶಸ್ತಿಯ ಬಹುಮಾನದ ಮೊತ್ತ 8.56 ಕೋಟಿ ರೂ.
* ಪ್ರಸ್ತುತ ಸುಕುರೊ ಮನಬೆ ಅವರು ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್ ಮಟ್ಟದಲ್ಲಿನ ಏರಿಕೆಗೆ ತಕ್ಕಂತೆ, ಭೂಮಿಯ ಮೇಲ್ಮೈಯ ಉಷ್ಣಾಂಶದಲ್ಲಿ ಯಾವ ರೀತಿಯಲ್ಲಿ ಏರಿಕೆಯಾಗುತ್ತದೆ ಎನ್ನುಬುವದನ್ನು ವಿವರಿಸಿದ್ದಾರೆ.
* ಕ್ಲಾಸ್ ಹ್ಯಾಸಲ್‌ಮನ್ ಅವರು ವಾತಾವರಣದಲ್ಲಿ ಸಾಕಷ್ಟು ಏರಿಳಿತಗಳು ಕಂಡರೂ, ಹವಾಮಾನ ಮಾದರಿಗಳು ವಿಶ್ವಾಸಾರ್ಹವಾಗಿವೆ ಎಂಬುವವದನ್ನು ತಿಳಿಸಿದ್ದಾರೆ.
* ಜಾರ್ಜಿಯೊ ಪಾರಿಸಿ ಅವರು ಗಣಿತ, ಜೀವವಿಜ್ಞಾನ ಮತ್ತು ಮಷಿನ್ ಲರ್ನಿಂಗ್ ನ ಸೂತ್ರಗಳನ್ನು ಬಳಕೆಮಾಡಿಕೊಂಡು ವಸ್ತುಗಳ ಸಂಕೀರ್ಣ ಸಂರಚನೆಯನ್ನು ವಿವರಿಸಿದ್ದಾರೆ, ಎಂದು ನೊಬೆಲ್ ಪ್ರಶಸ್ತಿ ಸಮಿತಿಯ ಮಾಹಿತಿ ನೀಡಿದೆ.

## ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ನಲ್ಲಿ ಎರಡು ಕಂಚು ಗೆದ್ದ ಭಾರತ



* ಪ್ರಸ್ತುತ ಭಾರತವು ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್'ನಲ್ಲಿ ಎರಡು ಕಂಚಿನ ಪದಕಗಳನ್ನೂ ಜಯಿಸಿದೆ.
* ಈ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಡಬಲ್ಸ್ ವಿಭಾಗಗಳಲ್ಲಿ ಭಾರತ ಹರ್ಮೀತ್ ದೇಸಾಯಿ ಮಾನವ್ ಥಕ್ಕರ್ ಹಾಗೂ ಶರತ್ ಕಮಲ್ ಜಿ.ಸತ್ಯನ್ ಜೋಡಿಗಳು ಕಂಚಿನ ಪದಕವನ್ನು ಜಯಿಸಿವೆ.
* ಈ ಟೂರ್ನಿಯ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಹರ್ಮೀತ್ ಮಾನವ್ ಜೋಡಿಯ ದಕ್ಷಿಣ ಕೊರಿಯಾ ಆಟಗಾರರಾದ ವೂಜಿನ್ ಜಾಂಗ್ ಮತ್ತು ಜಾಂಗೂನ್ ಲಿಮ್ ಅವರಿಂದ ಸೋಲ ಕಂಡಿದೆ.
* ಇದೇ ಟೂರ್ನಿಯ ಹಣಾಹಣಿಯಲ್ಲಿ ಶರತ್ ಹಾಗೂ ಸತ್ಯನ್ ಜೋಡಿಯು, ಜಪಾನ್‌ನ ಯೂಕಿಯಾ ಯುಡಾ ಶುನ್ಸುಕೆ ತೊಗೊಮಿ ಅವರ ವಿರುದ್ಧ ಸೋಲ ಅನುಭವಿಸಿದ್ದಾರೆ.

## ವಿಶ್ವ(Habitat) ಆವಾಸಸ್ಥಾನ ದಿನ

* ಪ್ರಸ್ತುತ ವಿಶ್ವಸಂಸ್ಥೆಯ ಉಪಕ್ರಮ ದಿನವಾದ ವಿಶ್ವ ಆವಾಸಸ್ಥಾನ ದಿನವನ್ನು ಅಕ್ಟೋಬರ್. 4 ರಂದು ಆಚರಿಸಲಾಯಿತು. ಹಾಗೂ ಈ ದಿನವನ್ನು ಪ್ರತಿ ವರ್ಷ ಅಕ್ಟೋಬರ್ ಮೊದಲ ಸೋಮವಾರ ಆಚರಿಸಲಾಗುತ್ತದೆ.
* ಈ ವಿಶ್ವ ಆವಾಸಸ್ಥಾನ ದಿನವನ್ನು ಆಶ್ರಯ ಹಾಗೂ ಮೂಲಭೂತ ಹಕ್ಕನ್ನು ಉತ್ತೇಜಿಸುವ ನಿಟ್ಟಿನಲ್ಲಿ ಆಚರಣೆ ಮಾಡಲಾಗುತ್ತದೆ.
* 2021 ನೇ ವರ್ಷದ ವಿಶ್ವ ಆವಾಸಸ್ಥಾನ ದಿನವನ್ನು 'ಕಾರ್ಬನ್ ಮುಕ್ತ ಪ್ರಪಂಚಕ್ಕಾಗಿ ನಗರ ಕ್ರಿಯೆಯನ್ನು ಉತ್ತಮಗೊಳಿಸುವಿಕೆ'

ಧ್ಯೇಯ ವಾಕ್ಯದ ಅಡಿಯಲ್ಲಿ ಆಚರಿಸಲಾಗಿದೆ.
* ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 1985 ರಲ್ಲಿ ಈ ವಿಶ್ವ ಆವಾಸಸ್ಥಾನ ದಿನವನ್ನು ವಾರ್ಷಿಕವಾಗಿ ಆಚರಿಸುವ ನಿರ್ಧಾರವನ್ನು ಕೈಗೊಂಡಿತು, ಇದಾದ ಬಳಿಕ 1986 ರಲ್ಲಿ ಕೀನ್ಯಾದ ನೈರೋಬಿಯಲ್ಲಿ 'ಆಶ್ರಯವು ನನ್ನ ಹಕ್ಕು' ಎಂಬ ಧ್ಯೇಯ ವಾಕ್ಯದ ಅಡಿಯಲ್ಲಿ ವಿಶ್ವ ಆವಾಸಸ್ಥಾನ ದಿನವನ್ನು ಆಚರಣೆ ಮಾಡಲಾಯಿತು.
* ಈ ಮೊದಲು 1989 ರಲ್ಲಿ ವಿಶ್ವಸಂಸ್ಥೆಯ ಮಾನವ ವಸಾಹತು ಕಾರ್ಯಕ್ರಮವು, ಈ ಆವಾಸಸ್ಥಾನ ಸಮಸ್ಯೆಗಳಿಗೆ ಪರಿಹಾರವನ್ನು ಬಗೆಹರಿಸಿಕೊಳ್ಳಲು ದೇಶಗಳನ್ನು ಪ್ರೋತ್ಸಾಹಿಸುವ ಸಲುವಾಗಿ UN Habitat Scroll of Honour ಪ್ರಶಸ್ತಿಯನ್ನು ಪರಿಚಯಿಸಿದೆ.

## ನಾಸಾ(NASA)ದ ಸೈಕೆ ಮಿಷನ್



* ಅಮೇರಿಕದ ಬಾಹ್ಯಾಕಾಶ ಸಂಸ್ಥೆಯಾಗಿರುವ ನಾಸಾ, ಇದೀಗ ಸೈಕ್ ಎಂಬ ದೈತ್ಯ ಕ್ಷುದ್ರಗ್ರಹವನ್ನು ಭೇಟಿ ಮಾಡಲು ತನ್ನದೇ ಆದ 'ಸೈಕೆ ಮಿಷನ್'ನ್ನು ಕಳುಹಿಸಲು ಸಿದ್ಧವಾಗಿದೆ.
* ಮಾನಸಿಕ(ಸೈಕ್) ಎಂಬ ದೈತ್ಯ ಕ್ಷುದ್ರಗ್ರಹವು ಮಂಗಳ ಹಾಗೂ ಗುರುಗ್ರಹದ ನಡುವೆ ಮುಖ್ಯ ಕ್ಷುದ್ರಗ್ರಹ ಪಟ್ಟಿಯಲ್ಲಿ ಸೂರ್ಯನ ಸುತ್ತ ಸುತ್ತುತ್ತದೆ.
* ರೇಡಾರ್ ಹಾಗೂ ಆಪ್ಟಿಕಲ್ ಟೆಲಿಸ್ಕೋಪ್‌ಗಳಿಂದ ಸಂಗ್ರಹಿಸಿದ ಮಾಹಿತಿಯ ಪ್ರಕಾರ, ಈ ಸೈಕ್ ಕ್ಷುದ್ರಗ್ರಹವನ್ನು ಹೆಚ್ಚಾಗಿ ಲೋಹದಿಂದ ಮಾಡಲಾಗಿದೆ ಎಂದು ತಿಳಿದು ಬಂದಿದೆ.
* ಈ ಸೈಕ್ ಕ್ಷುದ್ರಗ್ರಹವು ತನ್ನ ಬಿಂದುವಿನಲ್ಲಿ ಅಂದಾಜು 280 ಕಿ.ಮೀ. ದೂರದಲ್ಲಿದೆ.
* ಅಮೇರಿಕದ ನಾಸಾ ಈ ಸೈಕ್ ಮಿಷನ್ ನ್ನು 2022 ರಲ್ಲಿ ಬಿಡುಗಡೆ ಮಾಡಲಿದೆ ಎಂದು ತಿಳಿದು ಬಂದಿದೆ, ಅಷ್ಟೇ ಅಲ್ಲದೇ ಈ ನೌಕೆಯು ಎರಡು ವರ್ಷಗಳ ಅವಧಿಗೆ ಕ್ಷುದ್ರಗ್ರಹದ ಸುತ್ತ ಸುತ್ತಿ ಮಾಹಿತಿಯನ್ನು ಸಂಗ್ರಹಿಸಿ ರವಾನಿಸಲಿದೆ.

## ಕೋವಿಡ್ 19 ಲಸಿಕೆಯನ್ನು ಸಾಗಿಸಲು 'ಮೇಡ್ ಇನ್ ಇಂಡಿಯಾ' ಡ್ರೋನ್ ಬಳಕೆ



* ಈಶಾನ್ಯದ ಕಠಿಣ ಹಾಗೂ ತಲುಪಲು ಕಷ್ಟಕರವಾದ ಭೂಪ್ರದೇಶಗಳಲ್ಲಿ 'ಮೇಡ್ ಇನ್ ಇಂಡಿಯಾ ಡ್ರೋನ್ಸ್' ಬಳಸಿಕೊಂಡು ಕೋವಿಡ್ 19 ಲಸಿಕೆ ವಿತರಣೆಯನ್ನು ಮಾಡಲು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಉಪಕ್ರಮವನ್ನು ಆರಂಭಿಸಿದ್ದಾರೆ.
* ಈ ಕಾರಣದಿಂದಾಗಿ ಐಸಿಎಂಆರ್ 'ಈಶಾನ್ಯದಲ್ಲಿ ಡ್ರೋನ್ ರೆಸ್ಪಾನ್ಸ್ ಮತ್ತು ಔಟ್ರೀಚ್ (ಐ ಡ್ರೋನ್)' ಎಂಬ ವಿತರಣಾ ಮಾದರಿಯನ್ನು ರಚಿಸಿದೆ.
* ಪ್ರಸ್ತುತ ಕೋವಿಡ್ 19 ಲಸಿಕೆಯನ್ನು 15 ಕಿ.ಮೀ. ದೂರ ಸಾಗಿಸಲು ಇದೇ ಮೊದಲ ಬಾರಿ ದಕ್ಷಿಣ ಏಷ್ಯಾದಲ್ಲಿ 'ಮೇಕ್ ಇನ್ ಇಂಡಿಯಾ' ಡ್ರೋನ್'ಗಳನ್ನೂ ಬಳಸಲಾಗಿದೆ.
* ಕೋವಿಡ್ 19 ಲಸಿಕೆಯನ್ನು ಬಿಷ್ಣುಪುರ ಜಿಲ್ಲಾ ಆಸ್ಪತ್ರೆಯಿಂದ ಮಣಿಪುರದ ಕರಂಗ್ ದ್ವೀಪದ ಲೋಕ್ತಕ್ ಸರೋವರದವರೆಗೆ ಕೇವಲ 12 ರಿಂದ 15 ನಿಮಿಷಗಳಲ್ಲಿ ಕಳುಹಿಸಲಾಗಿದೆ, ಈ ಎರಡು ಪ್ರದೇಶಗಳ ನಡುವಿನ ದೂರವು 26 ಕಿಮೀ. ಆಗಿದೆ.
* ಸದ್ಯ ಮಣಿಪುರ ಮತ್ತು ನಾಗಾಲ್ಯಾಂಡ್ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿನ ಸವಾಲುಗಳನ್ನು ಎದುರಿಸಲು ಡ್ರೋನ್ ಆಧಾರಿತ ವಿತರಣಾ ಯೋಜನೆಗಳನ್ನು ನಿಯೋಜಿಸಲಾಗಿದೆ.

## DRDO ಡೇರ್ ಟು ಡ್ರೀಮ್ 2.0 ಸ್ಪರ್ಧೆಯ ವಿಜೇತರಿಗೆ ಯುವ ವಿಜ್ಞಾನಿಗಳ ಪ್ರಶಸ್ತಿಗಳು



* ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 'ಡೇರ್ ಟು ಡ್ರೀಮ್ 2.0' ಸ್ಪರ್ಧೆಯನ್ನು ವಿಜೇತರನ್ನು ಗೌರವಿಸಿದರು, ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು ಈ 'ಡೇರ್ ಟು ಡ್ರೀಮ್ 2.0' ಸ್ಪರ್ಧೆಯನ್ನು ಆಯೋಜಿಸಿದೆ.
* ಈ ಸ್ಪರ್ಧೆಯಲ್ಲಿ ಒಟ್ಟಾರೆ 40 ವಿಜೇತರಿಗೆ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗಿದೆ, ಅಷ್ಟೇ ಅಲ್ಲದೇ 'ಡೇರ್ ಟು ಡ್ರೀಮ್ 3.0 ಕ್ಕೆ ಸ್ಟಾರ್ಟ್ ಅಪ್‌ಗಳನ್ನು ಉತ್ತೇಜಿಸಲು ವೇದಿಕೆಯನ್ನು ಆರಂಭಿಸಲಾಗಿದೆ.
* 2019 ನೇ ಸಾಲಿನ DRDO ಯುವ ವಿಜ್ಞಾನಿಗಳ ಪ್ರಶಸ್ತಿಗಳನ್ನು ಕೇಂದ್ರ ಸಚಿವರು ನೀಡಿದರು.
* DRDO ಸ್ವಥೀಯವಾಗಿ ಅಭಿವೃದ್ಧಿಪಡಿಸಿದ ಮೂರು ವ್ಯವಸ್ಥೆಗಳನ್ನು ಸಶಸ್ತ್ರ ಪಡೆಗಳಿಗೆ ನೀಡಲಾಗಿದೆ.
* DRDO ಭಾರತೀಯ ವಾಯುಪಡೆಗಾಗಿ, ARINC818 ವಿಡಿಯೋ ಪ್ರೊಸೆಸಿಂಗ್ ಹಾಗೂ ಸ್ವಿಚಿಂಗ್ ಮಾಡ್ಯೂಲ್ ನ್ನು ಅಭಿವೃದ್ಧಿಪಡಿಸಿದೆ. ಸಲಾಗಿದೆ.
* DRDO ಭಾರತೀಯ ನೌಕಾಪಡೆಗಾಗಿ, ಸೋನಾರ್ ಪರ್ಫಾರ್ಮೆನ್ಸ್ ಮಾಡೆಲಿಂಗ್ ಸಿಸ್ಟಮ್ ನ್ನು ಅಭಿವೃದ್ಧಿಪಡಿಸಿದೆ, ಇದರಿಂದ ಭಾರತೀಯ ನೌಕಾ ಹಡಗು, ಮತ್ತು ಜಲಾಂತರ್ಗಾಮಿ ನೌಕೆಗಳು ಹಾಗೂ ನೀರಿನ ಕಣ್ಗಾವಲು ಇಡಲು ಉಪಯೋಗವಾಗಲಿದೆ ಎಂದಿದ್ದಾರೆ.
* DRDO ಭಾರತೀಯ ಸೇನೆಗಾಗಿ, ಬಂದ್ ಬ್ಲಾಸ್ಟಿಂಗ್ ಸಾಧನ Mk II ಸಾಧನವನ್ನು ಅಭಿವೃದ್ಧಿಪಡಿಸಿದೆ.

## ತಮಿಳುನಾಡು ಮುಖ್ಯಮಂತ್ರಿಯಿಂದ ಪೋಲಿಸ್ ತನಿಖೆಗೆ ಸಹಾಯ ಮಾಡಲು ಸಾಫ್ಟ್‌ವೇರ್ ಆರಂಭ



* ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತನಿಖೆಯಲ್ಲಿ ಪೋಲೀಸ್ ಅಧಿಕಾರಿಗಳಿಗೆ ಸಹಾಯವಾಗಲು ಮುಖ ಗುರುತಿಸುವಿಕೆ ತಂತ್ರಾಂಶವನ್ನು(Software) ಆರಂಭಿಸಿದ್ದಾರೆ.
* ಪೋಲೀಸ್ ಸಿಬ್ಬಂದಿಗೆ ಅಪರಾಧ ಮತ್ತು ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್ವರ್ಕ್ ಹಾಗೂ ಸಿಸ್ಟಮ್ಸ್ ನಲ್ಲಿ ಸಂಗ್ರಹಿಸಿರುವ ಮಾಹಿತಿಗಳೊಂದಿಗೆ ಶಂಕಿತರ ಫೋಟೋಗಳನ್ನು ಹೋಲಿಸಲು ಈ ಮುಖ ಗುರುತಿಸುವಿಕೆ ತಂತ್ರಾಂಶ(Face recognition software)ವು ಸಹಾಯಮಾಡಲಿದೆ ಎಂದು ತಿಳಿಸಿದ್ದಾರೆ.
* ಈ ವೆಬ್‌ಸೈಟ್‌ನಲ್ಲಿ 5.30 ಲಕ್ಷಕ್ಕೂ ಹೆಚ್ಚು ಶಂಕಿತರ ಫೋಟೋಗಳನ್ನು ಅಪ್‌ಲೋಡ್ ಮಾಡಲಾಗಿದೆ.
* ಈ ಸಾಫ್ಟ್‌ವೇರ್ ಅನ್ನು ಪೊಲೀಸ್ ಠಾಣೆಗಳಲ್ಲಿ ಕಂಪ್ಯೂಟರ್‌ಗಳಲ್ಲಿ ಹಾಗೂ ಪೊಲೀಸ್ ಸಿಬ್ಬಂದಿಯ ಸ್ಮಾರ್ಟ್‌ಫೋನ್‌ಗಳಲ್ಲಿ ಬಳಕೆಮಾಡಬಹುದಾಗಿದೆ.
* ಅಪರಾಧ ಮತ್ತುಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್‌ಗಳು ಮತ್ತು ಸಿಸ್ಟಮ್ಸ್ (CCTNS) ಎನ್ನುವುದು ಭಾರತೀಯ ಸರ್ಕಾರದ ಯೋಜನೆಯಾಗಿದೆ, ಇ ಆಡಳಿತದ ಮೂಲಕ ಪರಿಣಾಮಕಾರಿ ಪೋಲಿಸರಿಗಾಗಿ ಸಮಗ್ರ ವ್ಯವಸ್ಥೆಯನ್ನು ರಚಿಸಲು ಇದನ್ನು ಆರಂಭಿಸಲಾಗಿದೆ, ಅಷ್ಟೇ ಅಲ್ಲದೇ ಇದು ರಾಷ್ಟ್ರವ್ಯಾಪಿ ಆನ್‌ಲೈನ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಹೊಂದಿದೆ, ಹಾಗೂ ಭಾರತದ ಸರಿ ಸುಮಾರು 14,000 ಪೊಲೀಸ್ ಠಾಣೆಗಳನ್ನು ಸಂಪರ್ಕಿಸುತ್ತದೆ.

# 07-10-2021

## ಕೇಂದ್ರ ಸಚಿವ ಸಂಪುಟವು ಜವಳಿ ಪಾರ್ಕ್ ಸ್ಥಾಪಿಸಲು ಪಿಎಂ ಮಿತ್ರ ಯೋಜನೆಗೆ ಅನುಮೋದನೆ



* ಕೇಂದ್ರ ಸಚಿವ ಸಂಪುಟವು ಬೃಹತ್ ಜವಳಿ ಪಾರ್ಕ್ ಸ್ಥಾಪನೆ ಮಾಡಲು 4,445 ಕೋಟಿ ರೂ.ಗಳ ಪಿಎಂ ಮಿತ್ರ ಯೋಜನೆಗೆ ಅನುಮೋದನೆ ನೀಡಿದೆ, ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಹಾಗೂ ಅನುರಾಗ್ ಠಾಕೂರ್ ಅವರು ತಿಳಿಸಿದ್ದಾರೆ.
* ದೇಶದಲ್ಲಿ ಈ ಪಿಎಂ ಮಿತ್ರ ಯೋಜನೆ ಅಡಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆಯಿಂದಾಗಿ, ಜವಳಿ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ, ಅದರೊಂದಿಗೆ ಅದೆಷ್ಟೋ ಜನರಿಗೆ ಉದ್ಯೋಗ ಪಾಡಿಗಿಸಿದಂತಾಗುತ್ತದೆ, ಪ್ರಸ್ತುತ ಈ ಜವಳಿ ಕ್ಷೇತ್ರದಲ್ಲಿ 21 ಲಕ್ಷ ಉದ್ಯೋಗಗಳು ಅಂದರೆ 7 ಲಕ್ಷ ನೇರ ಹಾಗೂ 14 ಲಕ್ಷ ಪರೋಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.
* ಈ ಪಿಎಂ ಮಿತ್ರ ಪಾರ್ಕ್ ಯೋಜನೆಗೆ 5 ವರ್ಷಗಳಲ್ಲಿ 4,445 ಕೋಟಿ ಖರ್ಚು ಮಾಡಲಾಗುತ್ತದೆ, ಹಾಗೂ ಈ ಯೋಜನೆ ಅಡಿಯಲ್ಲಿ ನೂಲುವಿಕೆ, ನೇಯ್ಗೆ, ಸಂಸ್ಕರಣೆ, ಬಣ್ಣ, ಹಾಗೂ ಮುದ್ರಣದಿಂದ ಬಟ್ಟೆಗಳ ತಯಾರಿಸುವವರೆಗೆ ಈ ಎಲ್ಲ ಕೆಲಸಗಳು ಒಂದೇ ಸ್ಥಳದಲ್ಲಿ ಸರಾಗವಾಗಿ ನಡೆಯಲಿವೆ, ಇದರಿಂದ ಲಾಜಿಸ್ಟಿಕ್ಸ್ ವೆಚ್ಚ ಕಡಿಮೆಯಾಗಲಿದೆ ಎಂದು ತಿಳಿಸಿದ್ದಾರೆ.
* ಈ ಮಿತ್ರ ಪಾರ್ಕ್ ವಿವಿಧ ರಾಜ್ಯಗಳಲ್ಲಿ ಸಾರ್ವಜನಿಕ ಖಾಸಗಿ ಸಹಯೋಗದೊಂದಿಗೆ ನಿರ್ಮಾಣವಾಗಲಿವೆ.

## ಸ್ವಾಮಿತ್ವ ಯೋಜನೆ (SVAMITVA Yojana) ಅಡಿಯಲ್ಲಿ 22 ಲಕ್ಷ ಕುಟುಂಬಗಳಿಗೆ ಆಸ್ತಿ ಕಾರ್ಡ್




* ಪ್ರಸ್ತುತ ಪ್ರಧಾನಿ ಮೋದಿ ಅವರು ಸ್ವಾಮಿತ್ವ ಯೋಜನೆ(SVAMITVA Yojana )ಯನ್ನು ಪ್ರಾರಂಭದಲ್ಲಿ ಮಧ್ಯಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ, ಉತ್ತರಾಖಂಡ್, ರಾಜಸ್ಥಾನ, ಹರಿಯಾಣ, ಪಂಜಾಬ್ ಹಾಗೂ ಕರ್ನಾಟಕ ರಾಜ್ಯಗಳ ಕೆಲವು ಹಳ್ಳಿಗಳಲ್ಲಿ ಆರಂಭಿಸಿದ್ದಾರೆ, ಈ ಯೋಜನೆ ಅಡಿಯಲ್ಲಿ 22 ಲಕ್ಷ ಕುಟುಂಬಗಳಿಗೆ ಆಸ್ತಿ ಕಾರ್ಡ್ ಮಾಡಲಾಗಿದೆ ಎಂದು ತಿಳಿಸಿದ್ದಾರೆ.
* ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುಲ್ ಸಭೆಯ ಮೂಲಕ ಮಧ್ಯಪ್ರದೇಶದಲ್ಲಿನ ಸ್ವಾಮಿತ್ವ ಯೋಜನೆಯ ಫಲಾನುಭವಿಗಳ ಜೊತೆ ಸಂವಾದ ನಡೆಸಿದರು, ಹಾಗೂ ಈ ಯೋಜನೆಯಿಂದಾಗಿ ಬಹಳಷ್ಟು ಜನ ಬ್ಯಾಂಕಿನಿಂದ ಸಾಲಕ್ಕಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.
* ಪ್ರಸ್ತುತ ಆಸ್ತಿ ಮಾಲೀಕತ್ವದ ಸ್ಥಾಪನೆಯ ಯೋಜನೆಯಾಗಿರುವ ಈ ಸ್ವಾಮಿತ್ವ ಯೋಜನೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತರಲು ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ.
* ಈ ಸ್ವಾಮಿತ್ವ ಯೋಜನೆಅಡಿಯಲ್ಲಿನ ಆಸ್ತಿ ಕಾರ್ಡ್ಗಳು ಗ್ರಾಮೀಣ ಅಭಿವೃದ್ಧಿಗೆ ಉತ್ತಮ ವ್ಯವಸ್ಥೆಯನ್ನು ಒದಗಿಸುತ್ತವೆ, ಮತ್ತು ಸಣ್ಣ ಮಟ್ಟದ ರೈತರಿಗೆ ಬೆಳೆಯಲು ಸಹಾಯಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.
* ಪ್ರಧಾನಿ ಮೋದಿ ಅವರು ಈ ಯೋಜನೆಯಡಿ 1,71,000 ಫಲಾನುಭವಿಗಳಿಗೆ ಇ ಪ್ರಾಪರ್ಟಿ ಕಾರ್ಡ್ ಗಳನ್ನು ಹಸ್ತಾಂತರಿಸಿದರು.

## ಜೆಟ್ ಇಂಧನಕ್ಕೆ ತಾಳೆ ಎಣ್ಣೆ ಮಿಶ್ರಣದಿಂದ ವಿಮಾನ ಹಾರಾಟ ಪರೀಕ್ಷೆ ಯಶಸ್ವಿಗೊಳಿಸಿದ ಇಂಡೊನೇಷ್ಯಾ



* ಪ್ರಸ್ತುತ ಇಂಡೋನೇಷ್ಯಾ ಜೆಟ್ ಇಂಧನಕ್ಕೆ ಸ್ವಲ್ಪ ಪ್ರಮಾಣದಲ್ಲಿ ತಾಳೆ ಎಣ್ಣೆಯನ್ನು ಮಿಶ್ರಮಾಡಿ ವಿಮಾನ ಹಾರಾಟ ನಡೆಸುವ ಪ್ರಥಮ ಪರೀಕ್ಷೆ ಯಶಸ್ವಿಗೊಳಿಸಿದೆ.
* ತಾಳೆ ಎಣ್ಣೆ ಮಿಶ್ರಣಮಾಡಿದ ಜೆಟ್ ಇಂಧನ ಬಳಸಿಕೊಂಡು ವಿಮಾನವು ಇಂಡೋನೇಷ್ಯಾದ ರಾಜಧಾನಿ ಜಕಾರ್ತದಿಂದ 100 ಕಿ.ಮೀ.ದೂರದ ಬಾಂಡುಂಗ್ ನಗರಕ್ಕೆ ಯಶಸ್ವಿಯಾಗಿ ಪ್ರಯಾಣ ಬೆಳೆಸಿದೆ ಎಂದು ಅಲ್ಲಿನ ಹಣಕಾಸು ಸಚಿವ ಏರ್ಲಾಂಗ್ ಹರ್ತಾರ್ತೊ ಅವರು ತಿಳಿಸಿದ್ದಾರೆ.
* ಇಂಡೋನೇಷ್ಯಾ ರಾಷ್ಟ್ರವು ಇದೀಗ ಜೈವಿಕ ಇಂಧನ ಬಳಕೆಯನ್ನು ಕಡ್ಡಾಯಗೊಳಿಸುತ್ತಿದೆ, ಅಷ್ಟೇ ಅಲ್ಲದೇ ಈಗಿನ ಇಂಧನದೊಂದಿಗೆ ಶೇ 30ರಷ್ಟು ತಾಳೆ ಎಣ್ಣೆ ಬಳಸುವುದನ್ನು ಕಡ್ಡಾಯಗೊಳಿಸಿದೆ, ಈ ಮಿಶ್ರಣಕ್ಕೆ 'ಬಿ30' ಎನ್ನುವರು.
* ಇಂಡೋನೇಷ್ಯಾದ ಈ ಪರೀಕ್ಷೆಯಲ್ಲಿ ಜೈವಿಕ ಜೆಟ್ ಇಂಧನದಲ್ಲಿ ಶೇ2.4 ರಷ್ಟು ತಾಳೆ ಎಣ್ಣೆ ಅಂಶವನ್ನು ಮಿಶ್ರಣ ಮಾಡಲಾಗಿದೆ, ಅಷ್ಟೇ ಅಲ್ಲದೇ 2025 ರ ವೇಳೆಗೆ ಮಿಶ್ರಣದ ಪ್ರಮಾಣವನ್ನು ಶೇ. 5 ರವರೆಗೆ ಕಡ್ಡಾಯವಾಗಿ ಬಳಕೆಮಾಡಬೇಕಿದೆ ಎಂದು ತಿಳಿಸಿದ್ದಾರೆ.

## ಭಾರತ ಮೂಲದ ದಿವಂಗತ ಪೊಲೀಸ್ ಅಧಿಕಾರಿ ಹೆಸರು ಅಮೇರಿಕ ಅಂಚೆ ಕಚೇರಿಗೆ



* ಭಾರತೀಯ ಮೂಲದ ಪೊಲೀಸ್ ಅಧಿಕಾರಿಯು ಅಮೇರಿಕಾದಲ್ಲಿ ಸೇವೆಯಲ್ಲಿದ್ದಾಗ ದುಷ್ಕರ್ಮಿಗಳ ಗುಂಡಿಗೆ ಪ್ರಾಣವನ್ನು ತ್ಯಜಿಸಿದ್ದಾರೆ, ಈ ಕಾರಣದಿಂದ ಇಂಡೋ ಅಮೆರಿಕನ್ ಪೊಲೀಸ್ ಅಧಿಕಾರಿ ಹೆಸರನ್ನು ಅಲ್ಲಿನ ಅಂಚೆ ಕಚೇರಿಗೆ ಮರುನಾಮಕರಣ ಮಾಡಿ ಪೊಲೀಸ್ ಅಧಿಕಾರಿ ಗೌರವವನ್ನು ತಿಳಿಸಿದ್ದಾರೆ.
* ಅಧಿಕೃತವಾಗಿ ದಿವಂಗತ ಪೊಲೀಸ್ ಅಧಿಕಾರಿ ಡೆಪ್ಯೂಟಿ ಸಂದೀಪ್ ಸಿಂಗ್ ಧಲಿವಾಲ್ ಹೆಸರುನ್ನು ಅಮೇರಿಕದ ಟೆಕ್ಸಾಸ್‌ನ ಹೂಸ್ಟನ್ ನಲ್ಲಿರುವ 315 ಅಡಿಕ್ಸ್ ಹೊವೆಲ್ ರಸ್ತೆಯ ಅಂಚೆ ಕಚೇರಿಗೆ ಮರುನಾಮಕರಣ ಮಾಡಿದ್ದಾರೆ.
* 2019 ರ ಸೆಪ್ಟೆಂಬರ್. 27 ರಂದು ಡೆಪ್ಯೂಟಿ ಸಂದೀಪ್ ಸಿಂಗ್ ಧಲಿವಾಲ್ ಅವರು ಟೆಕ್ಸಾಸ್‌ನ ಹ್ಯಾರಿಸ್ ಕೌಂಟಿಯಲ್ಲಿ ಟ್ರಾಫಿಕ್ ಪೊಲೀಸ್ ಆಗಿ ಕಾರ್ಯ ನಿರ್ವಹಿಸಲು ಆರಂಭಿಸಿದ್ದರು.
* ಪ್ರಸ್ತುತ ಈ ದಿವಂಗತ ಪೊಲೀಸ್ ಅಧಿಕಾರಿಯ ಸೇವೆ, ತ್ಯಾಗ ಹಾಗೂ ಅವರ ಉದಾಹರಣೆಯ ಶಾಶ್ವತವಾಗಿ ನೆನಪಿನಲ್ಲಿಡಲು ಬಯಸುತ್ತೇವೆ ಎಂದು ಅಲ್ಲಿನ ಕಾಂಗ್ರೆಸ್ ಸದಸ್ಯೆ ಲಿಜಿ ಫ್ಲೆಚರ್ ಮಾಹಿತಿ ನೀಡಿದ್ದಾರೆ.

## ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನ ವಾರ




* 'ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನ ವಾರ'ವನ್ನು ಅಕ್ಟೋಬರ್. 5 ರಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಆಚರಣೆ ಮಾಡುತ್ತದೆ.
* ಅಷ್ಟೇ ಅಲ್ಲದೇ ಅಕ್ಟೋಬರ್.10 ನ್ನು 'ವಿಶ್ವ ಮಾನಸಿಕ ಆರೋಗ್ಯ ದಿನ' ಎಂದು ಆಚರಿಸುತ್ತಾರೆ.
* ಪ್ರಸ್ತುತ ಮಾನಸಿಕ ಅಸ್ವಸ್ಥತೆಕ್ಕೆ ಸಂಬಂಧಿಸಿದ ಕಳಂಕವನ್ನು ಜನರಲ್ಲಿ ತೆಗೆದುಹಾಕುವ ಉದ್ದೇಶದಿಂದ ಭಾರತದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನ ವಾರವನ್ನು ಆಚರಿಸಲಾಗುತ್ತಿದೆ.
* ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಮಾನಸಿಕ ಆರೋಗ್ಯ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ.
* ಮಾನಸಿಕ ಆರೋಗ್ಯಕ್ಕಾಗಿ ವಿಶ್ವ ಒಕ್ಕೂಟದ ಉಪಕ್ರಮವಾಗಿ ಮೊದಲ ವಿಶ್ವ ಮಾನಸಿಕ ಆರೋಗ್ಯ ದಿನವನ್ನು 1992 ರಲ್ಲಿ ಆಚರಣೆ ಮಾಡಲಾಯಿತು.

## 'ಎಲೆಕ್ಟ್ರಾನಿಕ್ ಪಿಂಚಣಿ ಪಾವತಿ ಆದೇಶ'ವನ್ನು ಡಿಜಿ ಲಾಕರ್‌ನೊಂದಿಗೆ ಸಂಯೋಜಿಸಲಾಗಿದೆ



* ಪ್ರಸ್ತುತ 'ಎಲೆಕ್ಟ್ರಾನಿಕ್ ಪಿಂಚಣಿ ಪಾವತಿ ಆದೇಶ'ವನ್ನು ಕೇಂದ್ರ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಜಿ ಸೈನಿಕರ ಕಲ್ಯಾಣ ಇಲಾಖೆಯು ಡಿಜಿ ಲಾಕರ್‌ನೊಂದಿಗೆ ಸಂಯೋಜಿಸಿದೆ.
* ಈ ಎಲೆಕ್ಟ್ರಾನಿಕ್ ಪಿಂಚಣಿ ಪಾವತಿ ಆದೇಶವನ್ನು ಅಲಹಾಬಾದ್‌ನ ಪ್ರಿನ್ಸಿಪಾಲ್ ಕಂಟ್ರೋಲರ್ ಆಫ್ ಡಿಫೆನ್ಸ್ ಅಕೌಂಟ್ಸ್ ಪಿಂಚಣಿ ಉತ್ಪಾದಿಸುತ್ತದೆ, ಹಾಗೂ EPPO ವನ್ನು ಡಿಜಿ ಲಾಕರ್‌ನೊಂದಿಗೆ ಸಂಯೋಜನೆ ಮಾಡಲಾಗಿದೆ ಇದರಿಂದಾಗಿ ರಕ್ಷಣಾ ಪಿಂಚಣಿದಾರರ ಜೀವನವನ್ನು ಸುಲಭಗೊಳಿಸಲು ಸಾಧ್ಯವಾಗಲಿದೆ.
* ಈ ಪಿಂಚಣಿ ಪಾವತಿ ಆದೇಶದಿಂದಾಗಿ ಎಲ್ಲಾ ಡಿಫೆನ್ಸ್ ಪಿಂಚಣಿದಾರರಿಗೆ ಡಿಜಿ ಲಾಕರ್‌ನಿಂದ ತಕ್ಷಣವೇ ಪಿಂಚಣಿ ಪಾವತಿ ಪ್ರತಿಯನ್ನು ಪಡೆಯಬಹುದಾಗಿದೆ, ಇದು ಪಿಂಚಣಿ ಪಾವತಿ ಆದೇಶದ ಶಾಶ್ವತ ದಾಖಲೆಯನ್ನು ಲಾಕರ್‌ನಲ್ಲಿ ಸೃಷ್ಟಿಸುತ್ತದೆ.
* ಪ್ರಸ್ತುತ ಡಿಜಿ ಲಾಕರ್ ಪ್ಲಾಟ್‌ಫಾರ್ಮ್ ಬಳಸಿಕೊಂಡು 23 ಲಕ್ಷಕ್ಕೂ ಅಧಿಕ ರಕ್ಷಣಾ ಪಿಂಚಣಿದಾರರ ಎಲೆಕ್ಟ್ರಾನಿಕ್ ಪಿಂಚಣಿ ಪಾವತಿ ಆದೇಶಗಳ ಮಾಹಿತಿಯನ್ನು ನೀಡಲಿದೆ ಎಂದಿದ್ದಾರೆ.
* ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಈ ಡಿಜಿ ಲಾಕರ್ ಸೇವೆಯನ್ನು ನೀಡಲಿದೆ ಇದೊಂದು ಭಾರತೀಯ ಡಿಜಿಟಲೀಕರಣ ಆನ್‌ಲೈನ್ ಸೇವೆಯಾಗಿದೆ ಎಂದು ತಿಳಿಸಿದ್ದಾರೆ.

* ಈ ಡಿಜಿ ಲಾಕರ್ ಪ್ರತಿ ಖಾತೆಗೆ 1GB ಸಂಗ್ರಹ ಸ್ಥಳವನ್ನು ನೀಡಲಿದೆ, ಇದನ್ನು ಎಲ್ಲಾ ದಾಖಲೆಗಳ ಸ್ಕ್ಯಾನ್ ಮಾಡಿದ ನಕಲು ಪ್ರತಿಗಳನ್ನು ಅಪ್‌ಲೋಡ್ ಮಾಡಲು ಬಳಸಬಹುದಾಗಿದೆ.

## ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರಿಂದ ಹೆಲಿ ಬೋರ್ನ್ ಸರ್ವೇ ತಂತ್ರಜ್ಞಾನ ಆರಂಭ



* ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಅತ್ಯಾಧುನಿಕ ಹೆಲಿ ಬೋರ್ನ್ ಸರ್ವೇ ತಂತ್ರಜ್ಞಾನವನ್ನು ಆರಂಭಿಸಿದರು.
* ಈ ಹೆಲಿ ಬೋರ್ನ್ ಸರ್ವೇ ತಂತ್ರಜ್ಞಾನವನ್ನು ಅಂತರ್ಜಲ ನಿರ್ವಹಣೆಗಾಗಿ ಪ್ರಾರಂಭಿಸಲಾಗಿದೆ.
* ಈ ಸರ್ವೇ ತಂತ್ರಜ್ಞಾನವನ್ನು ಮೊದಲನೇ ಹಂತದಲ್ಲಿ ರಾಜಸ್ಥಾನ, ಪಂಜಾಬ್, ಗುಜರಾತ್ ಹಾಗೂ ಹರಿಯಾಣ ರಾಜ್ಯಗಳಲ್ಲಿ ಆರಂಭಿಸಲಾಗಿದೆ.
* ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಇದೇ ಅಕ್ಟೋಬರ್. 5 ರಂದು ರಾಜಸ್ಥಾನದ ಜೋಧಪುರದಿಂದ ಸಮೀಕ್ಷೆಯನ್ನು ಪ್ರಾರಂಭಿಸಿದ್ದಾರೆ.
* ಈ ತಂತ್ರಜ್ಞಾನವನ್ನು CSIR NGRI ಹೈದರಾಬಾದ್ ಸಿದ್ಧಪಡಿಸಿದೆ, ಈ ತಂತ್ರಜ್ಞಾನವನ್ನು ಶುಷ್ಕ ಪ್ರದೇಶಗಳಲ್ಲಿನ ಅಂತರ್ಜಲ ಮೂಲಗಳನ್ನು ನಕ್ಷೆ ಪತ್ತೆ ಮಾಡಲು ಬಳಕೆ ಮಾಡಲಾಗುತ್ತದೆ, ಹಾಗೂ ಈ ತಂತ್ರಜ್ಞಾನವು ನೆಲದ ಮಟ್ಟಕ್ಕಿಂತ 500 ಮೀ. ಆಳದವರೆಗೆ 3D ಚಿತ್ರವನ್ನು ನೀಡುತ್ತದೆ.
* ಪ್ರಸ್ತುತ ಈ ತಂತ್ರಜ್ಞಾನವನ್ನು ಕುಡಿಯುವ ಉದ್ದೇಶಕ್ಕಾಗಿ ಅಂತರ್ಜಲವನ್ನು ಬಳಸಿಕೊಳ್ಳಲು ಸಹಾಯ ಮಾಡಲಿದೆ.
* ಪ್ರಸ್ತುತ ಹೆಲಿ ಬೋರ್ನ್ ಸರ್ವೇ ತಂತ್ರಜ್ಞಾನದಿಂದ ಮುಖ್ಯವಾಗಿ ವಾಯುವ್ಯ ಭಾರತದ ಶುಷ್ಕ ಪ್ರದೇಶಗಳು ರಾಜಸ್ಥಾನ, ಹರಿಯಾಣ, ಗುಜರಾತ್ ಮತ್ತು ಪಂಜಾಬ್ ರಾಜ್ಯಗಳಲ್ಲಿ ಅಂದಾಜು 8 ಕೋಟಿ ಜನರಿಗೆ ಇದರ ಉಪಯೋಗವಾಗಲಿದೆ ಎಂದು ತಿಳಿಸಿದ್ದಾರೆ.

## ಬೌದ್ಧ ಧರ್ಮದ ಬಗ್ಗೆ ಸಮಾವೇಶವನ್ನು ಆಯೋಜಿಸುತ್ತಿರುವ ಪ್ರವಾಸೋದ್ಯಮ ಸಚಿವಾಲಯವು



* ಪ್ರಸ್ತುತ ಬೌದ್ಧ ಪ್ರವಾಸೋದ್ಯಮದ ಸಾಮರ್ಥ್ಯವನ್ನು ಬಳಸಿಕೊಳ್ಳುವ ಉದ್ದೇಶದಿಂದ ಪ್ರವಾಸೋದ್ಯಮ ಸಚಿವಾಲಯವು ಇದೇ ಅಕ್ಟೋಬರ್. 4 ರಿಂದ ಅಕ್ಟೋಬರ್. 8 ರವರೆಗೆ 'ಬೌದ್ಧ ಸರ್ಕ್ಯೂಟ್ ರೈಲು FAM ಪ್ರವಾಸ ಮತ್ತು ಸಮ್ಮೇಳನವನ್ನು ಏರ್ಪಡಿಸಿದೆ.
* FAM ಪ್ರವಾಸವು ಮುಖ್ಯವಾಗಿ ಬೌದ್ಧ ತಾಣಗಳ ಭೇಟಿ ಮತ್ತು ಬುದ್ಧ ಗಯಾ ಹಾಗೂ ವಾರಣಾಸಿಯಲ್ಲಿ ಸಮ್ಮೇಳನಗಳನ್ನು ಒಳಗೊಂಡಿರುತ್ತದೆ.
* ಪ್ರವಾಸೋದ್ಯಮ ಸಚಿವಾಲಯವು ಪ್ರತಿ ಪರ್ಯಾಯ ವರ್ಷದಲ್ಲಿ ಈ ಬೌದ್ಧ ಸಮಾವೇಶವನ್ನು ಆಯೋಜಿಸುತ್ತದೆ, ಅಷ್ಟೇ ಅಲ್ಲದೇ 2021 ರಲ್ಲಿ ಅಂತರರಾಷ್ಟ್ರೀಯ ಬೌದ್ಧ ಸಮಾವೇಶವನ್ನು ನವೆಂಬರ್. 17 ರಿಂದ 21 ರವರೆಗೆ ನಿಗದಿಪಡಿಸಲಾಗಿದೆ.
* ಪ್ರವಾಸೋದ್ಯಮ ಸಚಿವಾಲಯವುವು ಬೌದ್ಧ ತಾಣಗಳಿಗಾಗಿ 'ಇನ್ಕ್ರೆಡಿಬಲ್ ಇಂಡಿಯಾ ವೆಬ್ ಸೈಟ್'(www.indiathelandofbuddha.in) ಜಾಲತಾಣವನ್ನು ಸಿದ್ಧಪಡಿಸಿದೆ, ಇದು ಭಾರತದಲ್ಲಿನ ಶ್ರೀಮಂತ ಬೌದ್ಧ ಪರಂಪರೆಗೆ ಉತ್ತೇಜನ ನೀಡುವ ಗುರಿಯನ್ನು ಹೊಂದಿದೆ.
* ಸಚಿವಾಲಯವು ಈ ಜಾಲತಾಣವನ್ನು ಜಪಾನೀಸ್, ಥಾಯ್, ಚೈನೀಸ್ ಮತ್ತು ವಿಯೆಟ್ನಾಮೀಸ್, ಭಾಷೆಗಳಲ್ಲಿ ರೂಪಿಸಿದೆ.

## ಭಾರತ ಜಪಾನ್ 5 ನೇ ಆವೃತ್ತಿಯ ಕಡಲ ದ್ವಿಪಕ್ಷೀಯ ವ್ಯಾಯಾಮ



* ಭಾರತದ 5ನೇ ಆವೃತ್ತಿಯ ಜಪಾನ್ ಕಡಲ ದ್ವಿಪಕ್ಷೀಯ ವ್ಯಾಯಾಮವನ್ನು ಇದೇ ಅಕ್ಟೋಬರ್. 6 ರಿಂದ ಭಾರತೀಯ ನೌಕಾಪಡೆ ಹಾಗೂ ಜಪಾನ್ ಕಡಲ ಸ್ವರಕ್ಷಣಾ ಪಡೆಗಳು ಅರಬ್ಬಿ ಸಮುದ್ರದಲ್ಲಿ ಆರಂಭಿಸಿವೆ.
* 2020 ಸೆಪ್ಟೆಂಬರ್ ನಲ್ಲಿ JIMEX ವ್ಯಾಯಾಮದ ಕೊನೆಯ ಆವೃತ್ತಿಯನ್ನು ನಡೆಸಲಾಯಿತು.
* ಕಾರ್ಯಾಚರಣೆಯ ವಿಧಿವಿಧಾನಗಳ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ JIMEX 21 ನ್ನು ನಡೆಸಲಾಗುತ್ತದೆ, ಇದನ್ನು ಉಭಯ ದೇಶಗಳ ನೌಕಾಪಡೆಗಳು ಸಿದ್ಧಪಡಿಸಿವೆ.
* ಪ್ರಸ್ತುತ 2012 ರ ಜನೇವರಿಯಲ್ಲಿ ಈ JIMEX ಸರಣಿಯ ವ್ಯಾಯಾಮಗಳನ್ನು ಪ್ರಾರಂಭಿಸಲಾಗಿದೆ, ಇದು ಕಡಲ ಭದ್ರತಾ ಸಹಕಾರದ ಮೇಲೆ ಕಣ್ಣಾವಲು ಇಡಲಿದೆ, ಇದನ್ನು ಭಾರತೀಯ ಮತ್ತು ಜಪಾನಿನ ನೌಕಾಪಡೆಗಳ ನಡುವೆ ಪ್ರತಿ '2' ವರ್ಷಗಳೊಗೊಮ್ಮೆ ನಡೆಸಲಾಗುತ್ತದೆ.
* ಇದಲ್ಲದೇ ಭಾರತ ಮತ್ತು ಜಪಾನ್ ದೇಶಗಳು ವಾರ್ಷಿಕವಾಗಿ "ಧರ್ಮ ಗಾರ್ಡಿಯನ್" ಎಂಬ ಜಂಟಿ ಭೂ ಸೇನಾ ವ್ಯಾಯಾಮವನ್ನು ನಡೆಸುತ್ತವೆ.
* ಪ್ರಸ್ತುತ ಮಲಬಾರ್ ಎಂಬ ತ್ರಿಪಕ್ಷೀಯ ಕಡಲ ವ್ಯಾಯಾಮದಲ್ಲಿ ಭಾರತ ಮತ್ತು ಜಪಾನ್ ಯುಎಸ್ಎ ತೊಡಗಿಕೊಂಡಿವೆ.


# 08-10-2021

## ಅಂಶು ಮಲಿಕ್ ಗೆ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ಬೆಳ್ಳಿ ಪದಕ



* ಪ್ರಸ್ತುತ ಭಾರತೀಯ ಮಹಿಳಾ ಕುಸ್ತಿಪಟು ಅಂಶು ಮಲಿಕ್ ಅವರು ವಿಶ್ವ ಕುಸ್ತಿ ಚಾಂಪಿಯನ್ ಶಿಪ್'ನಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ನಾರ್ವೆಯ ಓಸ್ಲೋದಲ್ಲಿ ನಡೆಯುತ್ತಿರುವ ಈ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನ 57 ಕೆಜಿ ವಿಭಾಗದ ಫೈನಲ್ ಪಂದ್ಯದಲ್ಲಿ ಅಂಶು ಮಲಿಕ್ ಅವರು 2016 ರ ಒಲಿಂಪಿಕ್ ಚಾಂಪಿಯನ್ ಹೆಲೆನ್ ಲೌಸಿ ಮಾರೌಲಿ ಅವರನ್ನು ಸೋಲಿಸಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ವಿಶ್ವ ಚಾಂಪಿಯನ್ ಶಿಪ್ ನಲ್ಲಿ ಭಾರತದ ಮೊದಲ ಮಹಿಳಾ ಫೈನಲಿಸ್ಟ್ ಆಗಿ ಅಂಶು ಮಲಿಕ್ ಅವರು ಹೊರಹೊಮ್ಮಿದ್ದಾರೆ.

## ಪರಿಸರ ಹೋರಾಟಗಾರ್ತಿ ಮಿರ್ಥಾ 'ಪೆರು' ದೇಶದ ನೂತನ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ



* ಪ್ರಸ್ತುತ ಪರಿಸರ ಹೋರಾಟಗಾರ್ತಿ ಮಿರ್ಥಾ ವಾಸ್ಕ್ವೆಝ್ ಅವರು 'ಪೆರು' ದೇಶದ ನೂತನ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.
* ಇತ್ತೀಚಿಗಷ್ಟೇ ಜುಲೈ ತಿಂಗಳಿನಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದ ಹಾಲಿ ಅಧ್ಯಕ್ಷ ಪೆಡ್ರೋ ಕ್ಯಾಸ್ಟಿಲೋ ಅವರು ಸಂವಿಧಾನದ ಸುಧಾರಣೆ ಸಹಿತ ಕೆಲ ಘೋಷಣೆಗಳನ್ನೂ ಮಾಡಿದ್ದರು, ಆದರೆ ಇವರು ತಮ್ಮ ಸಚಿವ ಸಂಪುಟವನ್ನು ರಚಿಸುವಲ್ಲಿ ವಿಫಲರಾದರು, ಇವರಾದ ನಂತರ ತೀವ್ರವಾದಿ ಎಡಪಂಥೀಯ ಮುಖಂಡ ಗ್ವಿಡೊ ಬೆಲಿಡೋ ಅವರು ಅಧಿಕಾರವನ್ನು ವಹಿಸಿಕೊಂಡರು ತದನಂತರ ಇವರ ಆಡಳಿತದಲ್ಲಿಯೂ ಕೂಡ ಹಲವಾರು ವಿವಾದಗಳು ಉಂಟಾದವು ಈ ಕಾರಣದಿಂದಾಗಿ ಇವರನ್ನು ಪ್ರಧಾನಿ ಸ್ಥಾನದಿಂದ ಕೈಬಿಡಲಾಯಿತು, ಇದೀಗ ಅವರ ಈ ಸ್ಥಾನಕ್ಕೆ ಪರಿಸರ ಹೋರಾಟಗಾರ್ತಿ ಮಿರ್ಥಾ ವಾಸ್ಕ್ವೆಝ್ರನ್ನು ಅವರನ್ನು ನೇಮಕ ಮಾಡಿದ್ದಾರೆ.
* ಪೆರು ದಕ್ಷಿಣ ಅಮೆರಿಕದ ಒಂದು ದೇಶವಾಗಿದೆ, ಇದು ಒಂದು ಅಮೆಜಾನ್ ಮಳೆಕಾಡು ಮತ್ತು ಮಚ್ಚು ಪಿಚು, ಆಂಡಿಸ್ ಪರ್ವತಗಳಲ್ಲಿರುವ ಪುರಾತನ ಇಂಕಾನ್ ನಗರವಾಗಿದೆ.
* ಪ್ರಸ್ತುತ ಪೆರುವಿನ ಶುಷ್ಕ ಪೆಸಿಫಿಕ್ ಕರಾವಳಿಯಲ್ಲಿ ಲಿಮಾ, ರಾಜಧಾನಿ, ಸಂರಕ್ಷಿತ ವಸಾಹತು ಕೇಂದ್ರ ಮತ್ತು ಪೂರ್ವ ಕೊಲಂಬಿಯನ್ ಕಲೆಯ ಪ್ರಮುಖ ಸಂಗ್ರಹಗಳನ್ನು ಹೊಂದಿದೆ.

## ಪ್ರಧಾನಿ 'ಮೋದಿ'ಯಿಂದ 35 PSA ಆಕ್ಸಿಜನ್ ಪ್ಲಾಂಟ್ ಉದ್ಘಾಟಣೆ



* ಪ್ರಧಾನಿ ಮೋದಿ ಅವರು ದೇಶಾದ್ಯಂತ 35 ಪಿಎಸ್ಎ ಆಕ್ಸಿಜನ್ ಪ್ಲಾಂಟ್‌ಗಳನ್ನು ಉದ್ಘಾಟಿಸಿದರು.
* "ಪಿಎಂ ಕೇರ್ಸ್" ಅಡಿಯಲ್ಲಿ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಆಕ್ಸಿಜನ್ ಪ್ಲಾಂಟ್ ಲಭ್ಯವಾಗಿವೆ, ಪ್ರಸ್ತುತ ಪಿಎಂ ಕೇರ್ಸ್ ದೇಶಾದ್ಯಂತ ಒಟ್ಟು 1,224 ಆಮ್ಲಜನಕ ಸ್ಥಾವರಗಳಿಗೆ ಧನಸಹಾಯ ನೀಡಿದೆ, ಅವುಗಳಲ್ಲಿ 1,100 ಕ್ಕೂ ಆಕ್ಸಿಜನ್ ಪ್ಲಾಂಟ್‌ಗಳು ಪ್ರತಿ ದಿನಕ್ಕೆ 1,750 ಮೆ.ಟನ್ ಆಮ್ಲಜನಕವನ್ನು ಉತ್ಪಾದಣೆ ಮಾಡುತ್ತಿವೆ.
* ಪ್ರಧಾನಿ ಮೋದಿ ಅವರು ಇದೇ ಸಂಧರ್ಭದಲ್ಲಿ, ಲಸಿಕೆ ಕಾರ್ಯಕ್ರಮವು ಶೀಘ್ರವೇ ಒಂದು ಬಿಲಿಯನ್ ಜನರನ್ನ ತಲುಪಲಿದೆ ಎಂದಿದ್ದಾರೆ, ಅಷ್ಟೇ ಅಲ್ಲದೆ ಭಾರತವು ಅತೀ ಕಡಿಮೆ ಸಮಯದಲ್ಲಿ ವೈದ್ಯಕೀಯ ಸೌಲಭ್ಯಗಳನ್ನ ನೀಡಿ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿದೆ.
* ಪ್ರಸ್ತುತ ಭಾರತವು ಸುಮಾರು 3,000 ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಿದೆ, ಈ ಮೊದಲು ಮಾಸ್ಕ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು, ಆದರೆ ಇದೀಗ ಭಾರತದಲ್ಲಿಯೇ ಮಾಸ್ಕ ಗಳನ್ನು ತಯಾರಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

## 'ಮಿಷನ್ ಕವಚ ಕುಂಡಲ' ಎಂಬ ವಿಶೇಷ ಲಸಿಕಾ ಅಭಿಯಾನವನ್ನು ಆರಂಭಿಸಲಿರುವ ಮಹಾರಾಷ್ಟ್ರ



* ಮಹಾರಾಷ್ಟ್ರ ರಾಜ್ಯ ಸರ್ಕಾರವು ಇದೇ ಅಕ್ಟೋಬರ್. 8 ರಿಂದ 14 ರವರೆಗೆ 'ಮಿಷನ್ ಕವಚ ಕುಂಡಲ' ಎಂಬ ವಿಶೇಷ ಲಸಿಕಾ ಕಾರ್ಯಕ್ರಮವನ್ನು ಆರಂಭಿಸಲಿದೆ ಎಂದು ಮಹಾರಾಷ್ಟ್ರ ರಾಜ್ಯ ಆರೋಗ್ಯ ಸಚಿವ ರಾಜೇಶ್ ತೋಪೆ ಅವರು ಮಾಹಿತಿ ನೀಡಿದ್ದಾರೆ.
* ಪ್ರಸ್ತುತ ಕೇಂದ್ರ ಸರ್ಕಾರವು ಇದೇ ಅಕ್ಟೋಬರ್. 15 ರೊಳಗೆ 100 ಕೋಟಿ ಜನರಿಗೆ ಕೋವಿಡ್ 19 ಲಸಿಕೆ ಹಾಕುವ ಗುರಿ ಹೊಂದಿದೆ ಈ ಕಾರಣದಿಂದಾಗಿ 'ಮಿಷನ್ ಕವಚ ಕುಂಡಲ' ಎಂಬ ವಿಶೇಷ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.
* ಈ ಲಸಿಕಾ ಅಭಿಯಾನದಿಂದ ಪ್ರತಿದಿನವು ಸುಮಾರು 15 ಲಕ್ಷ ಜನರಿಗೆ ಕೋವಿಡ್ 19 ಲಸಿಕೆ ಹಾಕುವ ಗುರಿಯನ್ನು ಹೊಂದಿದ್ದೇವೆ ಎಂದು ತೋಪೆ ಅವರು ತಿಳಿಸಿದ್ದಾರೆ.

* ಪ್ರಸ್ತುತ ಮಹಾರಾಷ್ಟ್ರ ರಾಜ್ಯದಲ್ಲಿ ಇಲ್ಲಿಯವರೆಗೆ 8.54 ಕೋಟಿ ಜನರಿಗೆ ಕೋವಿಡ್ 19 ಲಸಿಕೆ ಹಾಕಲಾಗಿದೆ ಎಂದು ತಿಳಿಸಿದ್ದಾರೆ.

## ಅಬ್ದುಲ್‌ರಜಾಕ್ ಗುರ್ನಾಗೆ 2021 ರ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿ



* 2021 ನೇ ಸಾಲಿನ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಯು ಕಾದಂಬರಿಕಾರ ಅಬ್ದುಲ್‌ರಜಾಕ್ ಗುರ್ನಾ ಅವರನ್ನು ಆಯ್ಕೆ ಮಾಡಿದ್ದಾರೆ, ಇವರು ಪೂರ್ವ ಆಫ್ರಿಕಾದ ತಾಂಜೇನಿಯಾದವರಾಗಿದ್ದರೆ.
* ಈ ಪ್ರಶಸ್ತಿಯನ್ನು ಗಲ್ಫ್ ರಾಷ್ಟ್ರಗಳಲ್ಲಿನ ಸಂಸ್ಕೃತಿ, ಏಷ್ಯಾ ಆಫ್ರಿಕಾ ಖಂಡಗಳ, ಹಾಗೂ ದೇಶಗಳಲ್ಲಿನ ವಲಸಿಗರ ಜೀವನದ ವಿಷಯಗಳ ಬಗೆಗಿನ ಸಹಾನುಭೂತಿ ಹಾಗೂ ರಾಜಿಯಿಲ್ಲದ ನಿಲುವುಗಳನ್ನು ತೋರಿಸುವದರಿಂದ ಈ ಪ್ರಶಸ್ತಿಯನ್ನು ಇವರಿಗೆ ಪ್ರಧಾನ ಮಾಡಲಾಗಿದೆ ಎಂದು ನೊಬೆಲ್ ಸಮಿತಿ ಮಾಹಿತಿಯನ್ನು ನೀಡಿದೆ.
* ಪೂರ್ವ ಆಫ್ರಿಕಾದ ತಾಂಜೇನಿಯಾದವರಾಗಿರುವ ಅಬ್ದುಲ್‌ರಜಾಕ್ ಗುರ್ನಾ ಅವರು ಒಟ್ಟು '3' ಕಾದಂಬರಿಗಳನ್ನು ರಚಿಸಿದ್ದಾರೆ, ಅವುಗಳಲ್ಲಿ ಮೊದಲ 'ಪ್ಯಾರಡೈಸ್' ಕಾದಂಬರಿಯು 1994 ರಲ್ಲಿ ಪ್ರಕಟವಾಗಿದೆ, ಮತ್ತೆ ಇವರು 'ಬೈ ದಿ ಸೀ' ಎಂಬ ಕಾದಂಬರಿಯನ್ನು 2001 ರಲ್ಲಿ ಪ್ರಕಟಿಸಿದ್ದಾರೆ, ಇದಾದನಂತರ 'ಡೆಜರ್ಸನ್' ಎಂಬ ಕಾದಂಬರಿಯನ್ನು 2005 ರಲ್ಲಿ ಪ್ರಕಟಿಸಿದ್ದಾರೆ ಎಂದು ತಿಳಿದು ಬಂದಿದೆ.

## ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳುವ ಅಧಿಕಾರ ಹೊಂದಿದೆ



* ಪ್ರಸ್ತುತ 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿ' (NGT)ಯು ಪರಿಸರ ಹಿತರಕ್ಷಣೆಗಾಗಿ ಸ್ವಯಂ ಪ್ರೇರಿತ ಕೇಸ್ ದಾಖಲಿಸಿಕೊಳ್ಳುವ ಅಧಿಕಾರ ಹೊಂದಿದೆ ಎಂದು ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ.
* ಪ್ರಸ್ತುತ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು, ಸಾರ್ವಜನಿಕರ ದೂರು ಹಾಗೂ ಮಾಧ್ಯಮಗಳ ವರದಿಗಳ ಆಧಾರದ ಮೇಲೆ ಪರಿಸರಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ತನಿಖೆಯನ್ನು ನಡೆಸಬಹುದಾಗಿದೆ ಎಂದು ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ಹೃಷಿಕೇಶ್ ರಾಯ್ ಹಾಗೂ ಸಿ.ಟಿ. ರವಿಕುಮಾರ್ ಅವರ ಪೀಠವು ಈ ಮಹತ್ವದ ತೀರ್ಪನ್ನು ನೀಡಿದೆ.

* ಈ ಮೊದಲು ಕೇಂದ್ರ ಸರ್ಕಾರವು NGT ಗೆ ಸ್ವಯಂ ಪ್ರೇರಿತ ಕೇಸ್ ದಾಖಲಿಸಿಕೊಳ್ಳುವ ಅಧಿಕಾರವಿಲ್ಲ, ಆದರೆ ಸಂವಿಧಾನಿಕ ಪೀಠಗಳಿಗೆ ಮಾತ್ರ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳುವ ಅಧಿಕಾರ ಇದೆ ಎಂದು ಆಕ್ರೋಶವನ್ನು ಹೊರಹಾಕಿತ್ತು, ಆದರೆ ಕೇಂದ್ರದ ಈ ವಾದವನ್ನು ಮಾನ್ಯ ಮಾಡದ ನ್ಯಾಯಾಲಯ NGT ಗೆ ಸ್ವಯಂ ಪ್ರೇರಿತ ಕೇಸ್ ದಾಖಲಿಸಿಕೊಳ್ಳುವ ಅಧಿಕಾರ ಇದೆ ಎಂದು ತಿಳಿಸಿದೆ.

## ವಿಶ್ವ ಆರೋಗ್ಯ ಸಂಸ್ಥೆಯು ಜಗತ್ತಿನ ಮೊದಲ ಮಲೇರಿಯಾ ಲಸಿಕೆಗೆ ಅನುಮೋದನೆ




* ವಿಶ್ವ ಆರೋಗ್ಯ ಸಂಸ್ಥೆ (WHO)ಯು ಜಗತ್ತಿನ ಮೊದಲ ಮಲೇರಿಯಾ ಲಸಿಕೆಗೆ ಅನುಮೋದನೆ ನೀಡಿದೆ.
* ಈ ಮೊದಲು 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸೇರಿ ಪ್ರತಿ ವರ್ಷ ಅಂದಾಜು 5,00,000 ಜನರು ಮಲೇರಿಯಾದಿಂದ ಸಾವನ್ನಪ್ಪುತ್ತಿದ್ದಾರೆ.
* ಮಲೇರಿಯಾದಿಂದ ಆಫ್ರಿಕಾ ಭಾಗದಲ್ಲಿ ಅತಿಹೆಚ್ಚಿನ ಸಾವುಗಳು ಉಂಟಾಗುತ್ತಿವೆ.
* ವಿಶ್ವ ಆರೋಗ್ಯ ಸಂಸ್ಥೆಯು 'ಮಸ್ಕಿರಿಕ್ಸ್ (Mosquirix)' ಎಂಬ ಹೆಸರಿನ ಲಸಿಕೆಗೆ ಅನುಮೋದನೆ ನೀಡಿದೆ, ಈ ಲಸಿಕೆಯು ಮಲೇರಿಯಾ ಅಷ್ಟೇ ಅಲ್ಲದೇ ಬೇರೆ ಯಾವುದೇ ಜೀವಿಯಿಂದ ಉಂಟಾಗುವ ರೋಗಗಳನ್ನೂ ತಡೆಯುತ್ತದೆ.
* ಅನಾಫಿಲಿಸ್ ಹೆಣ್ಣು ಸೊಳ್ಳೆ ಕಡಿತದಿಂದ ಮನುಷ್ಯನ ದೇಹಕ್ಕೆ ಪ್ಲಾಸ್ಮೋಡಿಯಾ ರೋಗ ನಿರೋಧಕ ಶಕ್ತಿಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ ಹಾಗೂ ಇದರಿಂದ ಫಾಲ್ಸಿಪರಮ್ ಮಲೇರಿಯಾ ಹರಡುತ್ತದೆ.
* ಇದೀಗ ಗ್ಲ್ಯಾಕ್ಸೊಸ್ಮಿತ್‌ಕ್ಲೈನ್ ಕಂಪನಿಯು ಮಲೇರಿಯಾ ತಡೆಗಟ್ಟುವ ಹೊಸ ಲಸಿಕೆಯನ್ನು ಸಿದ್ಧಪಡಿಸಿದೆ, ಈ ಮಲೇರಿಯಾ ಲಸಿಕೆಯನ್ನು ಮೊದಲ ಲಸಿಕೆಯನ್ನು ಆಫ್ರಿಕಾದಾದ್ಯಂತ ಇರುವ ಮಕ್ಕಳಿಗೆ ನೀಡಬೇಕೆಂದು ಆದೇಶಿಸಿದೆ.
* ಈ ಮಲೇರಿಯಾ ಪ್ರಕರಣಗಳಿರುವ ರಾಷ್ಟ್ರಗಳಿಗೆ ಲಸಿಕೆ ಪೂರೈಕೆಮಾಡುವದರಿಂದ, ಪ್ರಸ್ತುತ 54 ಲಕ್ಷ ಪ್ರಕರಣಗಳು ಮತ್ತು 23,000 ಮಕ್ಕಳ ಸಾವುಗಳನ್ನೂ ತಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಅಮೇರಿಕಾದಲ್ಲಿ ಪ್ರತಿ ವರ್ಷವು 2,000 ಪ್ರಕರಣಗಳು ದಾಖಲಾಗುತ್ತಿವೆ, ಅದು ಹೆಚ್ಚಾಗಿ ಬೇರೆ ರಾಷ್ಟ್ರಗಳಿಂದ ಬಂದಿರುವ ಪ್ರಜೆಗಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.
* ಪ್ರಸ್ತುತ ಕೀನ್ಯಾ, ಮಾಲಾವಿ, ಮತ್ತು ಘಾನಾದಲ್ಲಿ ಲಸಿಕೆಯ ಪ್ರಯೋಗವನ್ನು ಆರಂಭಿಸಲಾಗಿದೆ. ಇದೀಗ 23 ಲಕ್ಷಕ್ಕೂ ಅಧಿಕ ಲಸಿಕೆ ಹಾಕಲಾಗಿದೆ, ಅದರಲ್ಲಿ 8 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಲಸಿಕೆ ಹಾಕಲಾಗಿದೆ ಎಂದು ತಿಳಿಸಿದ್ದಾರೆ.

## ಭಾರತೀಯರಿಗೆ ಲಭಿಸಿದ ಅಂತಾರಾಷ್ಟ್ರೀಯ ಹಾಕಿ ಪ್ರಶಸ್ತಿಗಳು

HOCKEY INDIA

* ಪ್ರಸ್ತುತ ಭಾರತಕ್ಕೆ ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ವಾರ್ಷಿಕ ಪ್ರಶಸ್ತಿಗಳು ಲಭಿಸಿವೆ, ಇತ್ತೀಚಿಗೆ ಭಾರತೀಯ ಹಾಕಿ ಪಟುಗಳು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನವನ್ನು ನೀಡಿದ್ದಾರೆ.
* ಭಾರತಕ್ಕೆ ಪುರುಷರ ವಿಭಾಗದಲ್ಲಿ ಲಭಿಸಿರುವ ಅಂತಾರಾಷ್ಟ್ರೀಯ ಹಾಕಿ ಪ್ರಶಸ್ತಿಗಳು: ಹರ್ಮನ್‌ಪ್ರೀತ್ ಸಿಂಗ್ ಅವರು ವರ್ಷದ ಶ್ರೇಷ್ಠ ಆಟಗಾರ ಪ್ರಶಸ್ತಿ ಪಡೆದುಕೊಂಡಿದ್ದಾರೆ. ವಿವೇಕ್ ಸಾಗರ್ ಪ್ರಸಾದ್'ಗೆ ವರ್ಷದ ಉದಯೋನ್ಮುಖ ಆಟಗಾರ ಪ್ರಶಸ್ತಿ ಲಭಿಸಿದೆ. ಪಿ.ಆರ್. ಶ್ರೀಜೇಶ್ ಅವರಿಗೆ ಶ್ರೇಷ್ಠ ಪುರುಷ ಗೋಲ್‌ಕೀಪರ್ ಪ್ರಶಸ್ತಿ ಲಭಿಸಿದೆ. ಗ್ರಹಾಂ ರೀಡ್‌ಗೆ ಶ್ರೇಷ್ಠ ಪುರುಷರ ಕೋಚ್ ಪ್ರಶಸ್ತಿ ಲಭಿಸಿದೆ.
* ಅಂತಾರಾಷ್ಟ್ರೀಯ ಹಾಕಿ ಪ್ರಶಸ್ತಿಗಳುನ್ನು ಪಡೆದ ಮಹಿಳಾ ವಿಭಾಗ: ಗುರ್ಜಿತ್ ಕೌರ್ ಅವರು ವರ್ಷದ ಶ್ರೇಷ್ಠ ಆಟಗಾರ್ತಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಸವಿತಾ ಪುನಿಯ ಅವರಿಗೆ ಶ್ರೇಷ್ಠ ಮಹಿಳಾ ಗೋಲ್ ಕೀಪರ್ ಪ್ರಶಸ್ತಿ ಲಭಿಸಿದೆ. ಶರ್ಮಿಳಾದೇವಿಗೆ ವರ್ಷದ ಉದಯೋನ್ಮುಖ ಆಟಗಾರ್ತಿ ಪ್ರಶಸ್ತಿ ಲಭಿಸಿದೆ.ಮರಿನ್ ಸೋರ್ಡ್ ಅವರಿಗೆ ಮಹಿಳಾ ತಂಡದ ಕೋಚ್ ಪ್ರಶಸ್ತಿ ಲಭಿಸಿದೆ.

## ನಾಡಹಬ್ಬ ಮೈಸೂರು ದಸರಾಗೆ ಚಾಲನೆ ನೀಡಿದ ಮಾಜಿ ಸಿಎಂ ಎಸ್.ಎಂ. ಕೃಷ್ಣ



* 411 ನೇ ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾಗೆ ಮಾಜಿ ಸಿಎಂ ಎಸ್.ಎಂ. ಕೃಷ್ಣ ಅವರು ಚಾಲನೆ ನೀಡಿದರು, ಎಸ್.ಎಂ.ಕೃಷ್ಣ ಅವರು ಚಾಮುಂಡಿ ಬೆಟ್ಟದಲ್ಲಿ ನಾಡದೇವಿಗೆ ಪೂಜೆ ಸಲ್ಲಿಸಿ ನವರಾತ್ರಿ ವೈಭವ ನಾಡಹಬ್ಬ ದಸರಾಗೆ ಚಾಲನೆ ನೀಡಿದ್ದಾರೆ.

## ವಿಶ್ವದ ಪ್ರಬಲ ಪಾಸ್‌ಪೋರ್ಟ್‌ಗಳ ಪಟ್ಟಿ




* ಹೆನ್ಲೆ ಪಾಸ್‌ಪೋರ್ಟ್ ಸೂಚ್ಯಂಕವು ವಿಶ್ವದ ಎಲ್ಲ ಪಾಸ್ ಪೋರ್ಟ್‌ಗಳನ್ನು ಅಳೆದು, ಅವುಗಳಿಗೆ ಶ್ರೇಯಾಂಕವನ್ನು ನೀಡುತ್ತದೆ.
* ಹೆನ್ಲಿ & ಪಾರ್ಟ್ನರ್ಸ್ ಈ ಪಾಸ್‌ಪೋರ್ಟ್ ಸೂಚ್ಯಂಕವನ್ನು ಅಂತಾರಾಷ್ಟ್ರೀಯ ವಾಯು ಸಾರಿಗೆ ಸಂಸ್ಥೆಯಿಂದ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ಸೂಚ್ಯಂಕವನ್ನು ಸಿದ್ಧಪಡಿಸಿದೆ.
* ಜಗತ್ತಿನ ಕಳಪೆ ಪಾಸ್‌ಪೋರ್ಟ್ ಹೊಂದಿದ ದೇಶಗಳು: ಅಫ್ಘಾನಿಸ್ತಾನ 26 ಇರಾಕ್ 28 ಸಿರಿಯಾ 29 ಪಾಕಿಸ್ತಾನ 31, ಯೆಮನ್ 33, ಸೊಮೇಲಿಯಾ 34 ಲಿಬಿಯಾ 37 ನೇಪಾಳ ಪ್ಯಾಲೆಸ್ಟೀನ್ ಪ್ರದೇಶ 37, ಉತ್ತರ ಕೊರಿಯಾ 39 ಕೊಸೋವೊ, ಬಾಂಗ್ಲಾದೇಶ 40.
* ಜಪಾನ್ ಮತ್ತು ಸಿಂಗಾಪೂರ್ ದೇಶವು 192 ಪಾಯಿಂಟ್ ಪಡೆದು ವಿಶ್ವದಲ್ಲಿಯೇ ಅತ್ಯಂತ ಪ್ರಬಲ ಪಾಸ್‌ಪೋರ್ಟ್ ನ್ನು ಹೊಂದಿದೆ.
* ಜರ್ಮನಿ ಹಾಗೂ ದಕ್ಷಿಣ ಕೊರಿಯಾ ದೇಶಗಳು 190 ಪಾಯಿಂಟ್ಸ್ ಪಡೆದು 2 ನೇ ಸ್ಥಾನ ಪಡೆದುಕೊಂಡಿವೆ.
*ಫಿನ್‌ಲ್ಯಾಂಡ್, ಇಟಲಿ, ಲಕ್ಸೆಂಬರ್ಗ್, ಹಾಗೂ ಸ್ಪೇನ್ ದೇಶಗಳು 189 ಪಾಯಿಂಟ್ಸ್ ಪಡೆದು 3 ನೇ ಸ್ಥಾನದಲ್ಲಿವೆ.
* ಆಸ್ಟ್ರಿಯಾ, ಡೆನ್ಮಾರ್ಕ್ ದೇಶಗಳು 188 ಪಾಯಿಂಟ್ಸ್ ಪಡೆದು 4 ನೇ ಸ್ಥಾನದಲ್ಲಿವೆ.
* ಫ್ರಾನ್ಸ್, ಐರ್ಲೆಂಡ್, ನೆದರ್‌ಲ್ಯಾಂಡ್ಸ್, ಪೋರ್ಚುಗಲ್ ಹಾಗೂ ಸ್ವೀಡನ್ ದೇಶಗಳು 187 ಪಾಯಿಂಟ್ಸ್ ಪಡೆದು 5 ನೇ ಸ್ಥಾನದಲ್ಲಿವೆ.
* ಭಾರತದ ಪಾಸ್‌ಪೋರ್ಟ್ ಈ ವರ್ಷ 90 ನೇ ಸ್ಥಾನವನ್ನುಪಡೆದಿದೆ.

# 09-10-2021

## ಶೂಟರ್ ಮನು ಭಾಕರ್ ಗೆ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ 4 ನೇ ಚಿನ್ನ



* ಪ್ರಸ್ತುತ ಭಾರತದ ಶೂಟರ್ ಮನು ಭಾಕರ್‌ಗೆ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ '4' ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಪೆರುವಿನಲ್ಲಿ ನಡೆಯುತ್ತಿರುವ ಈ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್ ನಲ್ಲಿ 25 ಮೀ. ಪಿಸ್ತೂಲ್ ವಿಭಾಗದ ಫೈನಲ್ ಹಂತದಲ್ಲಿ ಮನು ಭಾಕರ್ ಅವರು 16 4 ರಿಂದ ಅಮೇರಿಕ ದೇಶವನ್ನು ಸೋಲಿಸಿದರು.
* ಪುರುಷರ 25 ಮೀ. ರಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಭಾರತಕ್ಕೆ ಬೆಳ್ಳಿ ಪದಕ ಲಭಿಸಿದೆ.

## ಭಾರತದಲ್ಲಿ 'ಮೇಡ್ ಇನ್ ಚೀನಾ' ಕಾರು ಮಾರಾಟ ಮಾಡದಂತೆ ಟೆಸ್ಲಾಗೆ ಸೂಚನೆ ನೀಡಿದ ನಿತಿನ್ ಗಡ್ಕರಿ




* ಪ್ರಸ್ತುತ ಕೇಂದ್ರ ಸಾರಿಗೆ ಸಚಿವರಾದ ನಿತಿನ್ ಗಡ್ಕರಿ ಅವರು ಚೀನಾದಲ್ಲಿ ತಯಾರಿಸಿರುವ ಕಾರುಗಳನ್ನು ಭಾರತದಲ್ಲಿ ಮಾರಾಟ ಮಾಡದಂತೆ ಟೆಸ್ಲಾ ಕಂಪನಿಗೆ ಸೂಚನೆ ನೀಡಿದ್ದೇವೆ ಎಂದು ತಿಳಿಸಿದ್ದಾರೆ.
* ಕೇಂದ್ರ ಸಾರಿಗೆ ಸಚಿವರಾದ ನಿತಿನ್ ಗಡ್ಕರಿ ಅವರು 2021 ರ ಇಂಡಿಯಾ ಟುಡೇ ಕಾನ್‌ಕ್ಲೇವ್ ನಲ್ಲಿ ಈ ವಿಷಯದ ಬಗ್ಗೆ ಮಾತನಾಡಿದರು, ಇದೀಗ ಭಾರತದಲ್ಲಿಯೇ ಟೆಸ್ಲಾ ಎಲೆಕ್ಟ್ರಿಕ್ ಕಾರುಗಳನ್ನ ತಯಾರಿಸಿ ಮಾರಾಟ ಮಾಡಿ ಹಾಗೂ ಭಾರತದಿಂದ ರಫ್ತು ಮಾಡಿ, ಅದಕ್ಕೆ ಅಗತ್ಯವಿರುವ ಎಲ್ಲ ಬೆಂಬಲವನ್ನು ನಾವು ನೀಡುತ್ತೇವೆ ಎಂದು ಟೆಸ್ಲಾ ಕಂಪನಿಗೆ ತಿಳಿಸಿದ್ದಾರೆ.
* ಪ್ರಸ್ತುತ 2030 ರ ಅವಧಿಗೆ ಎಲೆಕ್ಟ್ರಿಕ್ ಬೈಕ್ ಹಾಗೂ ಕಾರುಗಳ ಬಳಕೆಯು ಶೇ. 40 ಕ್ಕೆ, ಮತ್ತು ಎಲೆಕ್ಟ್ರಿಕ್ ಬಸ್‌ಗಳ ಬಳಕೆಯು ಶೇ. 10 ಕ್ಕೆ ಏರಿಕೆಯಾದರೆ ಸುಮಾರು 3.5 ಲಕ್ಷ ಕೋಟಿ ರೂ.ನ 15.6 ಕೋಟಿ ಟನ್ ಕಚ್ಚಾ ತೈಲ ಬಳಕೆ ಕಡಿಮೆಗೊಳಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## 'ಟಾಟಾ ಸನ್ಸ್'ಗೆ ತೆಕ್ಕೆಗೆ 18,000 ಕೋಟಿ ರೂ. ಮೌಲ್ಯದ ಸರ್ಕಾರಿ ಸ್ವಾಮ್ಯದ 'ಏರ್ ಇಂಡಿಯಾ'




* ಟಾಟಾ ಸನ್ಸ್ ಈ ಹಿಂದೆ ಅಂದರೆ 90 ವರ್ಷಗಳ ಹಿಂದೆ ಪ್ರಾರಂಭಿಸಿದ ವಿಮಾನಯಾನ ಕಂಪನಿಯನ್ನು ಟಾಟಾ ಸನ್ಸ್ ಮರಳಿ ತನ್ನ ಅಧೀನಕ್ಕೆ ಪಡೆದುಕೊಂಡಿದೆ.
* ಪ್ರಸ್ತುತ ಭಾರತೀಯ ಕೇಂದ್ರ ಸರ್ಕಾರವು ಏರ್ ಇಂಡಿಯಾ ಖರೀದಿಗೆ ಟಾಟಾ ಸನ್ಸ್ ಸಲ್ಲಿಸಿರುವ 18 ಸಾವಿರ ಕೋಟಿ ರೂ. ಮೌಲ್ಯದ ಬಿಡ್ 'ಗೆ ಒಪ್ಪಿಗೆ ನೀಡಿದೆ, ಇದೀಗ ಸರ್ಕಾರಿ ಸ್ವಾಮ್ಯದ ಏರ್ ಇಂಡಿಯಾದ ಶೇ. 100ರಷ್ಟು ಷೇರುಗಳನ್ನು ಟಾಟಾ ಸನ್ಸ್ ನೀಡಿದೆ.
* ಇದೀಗ ಟಾಟಾ ಸಮೂಹವು ಸುಮಾರು 2,700 ಕೋಟಿ ರೂ. ಹಣವನ್ನು ಸಂದಾಯ ಮಾಡಿ, ಇನ್ನು 15,300 ಕೋಟಿ ರೂ. ಮೌಲ್ಯದ ಸಾಲವನ್ನು ವಹಿಸಿಕೊಂಡಿದೆ, ಈ ಮಾಹಿತಿಯನ್ನು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಅವರು ನೀಡಿದ್ದಾರೆ.
* ಈ ಏರ್ ಇಂಡಿಯಾ ಕಂಪನಿಯು ಟಾಟಾ ಸಮೂಹದ ಪಾಲಿಗೆ ಸೇರ್ಪಡೆಯಾಗಿರುವ 3 ನೇ ವಿಮಾನ ಕಂಪನಿಯಾಗಿದೆ.
* ಪ್ರಸ್ತುತ ಸರ್ಕಾರಿ ಸ್ವಾಮ್ಯದ 'ಏರ್ ಇಂಡಿಯಾ'ದ ಬಿಡ್ಡಿಂಗ್ ಷರತ್ತುಗಳು, ಏರ್ ಇಂಡಿಯಾದಲ್ಲಿ ಇದೀಗ ಕಾರ್ಯ ನಿರ್ವಹಿಸುತ್ತಿರುವ 12,082 ಉದ್ಯೋಗಿಗಳನ್ನು ಒಂದು ವರ್ಷದ ಅವಧಿಗೆ ತೆಗೆದುಹಾಕುವಂತಿಲ್ಲ, ನಂತರ ಈ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆ ಘೋಷಣೆ ಮಾಡಬಹುದಾಗಿದೆ, ಅಷ್ಟೇ ಅಲ್ಲದೇ ಟಾಟಾ5 ವರ್ಷಗಳವರೆಗೆ ಏರ್ ಇಂಡಿಯಾ ಬ್ರ್ಯಾಂಡ್ ಹಾಗೂ ಲಾಂಛನವನ್ನು ಬೇರೆ ಯಾವುದೇ ಕಂಪನಿಗೆ ವರ್ಗಾವಣೆ ಅಧಿಕಾರವಿರುವದಿಲ್ಲ, ಒಂದು ವೇಳೆ ಬ್ರ್ಯಾಂಡ್ ಮತ್ತು ಲಾಂಛನವನ್ನು ಮಾರಾಟ ಮಾಡುವದಾದರೆ ಭಾರತೀಯ ಕಂಪನಿಗೆ ಮಾತ್ರ ಮಾರಾಟ ಮಾಡಬಹುದು ಎಂದು ಸರ್ಕಾರ ತಿಳಿಸಿದೆ.

## IMPS ವಹಿವಾಟಿನ ಮಿತಿ 2 ರಿಂದ 5 ಲಕ್ಷಕ್ಕೆ ಹೆಚ್ಚಿಸಿದ RBI



* ಭಾರತೀಯ ರಿಸರ್ವ್ ಬ್ಯಾಂಕ್ (RBI) ಮುಂದಿನ ಆರ್ಥಿಕ ಚೇತರಿಕೆಗೆ ನೆರವಾಗುವ ನಿಟ್ಟಿನಲ್ಲಿ ಪ್ರಮುಖ ಬಡ್ಡಿದರಗಳನ್ನು ಯಥಾಸ್ಥಿತಿಯಲ್ಲಿಟ್ಟಿದೆ.
* RBI ಹಣಕಾಸು ನೀತಿ ಸಮಿತಿಯು ರೆಪೋ ದರದಲ್ಲಿ ಯಾವುದೇ ಬದಲಾವಣೆಯನ್ನು ತರದೇ ರಿವರ್ಸ್ ರೆಪೋ ದರವನ್ನು ಶೇ. 3.35 ರೂಂದಿಗೆ ಯಥಾಸ್ಥಿತಿಯಲ್ಲಿಟ್ಟಿದೆ.
* RBI ಸತತ 8 ನೇ ಬಾರಿಗೆ ರೆಪೋ ದರದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಲ್ಲ.
* ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು 6 ಸದಸ್ಯರ ಹಣಕಾಸು ನೀತಿ ಸಮಿತಿ ಜೊತೆಗೆ '3' ದಿನಗಳ ಸಭೆ ನಡೆಸಿದ ಈ ಹೊಸ ಹಣಕಾಸು ನೀತಿಯನ್ನು ಘೋಷಣೆ ಮಾಡಿದ್ದಾರೆ.
* ಭಾರತೀಯ ಆರ್ಥಿಕತೆಯು ಚೇತರಿಕೆಯಾಗುತ್ತಿದೆ, ಪ್ರಸ್ತುತ ಭಾರತವು 2021 22 ರ ಆರ್ಥಿಕ ವರ್ಷದಲ್ಲಿ 9.5 ಶೇಕಡಾ ಜಿಡಿಪಿಯನ್ನು ಸಾಧಿಸುವ ಪಥದಲ್ಲಿದೆ ಎಂದು RBI ಗವರ್ನರ್ ಮಾಹಿತಿ ನೀಡಿದ್ದಾರೆ, ಅಷ್ಟೇ ಅಲ್ಲದೇ ಗ್ರಾಹಕರ ಅನುಕೂಲಕ್ಕಾಗಿ IMPS ವಹಿವಾಟಿನ ಮಿತಿಯನ್ನು 2 ಲಕ್ಷದಿಂದ 5 ಲಕ್ಷಕ್ಕೆ ಏರಿಸಲಾಗಿದೆ ಎಂದು ತಿಳಿಸಿದ್ದಾರೆ.

## ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಬೆಳ್ಳಿ ಮತ್ತು ಕಂಚು

* ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಭಾರತದ ಅನ್ಶು ಮಲಿಕ್ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ, ಮತ್ತು ಸರಿತಾ ಮೋರ್ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.
* ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ 57 ಕೆಜಿ ವಿಭಾಗದಲ್ಲಿ ಭಾರತೀಯ ಕುಸ್ತಿಪಟುಗಳು ಪಾಲ್ಗೊಂಡಿದ್ದರು.
* ಪ್ರಸ್ತುತ ಇದೇ ಮೊದಲ ಬಾರಿ ವಿಶ್ವ ಮಹಿಳಾ ಕುಸ್ತಿಯಲ್ಲಿ ಭಾರತಕ್ಕೆ ಬೆಳ್ಳಿ ಲಭಿಸಿದೆ, ಈ ಮೊದಲು 2006 ರಲ್ಲಿ ಅಲ್ಕಾ ತೋಮರ್ ಅವರಿಗೆ ಕಂಚು, ಮತ್ತೆ 2012 ರಲ್ಲಿ ಗೀತಾ ಫೋಗಟ್

ಹಾಗೂ ಬಬಿತಾ ಫೋಗಟ್ ಅವರಿಗೂ ಕಂಚು, ಮತ್ತೇ 2018 ರಲ್ಲಿ ಪೂಜಾ ದಂಡಾ ಅವರಿಗೆ ಕಂಚು, ಕೊನೆಯದಾಗಿ 2019 ರಲ್ಲಿಯೂ ಕೂಡ ವಿನೇಶಾ ಫೋಗಟ್ ಅವರಿಗೆ ಕಂಚಿನ ಪದಕವನ್ನು ಜಯಿಸಿದ್ದರು.

## 'ಪೀಣ್ಯ ಎಕ್ಸ್‌ಪ್ರೆಸ್' ಖ್ಯಾತಿಯ ಅಭಿಮನ್ಯು ಮಿಥುನ್ ಕ್ರಿಕೆಟ್ ಗೆ ವಿದಾಯ



* ಕರ್ನಾಟಕ ತಂಡದ ವೇಗದ ಬೌಲರ್, 'ಪೀಣ್ಯ ಎಕ್ಸ್‌ಪ್ರೆಸ್' ಖ್ಯಾತಿಯ ಅಭಿಮನ್ಯು ಮಿಥುನ್ ಪ್ರಥಮ ದರ್ಜೆ ಕ್ರಿಕೆಟ್‌ಗೆ ನಿವೃತ್ತಿ ಘೋಷಣೆ ಮಾಡಿದ್ದಾರೆ.
* 2013 14, 2014 15 ನೇ ಸಾಲಿನ ದೇಶೀಯ ಕ್ರಿಕೆಟ್‌ನಲ್ಲಿ ಡಬಲ್ ಹ್ಯಾಟ್ರಿಕ್ ಪ್ರಶಸ್ತಿ ರಣಜಿ, ಇರಾನಿ, ವಿಜಯ ಹಜಾರೆ ಪ್ರಶಸ್ತಿಗಳನ್ನೂ ಜಯಿಸಿರುವ ಕರ್ನಾಟಕ ತಂಡದ ಸದಸ್ಯರಾಗಿದ್ದರು.
* ಅಭಿಮನ್ಯು ಮಿಥುನ್ ಅವರು 'ಪೀಣ್ಯ ಎಕ್ಸ್‌ಪ್ರೆಸ್' ಎಂಬ ಖ್ಯಾತಿಯನ್ನು ಪಡೆದುಕೊಂಡಿದ್ದರು, ಅಷ್ಟೇ ಅಲ್ಲದೇ ಇವರು ಸುಮಾರು 12 ವರ್ಷಗಳಿಂದ ಕರ್ನಾಟಕ ರಾಜ್ಯ ತಂಡದ ವೇಗದ ಬೌಲಿಂಗ್ ವಿಭಾಗದಲ್ಲಿ ತಂಡವನ್ನು ಮುನ್ನಡೆಸಿದ್ದರು.
* ಭಾರತ ತಂಡದ ಪರವಾಗಿ 2010 11 ನೇ ಸಾಲಿನಲ್ಲಿ 4 ಟೆಸ್ಟ್, 5 ಏಕದಿನ ಪಂದ್ಯಗಳಲ್ಲಿ ಆಟವಾಡಿದ್ದರು, ಹಾಗೂ 103 ಪ್ರಥಮ ದರ್ಜೆ ಪಂದ್ಯಗಳಿಂದ 338 ವಿಕೆಟ್ ಪಡೆದುಕೊಂಡಿದ್ದಾರೆ, ಮತ್ತು 96 ಲಿಸ್ಟ್ ಎ ಪಂದ್ಯ ಹಾಗೂ 74 ಟಿ20 ಪಂದ್ಯಗಳಿಂದ ಕ್ರಮವಾಗಿ 136 ಹಾಗೂ 69 ವಿಕೆಟ್ ಪಡೆದುಕೊಂಡಿದ್ದಾರೆ.

## ಪ್ರಧಾನಿ 'ಮೋದಿ'ಯಿಂದ 'ಭಾರತೀಯ ಬಾಹ್ಯಾಕಾಶ ಸಂಘ'ಕ್ಕೆ ಚಾಲನೆ

INDIAN SPACE ASSOCIATION
ISpA

* ಪ್ರಧಾನಿ ನರೇಂದ್ರ ಮೋದಿ ಅವರು ಅಕ್ಟೋಬರ್. 11 ರಂದು 'ಭಾರತೀಯ ಬಾಹ್ಯಾಕಾಶ ಸಂಸ್ಥೆ'(ISPA) ಯನ್ನು ಡಿಜಿಟಲ್ ಆಗಿ ಪ್ರಾರಂಭಿಸಲಿದ್ದಾರೆ.
* ಭಾರತೀಯ ಬಾಹ್ಯಾಕಾಶ ಸಂಘವು ಇದೊಂದು ಬಾಹ್ಯಾಕಾಶ ಹಾಗೂ ಉಪಗ್ರಹ ಕಂಪನಿಗಳ ಪ್ರಮುಖ ಉದ್ಯಮ ಸಂಘವಾಗಿದೆ.
* ಭಾರತೀಯ ಬಾಹ್ಯಾಕಾಶ ಸಂಘ ಸ್ಥಾಪಕ ಸದಸ್ಯರಲ್ಲಿ ಟಾಟಾ ಸಮೂಹದ ನೆಲ್ಕೊ, ಭಾರತಿ ಏರ್‌ಟೆಲ್, ಲಾರ್ಸೆನ್ ಮತ್ತು ಟೂಬ್ರೊ, ಮ್ಯಾಪ್‌ಮಿಂಡಿಯಾ, ಒನ್‌ವೆಬ್, ವಾಲ್‌ಚಂದನಗರ್ ಇಂಡಸ್ಟ್ರೀಸ್ ಹಾಗೂ ಅನಂತ್ ಟೆಕ್ನಾಲಜಿ ಲಿಮಿಟೆಡ್ ಸೇರಿಕೊಂಡಿವೆ.
* ಅಷ್ಟೇ ಅಲ್ಲದೇ ಬಿಇಎಲ್, ಗೋದ್ರೆಜ್, ಹ್ಯೂಸ್ ಇಂಡಿಯಾ, ಸೆಂಟಮ್ ಎಲೆಕ್ಟ್ರಾನಿಕ್ಸ್, ಅಜಿಸ್ಟಾ ಬಿಎಸ್‌ಟಿ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮ್ಯಾಕ್ಸರ್ ಇಂಡಿಯಾ ಇವುಗಳು ಕೋರ್ ಸದಸ್ಯರ ಪಟ್ಟಿಯಲ್ಲಿ ಸೇರ್ಪಡೆಯಾಗಿವೆ.
* ಪ್ರಸ್ತುತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ISRO) ಭಾರತದ ಬಾಹ್ಯಾಕಾಶ ಉದ್ಯಮವನ್ನು ಮುನ್ನಡೆಸುತ್ತಿದೆ, ಈ ಬಾಹ್ಯಾಕಾಶ ಉದ್ಯಮವು 500 ಕ್ಕೂ ಅಧಿಕ ಖಾಸಗಿಯ ವಿವಿಧ ಸಂಸ್ಥೆಗಳನ್ನು ಒಳಗೊಂಡಿದೆ.

## IAF 89 ನೇ ವಾರ್ಷಿಕೋತ್ಸವವನ್ನು ಆಚರಿಸಿದೆ




* ಭಾರತೀಯ ವಾಯುಪಡೆಯು ಅಕ್ಟೋಬರ್ 8 ರಂದು ತನ್ನ 89 ನೇ ಸಂಸ್ಥಾಪನಾ ದಿನವನ್ನು ಆಚರಿಸಿತ್ತು.
* ಪ್ರಸ್ತುತ ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಯಲ್ಲಿ ವಾಯುಪಡೆಯ ದಿನದ ಅಂಗವಾಗಿ ವಾಯುಪಡೆ ಮೆರವಣಿಗೆ ನಡೆಸಿತು, ಈ ಸಭೆಯಲ್ಲಿ ರಕ್ಷಣಾ ಸಿಬ್ಬಂದಿಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್, ಸೇನಾ ಮುಖ್ಯಸ್ಥ ಜನರಲ್ ಎಂಎಂ ನರವಣೆ, ಹಾಗೂ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕರಂಬೀರ್ ಸಿಂಗ್ ಅವರು ಪಾಲ್ಗೊಂಡಿದ್ದರು.
* ಪ್ರಸ್ತುತ 1971 ರ ಯುದ್ಧದ ವಿಜಯದ ನೆನಪಿಗಾಗಿ ಈ ದಿನವನ್ನು 'ಸ್ವರ್ಣಿಮ್ ವಿಜಯ್ ವರ್ಷ' ಎಂದು ಆಚರಣೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಭಾರತೀಯ ವಾಯುಪಡೆ (IAF)ಯು 1932 ರ ಅಕ್ಟೋಬರ್. 8 ರಂದು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಹಾಯಕ ವಾಯುಪಡೆಯಾಗಿ ರಚನೆಯಾಗಿದೆ.
* ಇದೀಗ ವಿಶ್ವ ವಾಯುಪಡೆಗಳಲ್ಲಿ ಭಾರತೀಯ ವಾಯುಪಡೆ 4ನೇ ಸ್ಥಾನದಲ್ಲಿದೆ, ಹಾಗೂ ಇದು ಸಶಸ್ತ್ರ ಸಂಘರ್ಷದ ಸಮಯದಲ್ಲಿ ವೈಮಾನಿಕ ಯುದ್ಧವನ್ನು ನಡೆಸುತ್ತದೆ.
* ಈಗಿನ ಭಾರತೀಯ ವಾಯುಪಡೆಗೆ ಈ ಮೊದಲು ಭಾರತವು 1947 ರಲ್ಲಿ ಸ್ವಾತಂತ್ರ್ಯ ಪಡೆದ ನಂತರ 'ರಾಯಲ್ ಇಂಡಿಯನ್ ಏರ್ ಫೋರ್ಸ್' ಎಂಬ ಹೆಸರನ್ನು ಇಡಲಾಗಿತ್ತು, ನಂತರ 1950 ರಲ್ಲಿ ಸರ್ಕಾರವು ರಿಪಬ್ಲಿಕ್ ಆಗಿ ಪರಿವರ್ತನೆಗೊಂಡ ನಂತರ ರಾಯಲ್ ಪೂರ್ವಪ್ರತ್ಯ ಎಂಬ ಹೆಸರನ್ನು ತೆಗೆದುಹಾಕಲಾಗಿದೆ ಎಂದು ತಿಳಿದು ಬಂದಿದೆ.

## 'ಲಖಿಂಪುರ್ ಖೇರಿ ಘಟನೆ'ಯ ತನಿಖೆಗಾಗಿ ಏಕ ಸದಸ್ಯ ಆಯೋಗ ರಚಿಸಿದ ಉತ್ತರ ಪ್ರದೇಶ ಸರ್ಕಾರ



* ಉತ್ತರ ಪ್ರದೇಶ ರಾಜ್ಯದಲ್ಲಿ ಇತ್ತೀಚೆಗೆ ನಡೆದ 'ಲಖಿಂಪುರ್ ಖೇರಿ ಘಟನೆ'ಯ ತನಿಖೆಗಾಗಿ ಉತ್ತರ ಪ್ರದೇಶ ರಾಜ್ಯ ಸರ್ಕಾರವು ಏಕ ಸದಸ್ಯ ಆಯೋಗವನ್ನು ರಚಿಸಿದೆ.
* ಉತ್ತರ ಪ್ರದೇಶದ ಈ ಲಖಿಂಪುರ್ ಖೇರಿ ಘಟನೆಯಲ್ಲಿ ಎಂಟು ಜನರು ಮೃತಪಟ್ಟಿದ್ದಾರೆ, ಈ ದುರ್ಘಟನೆಯ ತನಿಖೆಗಾಗಿ ನ್ಯಾಯಾಂಗ ಆಯೋಗಕ್ಕೆ ಎರಡು ತಿಂಗಳ ಕಾಲಾವಕಾಶವನ್ನು ನೀಡಿದೆ.
* ಉತ್ತರ ಪ್ರದೇಶದ ರಾಜ್ಯಪಾಲರು ವಿಚಾರಣಾ ಆಯೋಗಗಳ ಕಾಯ್ದೆ ಅಡಿಯಲ್ಲಿ 1952 ರ ಸೆಕ್ಷನ್ 3 ರ ಪ್ರಕಾರ ನ್ಯಾಯಾಂಗ ಆಯೋಗವನ್ನು ರಚಿಸಿದ್ದಾರೆ.
* ಪ್ರಸ್ತುತ ನ್ಯಾಯಮೂರ್ತಿ ಹೈಕೋರ್ಟ್, ಅಲಹಾಬಾದ್ ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರ ನೇತೃತ್ವದಲ್ಲಿ ಈ ಏಕ ಸದಸ್ಯ ಆಯೋಗವಿದೆ.
* ಈ ಲಖಿಂಪುರ್ ಖೇರಿ ದುರ್ಘಟನೆಯು ಇದೇ ಅಕ್ಟೋಬರ್ 3 ರಂದು ನಡೆದಿದೆ, ಉತ್ತರ ಪ್ರದೇಶದ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರನ್ನು ಸ್ವಾಗತಿಸುವ ಸಂಧರ್ಭದಲ್ಲಿ ಬಿಜೆಪಿ ಕಾರ್ಯಕರ್ತರು ಚಾಲನೆ ಮಾಡುತ್ತಿರುವ ವಾಹನಗಳಿಂದ ಈ ಘಟನೆಯು ನಡೆದಿದೆ ಎಂದು ತಿಳಿದು ಬಂದಿದೆ.

## ವಿಶ್ವ ಹತ್ತಿ (Cotton) ದಿನ




* ವಿಶ್ವ ಸಂಸ್ಥೆಯು ವಿಶ್ವದಾದ್ಯಂತ ಅಕ್ಟೋಬರ್. 7 ರಂದು ವಿಶ್ವ ಹತ್ತಿ ದಿನವನ್ನು ಆಚರಣೆ ಮಾಡಲಾಗುತ್ತದೆ, ಹಾಗೂ ಜನಗಳಲ್ಲಿ ಹತ್ತಿ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸಲು ಈ ದಿವನ್ನು ಆಚರಿಸಲಾಗುತ್ತದೆ.
* 2021 ರ ವಿಶ್ವ ಹತ್ತಿ ದಿನವನ್ನು 'ಒಳ್ಳೆಯದಕ್ಕಾಗಿ ಹತ್ತಿ' ಎಂಬ ಧ್ಯೇಯ ವ್ಯಾಕ್ಯದಡಿಯಲ್ಲಿ ಆಚರಿಸಲಾಯಿತು.
* ಹತ್ತಿಯು ಋಣಾತ್ಮಕ (negative) ಇಂಗಾಲದ ಹೆಜ್ಜೆಗುರುತನ್ನು ಹೊಂದಿದೆ, ಹಾಗೂ ಪರಿಸರವನ್ನು ಸ್ವಚ್ಛವಾಗಿಡಲು ಸಹಾಯ ಮಾಡುತ್ತದೆ ಎಂದು ತಜ್ಞರ ಮಾಹಿತಿ ನೀಡಿದ್ದಾರೆ.
* ಪ್ರಸ್ತುತ ಈ 'ವಿಶ್ವ ಹತ್ತಿ ದಿನ'ವನ್ನು 2019 ರಲ್ಲಿ ವಿಶ್ವ ವಾಣಿಜ್ಯ ಸಂಸ್ಥೆಯು '4' ಹತ್ತಿ ಉತ್ಪಾದಿಸುವ ಆಫ್ರಿಕನ್ ರಾಜ್ಯಗಳಾಗಿರುವ ಬೆನಿನ್, ಚಾಡ್, ಬುರ್ಕಿನಾ ಫಾಸೊ, ಹಾಗೂ ಮಾಲಿಗಳ ಉಪಕ್ರಮದಲ್ಲಿ ಪ್ರಾರಂಭಿಸಲಾಗಿದೆ.
* ಹತ್ತಿಯು ಆಹಾರ ಮತ್ತು ಫೈಬರ್ ಎರಡನ್ನೂ ಸಮರ್ಪಕವಾಗಿ ನೀಡುವ ಏಕೈಕ ಕೃಷಿ ಬೆಳೆಯಾಗಿದೆ.
* ಪ್ರಸ್ತುತ ಹತ್ತಿಯನ್ನು 5 ಖಂಡಗಳ 75 ದೇಶಗಳಲ್ಲಿ ಬೆಳೆಯಲಾಗುತ್ತದೆ, ಹಾಗೂ ಅಂತಾರಾಷ್ಟ್ರೀಯ ಹತ್ತಿ ಸಲಹಾ ಸಮಿತಿಯ ನೀಡಿರುವ ಮಾಹಿತಿಯ ಪ್ರಕಾರ ಒಟ್ಟಾರೆ ಹತ್ತಿಯಿಂದ ವಾರ್ಷಿಕವಾಗಿ ಅಂದಾಜು 41.2 ಬಿಲಿಯನ್ ಡಾಲರ್ ಆದಾಯವಾಗಲಿದೆ, ಅದರಲ್ಲಿ ವರ್ಷಕ್ಕೆ 18 ಬಿಲಿಯನ್ ಡಾಲರ್ ಹತ್ತಿ ವ್ಯಾಪಾರದಾಗಿದೆ.

# 10-10-2021

## ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಪಿಎಂ ಕಿಸಾನ್ ಟ್ರಾಕ್ಟರ್ ಯೋಜನೆ ಅಡಿಯಲ್ಲಿ ರೂ 5 ಲಕ್ಷ ಸಹಾಯಧನ ಇಂತಹ ಯಾವುದೇ ಯೋಜನೆ ಇಲ್ಲ ಎಂದು ತಿಳಿಸಿದೆ




* ಕೆಲ ದಿನಗಳ ಹಿಂದೆ ಪಿಎಂ ಕಿಸಾನ್ ಟ್ರಾಕ್ಟರ್ ಯೋಜನೆ ಅಡಿಯಲ್ಲಿ 5 ಲಕ್ಷ ರೂ. ಸಹಾಯಧನ ನೀಡಲಾಗುತ್ತದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಸುದ್ದಿಯಾಗಿತ್ತು, ಆದರೆ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಇತರಹ ಯಾವುದೇ ಯೋಜನೆಗಳಿಲ್ಲ ಎಂದು ಅಧಿಕೃತ ಜಾಲತಾಣದಲ್ಲಿ ಮಾಹಿತಿ ನೀಡಿದೆ.
* ಪ್ರಸ್ತುತ ಕೇಂದ್ರ ಸರ್ಕಾರವು ಪಿಎಂ ಕಿಸಾನ್ ಟ್ರಾಕ್ಟರ್ ಯೋಜನೆ ತರಹದ ಯಾವುದೇ ಯೋಜನೆಗಳಿಲ್ಲ, ಹಾಗೂ ಕೇಂದ್ರ ಸರ್ಕಾರವು ಅದನ್ನು ಜಾರಿಗೊಳಿಸುತ್ತಿಲ್ಲ ಎಂದು ತಿಳಿಸಿದೆ.

# 11-10-2021

## ಚುನಾವಣೆ ರಾಜ್ಯಗಳ ಸಮೀಕ್ಷಾ ವರದಿ ಪ್ರಕಾರ ಪ್ರಧಾನ ಮಂತ್ರಿ ಸ್ಥಾನಕ್ಕೆ ಮೋದಿ ಜೀ ಸೂಕ್ತ



* ಪ್ರಸ್ತುತ ಚುನಾವಣೆ ರಾಜ್ಯಗಳ ಸಮೀಕ್ಷಾ ವರದಿ ಪ್ರಕಾರ ಪ್ರಧಾನಿ ಹುದ್ದೆಗೆ ನರೇಂದ್ರ ಮೋದಿ ಜೀ ಅವರೇ ಸೂಕ್ತ ಎಂದು ತಿಳಿದು ಬಂದಿದೆ.
* ಈ ಸಮೀಕ್ಷೆಯನ್ನು ಎಬಿಪಿ ಸಿವೋಟರ್ ಐಎಎನ್ಎಸ್ ನಡೆಸಿವೆ, ಪ್ರಧಾನಿ ಹುದ್ದೆಗೆ ಮೋದಿ ಜೀ ಅವರೇ ಸೂಕ್ತ ಎಂದು ಅತೀ ಹೆಚ್ಚಿನ ಜನರು ಅಭಿಪ್ರಾಯಪಟ್ಟಿದ್ದಾರೆ.
* ಪ್ರಸ್ತುತ ಈ ಸಮೀಕ್ಷೆಯನ್ನು ವಿಧಾನಸಭೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಮಣಿಪುರ, ಗೋವಾ ಹಾಗೂ ಉತ್ತರಾಖಂಡಗಳಲ್ಲಿ ನಡೆಸಲಾಗಿದೆ.
* ಸಮೀಕ್ಷೆಯ ನೀಡಿರುವ ಮಾಹಿತಿಯ ಪ್ರಕಾರ ಶೇ 43.1ರಷ್ಟು ಜನರು ದೇಶವನ್ನು ಮುನ್ನಡೆಸಲು ಮೋದಿಯೇ ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಕೇವಲ ಶೇ. 9.1ರಷ್ಟು ಜನರು ರಾಹುಲ್ ಗಾಂಧಿ ಉತ್ತಮ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಷ್ಟೇ ಅಲ್ಲದೇ ಶೇ. 5.2ರಷ್ಟು ಜನರು ದೆಹಲಿಯ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಮತ್ತು ಶೇ. 3.2ರಷ್ಟು ಜನರು ಯೋಗಿ ಆದಿತ್ಯನಾಥ್ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.
* ಈ ಸಮೀಕ್ಷೆಯನ್ನು ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯಲಿರುವ 5 ರಾಜ್ಯಗಳ 690 ವಿಧಾನಸಭಾ ಕ್ಷೇತ್ರಗಳಲ್ಲಿ

ನಡೆಸಲಾಗಿತ್ತು, ಸರಿ ಸುಮಾರು 98,121 ಜನರು ಈ ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು.

## ಕರ್ನಾಟಕ ಹೈಕೋರ್ಟ್'ನ ಮುಖ್ಯ ನ್ಯಾಯಮೂರ್ತಿಯಾಗಿ 'ರಿತುರಾಜ್ ಅವಸ್ತಿ' ನೇಮಕ



* ಪ್ರಸ್ತುತ ಅಲಹಬಾದ್ ಹೈಕೋರ್ಟ್'ನ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಅವರನ್ನು ಕರ್ನಾಟಕ ಹೈಕೋರ್ಟ್'ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ, ಎಂದು ಭಾರತ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀನಂದ್ರು ಕಾಶ್ಯಪ್ ಅಧಿಸೂಚನೆಯನ್ನು ಹೊರಡಿಸಿದ್ದಾರೆ.
* ಪ್ರಸ್ತುತ ರಾಷ್ಟ್ರಪತಿಗಳು ಅಲಹಬಾದ್ ಹೈಕೋರ್ಟ್ ನ ನ್ಯಾಯಮೂರ್ತಿಯಾಗಿದ್ದ ರಿತು ರಾಜ್ ಅವಸ್ಥಿ ಅವರನ್ನು ಆರ್ಟಿಕಲ್ 217 ಅನುಸರಾವಾಗಿ ಕರ್ನಾಟಕ ಹೈಕೋರ್ಟ್'ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ ಎಂದಿದ್ದಾರೆ.

## ಮಕ್ಕಳಿಗಾಗಿ PM CARES'ನ ಮಾರ್ಗಸೂಚಿಗಳು

PM CARES
Prime Minister's Citizen Assistance and Relief in Emergency Situations Fund

* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 'ಮಕ್ಕಳಿಗಾಗಿ ಪಿಎಂ ಕೇರ್ಸ್ ಯೋಜನೆ'ಯ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿದೆ.
* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ತಮ್ಮ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಸಮಗ್ರ ಬೆಂಬಲ ನೀಡುವ ವಿಷಯಗಳ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದೆ.
* ಪ್ರಧಾನಿ ನರೇಂದ್ರ ಮೋದಿ ಅವರು 2021 ರ ಮೇ. 29 ರಂದು ಈ ಮಕ್ಕಳಿಗಾಗಿ ಪಿಎಂ ಕೇರ್ಸ್ ಯೋಜನೆ ಮಾರ್ಗಸೂಚಿಗಳನ್ನು ಘೋಷಣೆ ಮಾಡಿದ್ದರು.
* ಈ ಮಕ್ಕಳಿಗಾಗಿ PM CARES ಯೋಜನೆಯ ಸಾಂಕ್ರಾಮಿಕ ರೋಗ ಕೋವಿಡ್ 19 ನಿಂದಾಗಿ ತಮ್ಮ ಪೋಷಕರನ್ನು ಅಥವಾ ಮಕ್ಕಳನ್ನು ಕಳೆದುಕೊಂಡವರ ಸಮಗ್ರ ರಕ್ಷಣೆಗಾಗಿ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ.
* ಈ ಯೋಜನೆಯು ಮೂಲಕ ಆರೋಗ್ಯ ವಿಮೆಯನ್ನು ನೀಡಲಾಗುತ್ತದೆ, ಹಾಗೂ ಶಿಕ್ಷಣದಿಂದ ಸಬಲೀಕರಣಗೊಳಿಸುತ್ತದೆ, ಅಷ್ಟೇ ಅಲ್ಲದೇ ಇವರು 23 ನೇ ವಯಸ್ಸನ್ನು ತಲುಪಿದಾಗ ಆರ್ಥಿಕ ಬೆಂಬಲವನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಮೋದಿ ಅವರು ಘೋಷಣೆ ಮಾಡಿರುವ ಈ ಯೋಜನೆಯ ಪ್ರಯೋಜನಗಳನ್ನು ಪಡೆಯಲು 2021 ರ ಮೇ. 29 ರಿಂದ 2021 ರ ಡಿಸೆಂಬರ್. 31 ರವರೆಗೆ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ, ಅಷ್ಟೇ ಅಲ್ಲದೇ ಈ ಯೋಜನೆಯು ನೋಂದಾಯಿಸಿಕೊಂಡ ಮಕ್ಕಳ 23 ವರ್ಷ ವಯಸ್ಸಿನವರೆಗೂ ಈ ಯೋಜನೆ ಜಾರಿಯಲ್ಲಿರಲಿದೆ ಎಂದು ತಿಳಿಸಿದ್ದಾರೆ.

## ಭಾರತ ಡೆನ್ಮಾರ್ಕ್ ನಡುವೆ ನಾಲ್ಕು ಒಪ್ಪಂದಗಳಿಗೆ ಸಹಿ



* ಪ್ರಸ್ತುತ ಭಾರತ ಮತ್ತು ಡೆನ್ಮಾರ್ಕ್ ದೇಶಗಳು ಕೌಶಲ್ಯ ಅಭಿವೃದ್ಧಿ ಸೇರಿ ಒಟ್ಟು '4' ಆರೋಗ್ಯ, ಶುದ್ಧ ನೀರು, ಹಸಿರು ಇಂಧನ ಸಹಕಾರ ಒಪ್ಪಂದಗಳಿಗೆ ಸಹಿ ಹಾಕಿವೆ.
* ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಹಾಗೂ ಪ್ರಧಾನಿ ನರೇಂದ್ರ ಮೋದಿಯವರು ಮಾತುಕತೆ ನಂತರ ಈ ಒಪ್ಪಂದಗಳಿಗೆ ಪರಸ್ಪರ ಒಪ್ಪಿಕೊಂಡು ಸಹಿ ಹಾಕಲಾಗಿದೆ.
* ಕೋವಿಡ್ 19 ಸಾಂಕ್ರಾಮಿಕ ರೋಗದ ಹಿನ್ನೆಲೆಯಿಂದಾಗಿ ಇಲ್ಲಿಯವರೆಗೂ ಇತರಹ ಯಾವುದೇ ಮುಖ್ಯಸ್ಥರು ಭಾರತಕ್ಕೆ ಭೇಟಿಯಾಗಿರಲಿಲ್ಲ, ಕೋವಿಡ್ 19 ನಂತರ ಇದೆ ಮೊದಲ ಬಾರಿಗೆ ಭಾರತಕ್ಕೆ ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಅವರು ಭೇಟಿ ನೀಡಿದ್ದಾರೆ.

## ಬ್ರಿಟನ್ ಪ್ರಧಾನಿ ಪ್ರಶಸ್ತಿ ಪಡೆದ ಭಾರತೀಯ ಮೂಲದ ಬಾಲಕಿ ಅಲೀಶಾ ಗದಿಯಾ



* ಪ್ರಸ್ತುತ ಭಾರತೀಯ ಮೂಲದ 6 ವರ್ಷದ ಬಾಲಕಿ ಅಲೀಶಾ ಗದಿಯಾ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ನೀಡುವ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾಳೆ, ಈ ಭಾರತೀಯ ಅಲೀಶಾ ಗದಿಯಾ ಅರಣ್ಯ ನಾಶ ಮತ್ತು ಹವಾಮಾನ ಬದಲಾವಣೆ ಸಮಸ್ಯೆಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಳು, ಈ ಕಾರಣದಿಂದ ಈ ಪ್ರಶಸ್ತಿಯನ್ನು ಪಡೆದಿದ್ದಾಳೆ.
* ಭಾರತೀಯ ಅಲೀಶಾ ಗದಿಯಾ ಎನ್ ಜಿ ಒ ಕೂಲ್ ಅರ್ತ್'ನ ಸದಸ್ಯೆಯಾಗಿದ್ದಾಳೆ, ಇದು ಜಾಗತಿಕ ತಾಪಮಾನ ಏರಿಕೆ, ಅರಣ್ಯ ನಾಶಗಳ ಬಗೆಗಿನ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತದೆ.
* ಅಲೀಶಾ ಗದಿಯಾ ಪ್ರಸ್ತುತ ಜಗತಿನಾದ್ಯಂತ ಕಾರ್ಖಾನೆಗಳು ಯಾವ ರೀತಿಯಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುತ್ತಿವೆ ಎಂಬ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾಳೆ, ಅಷ್ಟೇ ಅಲ್ಲದೇ ಹವಾಮಾನ ಬದಲಾವಣೆ ಸಮಸ್ಯೆಗಳ ಜಾಗೃತಿ ಅಭಿಯಾನದಲ್ಲಿ ಸುಮಾರು 3 ಲಕ್ಷ ರೂ.ಗಳಷ್ಟು ದೇಣಿಗೆಯನ್ನು ಕೂಡ ಸಂಗ್ರಹ

ಮಾಡಿದ್ದಾಳೆ ಎಂದು ತಿಳಿದು ಬಂದಿದೆ.
* ಇದಕ್ಕೆ ಮೊದಲು ಅರಣ್ಯನಾಶದ ಬಗ್ಗೆ ಜನರ ಗಮನ ಸೆಳೆಯಲು 80 ಕಿ.ಮೀ ಸೈಕಲ್ ರೈಡ್ ಜಾಥಾ ಆಯೋಜಿಸಿದ್ದಳು, ಇದಕ್ಕೆ ಬ್ರಿಟನ್ ರಾಣಿ ಬೆಂಬಲವನ್ನು ನೀಡಿದ್ದರು.

### ಅಸ್ಸಾಂ'ನ ಗುವಾಹಟಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಅದಾನಿ ಗ್ರೂಪ್'ಗೆ




* ಪ್ರಸ್ತುತ ಅದಾನಿ ಗ್ರೂಪ್ ಅಸ್ಸಾಂ'ನ ಗುವಾಹಟಿಯ ಲೋಕಪ್ರಿಯ ಬರ್ದೋಲಾಯ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ವಹಣೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆಯನ್ನು ವಹಿಸಿಕೊಂಡಿದೆ.
* ಇತ್ತೀಚಿಗಷ್ಟೇ ನಡೆದ ಬಿಡ್ ಪ್ರಕ್ರಿಯೆಯಲ್ಲಿ ಈಶಾನ್ಯ ಭಾರತದ ಏಕೈಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ವಹಣೆಯ ಹಕ್ಕನ್ನು ಅದಾನಿ ಸಮೂಹವು ಪಡೆದುಕೊಂಡಿದೆ.
* ಪ್ರಸ್ತುತ ಅದಾನಿ ಸಮೂಹವು ಲಕ್ನೋ, ಅಹ್ಮದಾಬಾದ್, ಜೈಪುರ, ತಿರುವನಂತಪುರ, ಹಾಗೂ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನೂ ನಿಯಂತ್ರಿಸುತ್ತಿದೆ.

## 12-10-2021

### ರಾಜ್ಯದ ಕೆಎಸ್ಆರ್‌ಟಿಸಿ, ಬಿಎಂಟಿಸಿ ಸಂಸ್ಥೆಗಳಿಗೆ ಸಿಮ್ಯಾಕ್ ಪ್ರಶಸ್ತಿ



* ರಾಜ್ಯ ಸಾರಿಗೆ ಸಂಸ್ಥೆಯಾದ KSRTC ಯೋಜನೆಗಳಾದ 'ಫ್ಲೈಬಸ್' ಮತ್ತು 'ಸ್ವಚ್ಛತೆಯೇ ಸೇವೆ' ಗಳನ್ನೂ ಪರಿಗಣಿಸಿ CMAK(ಸಿಟಿ ಮ್ಯಾನೇಜರ್ಸ್ ಅಸೋಸಿಯೇಷನ್) ಸಂಸ್ಥೆಯ 2018 19ನೇ ಸಾಲಿನ ಮೊದಲನೆಯ ಮತ್ತು 2019 20ನೇ ಸಾಲಿನ ದ್ವಿತೀಯ ಪ್ರಶಸ್ತಿಗಳನ್ನೂ ನೀಡಿದೆ. ಈ ಪ್ರಶಸ್ತಿಗಳು ತಲಾ ₹1 ಲಕ್ಷ ಮತ್ತು ₹75 ಸಾವಿರ ನಗದು ಬಹುಮಾನ ಒಳಗೊಂಡಿದ್ದವು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಇವರು ಪ್ರಶಸ್ತಿಯನ್ನು ಕೆಎಸ್ಆರ್‌ಟಿಸಿ ಪ್ರಯಾಣಿಕರಿಗೆ ಸಮರ್ಪಿಸಲಾಗಿದೆ ಎಂದು ತಿಳಿಸಿದರು. ಇನ್ನು BMTC ಸಂಸ್ಥೆಗೆ 2018 19ನೇ ಸಾಲಿನ ದ್ವಿತೀಯ ಮತ್ತು 2019 20ನೇ ಸಾಲಿನ ಪ್ರಥಮ ಬಹುಮಾನ ದೊರೆತಿದ್ದು, ಪ್ರಶಸ್ತಿಗಳನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಸ್ವೀಕರಿಸಿದರು.

### ಹಿರಿಯ ಯಕ್ಷಗಾನ ಕಲಾವಿದ ಭಾಗವತ ಪದ್ಯಾಣ ಗಣಪತಿ ಭಟ್ ಇನ್ನಿಲ್ಲ



* ಹಿರಿಯ ಯಕ್ಷಗಾನ ಭಾಗವತ, ಯಕ್ಷಗಾನ ಭಾಗವತಿಕೆಯ ಗಾನ ಗಂಧರ್ವರೆಂದೇ ಪ್ರಸಿದ್ಧರಾಗಿದ್ದ, ಪದ್ಯಾಣ ಗಣಪತಿ ಭಟ್ ಇವರು ತಮ್ಮ 66 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.
* ಇವರು ಯಕ್ಷಗಾನದ ಕ್ಷೇತ್ರದಲ್ಲಿ ಸುದೀರ್ಘ ನಾಲ್ಕು ದಶಕಗಳಿಂದಲೂ ಹೆಚ್ಚು ಕಾಲ ಸೇವೆಸಲ್ಲಿಸಿದ್ದಾರೆ.
* 2007 ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವಾರು ಪ್ರಶಸ್ತಿಗಳಿಗೆ ಭಟ್ ಪಾತ್ರರಾಗಿದ್ದಾರೆ.

### ಅಮೆರಿಕಾದ ಬಿಯಾನ್ ಕ್ಯಾಪಿಟಲ್ ನಿಂದ ಭಾರತದಲ್ಲಿ 5 ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆ !



* ಅಮೇರಿಕಾ ಮೂಲದ ಖಾಸಗಿ ಸಂಸ್ಥೆ ಬಿಯಾನ್ ಕ್ಯಾಪಿಟಲ್ ಎಂಬ ಸಂಸ್ಥೆಯು ಭಾರತೀಯ ಕಂಪನಿಗಳಲ್ಲಿ 5 ಬಿಲಿಯನ್ ಅಮೇರಿಕನ್ ಡಾಲರ್ ನಷ್ಟು ಬಂಡವಾಳ ಹೂಡಲು ಆಸಕ್ತಿ ತೋರಿಸಿದೆ.
* ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಅಮೆರಿಕಾ ನಡುವಿನ ಸಂಬಂಧ ಸುಧಾರಿಸುತ್ತಿರುವದರಿಂದ ಭಾರತದಲ್ಲಿ ಈ ಸಂಸ್ಥೆ ಆಸಕ್ತಿವಹಿಸಿದೆ ಎಂದು ಸಂಸ್ಥೆಯ ಸಹ ಅಧ್ಯಕ್ಷ ಸ್ಟೀಫನ್ ಪಗ್ಲಿಕಾ ಮಾಹಿತಿ ನೀಡಿದ್ದಾರೆ.
* ಅಮೆರಿಕಾದಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ಭಾಗಿಯಾಗಲು ಅಮೇರಿಕಾಕ್ಕೆ ತೆರಳಿರುವ ಸೀತಾರಾಮನ್ ಅವರೊಂದಿಗೆ ಬಿಯಾನ್ ಕ್ಯಾಪಿಟಲ್ ಸಂಸ್ಥೆ ಸಭೆ ನಡೆಸಿ ಈ ತೀರ್ಮಾನ ಕೈಗೊಂಡಿದೆ.

### 2 ವರ್ಷದಿಂದ 18 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ನೀಡಲು ಗ್ರೀನ್ ಸಿಗ್ನಲ್ ನೀಡಿದ ಡಿಸಿಜಿಐ



* 2 ವರ್ಷದಿಂದ 18 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ನೀಡುವುದಕ್ಕೆ ವಿಷಯ ತಜ್ಞರ ಸಮಿತಿ ಸಭೆಯಲ್ಲಿ ಇಂದು ಮಹತ್ವದ ನಿರ್ಧಾರ ಕೈಗೊಂಡಿದ್ದು, ಭಾರತೀಯ ಔಷಧ ನಿಯಂತ್ರಣ ಪ್ರಾಧಿಕಾರ

ಇಂದು ಅನುಮತಿ ನೀಡಿದೆ.
* ಈಗಾಗಲೇ 18 ವರ್ಷ ಮೇಲ್ಪಟ್ಟವರಿಗೆ ಕೊರೊನಾ ಲಸಿಕೆ ವಿತರಣೆ ಮಾಡಲಾಗುತ್ತಿದ್ದು, ಮಕ್ಕಳಿಗೆ ಕೊರೊನಾ ಲಸಿಕೆ ವಿತರಿಸಲು ಅನುಮತಿ ದೊರೆತಿರಲಿಲ್ಲ. ಈಗ 2 ವರ್ಷದಿಂದ 18 ವರ್ಷದ ಮಕ್ಕಳಿಗೆ ತುರ್ತು ಸಂದರ್ಭದಲ್ಲಿ ಮಾತ್ರ ಕೋವ್ಯಾಕ್ಸಿನ್ ಬಳಸಲು ಡಿಸಿಜಿಐ ಅನುಮತಿ ಕೊಡುವುದರ ಜೊತೆಗೆ 20 ದಿನಗಳ ಅಂತರದಲ್ಲಿ ಎರಡನೆ ಡೋಸ್ ನೀಡುವ ಸೂಚನೆಯನ್ನು ಸಹ ನೀಡಿದೆ.

# 13-10-2021

## ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಖರೆ ಪ್ರಧಾನಿ ಮೋದಿ ಸಲಹೆಗಾರರಾಗಿ ನೇಮಕ



* ಪ್ರಸ್ತುತ ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಖರೆ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಗಾರರಾಗಿ ನೇಮಕವಾಗಿದ್ದಾರೆ.
* ಅಮಿತ್ ಖರೆ ಅವರು ಇತ್ತೀಚಿಗೆ ಇವರು ಸೆಪ್ಟೆಂಬರ್ 30ರಂದು ಕೇಂದ್ರದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಸ್ಥಾನದಿಂದ ನಿವೃತ್ತರಾಗಿದ್ದರು, ಅಷ್ಟೇ ಅಲ್ಲದೇ ಇವರು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ಮಾಹಿತಿ, ಪ್ರಸಾರ ಸಚಿವಾಲಯದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.
* ಪ್ರಸ್ತುತ ಕೇಂದ್ರ ಸಂಪುಟದ ನೇಮಕಾತಿಗಳ ಸಮಿತಿಯು ಪ್ರಧಾನಿ ಸಲಹೆಗಾರರಾಗಿ ಅಮಿತ್ ಖರೆ ಅವರ ನೇಮಕಾತಿಗೆ ಅನುಮೋದನೆ ನೀಡಿದೆ.
* ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಖರೆ ಅವರಿಗೆ ಭಾರತ ಸರ್ಕಾರದ ಕಾರ್ಯದರ್ಶಿ ದರ್ಜೆಯ ಸ್ಥಾನಮಾನ ನೀಡಲಾಗುತ್ತದೆ, ಅಲ್ಲದೇ ಇವರು ಎರಡು ವರ್ಷ ಅಥವಾ ಭಾರತ ಸರ್ಕಾರದ ಮುಂದಿನ ಆದೇಶದವರೆಗೂ ಈ ಸ್ಥಾನದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಕೇಂದ್ರ ಸಂಪುಟದ ಮಾಜಿ ಕಾರ್ಯದರ್ಶಿ ಪಿ.ಕೆ.ಸಿನ್ಹಾ ಹಾಗೂ ಮಾಜಿ ಕಾರ್ಯದರ್ಶಿ ಅಮರ್ಜೀತ್ ಸಿನ್ಹಾ ಅವರು ಇದೇ ವರ್ಷದಲ್ಲಿ ಪ್ರಧಾನ ಮಂತ್ರಿ ಸಲಹೆಗಾರ ಸ್ಥಾನದಿಂದ ನಿವೃತ್ತರಾಗಿದ್ದಾರೆ ಇದೀಗ ಇವರ ಈ ಸ್ಥಾನಕ್ಕೆ ಐಎಎಸ್ ಅಧಿಕಾರಿ ಅಮಿತ್ ಖರೆ ಅವರನ್ನು ನೇಮಕ ಮಾಡಲಾಗಿದೆ.

## ಯೂರೋಪಿಯನ್ ಯೂನಿಯನ್'ನಿಂದ ಅಫ್ಘಾನಿಸ್ತಾನಕ್ಕೆ 1 ಬಿಲಿಯನ್ ಯುರೋ ನೆರವು



* ಇತ್ತೀಚಿಗೆ ಅಫ್ಘಾನಿಸ್ತಾನ ರಾಷ್ಟ್ರವು ತಾಲಿಬಾನ್ ಉಗ್ರರ ಕೈವಶವಾದ ಹಿನ್ನಲೆಯಿಂದಾಗಿ, ಇದೀಗ ಅಲ್ಲಿನ ಆಡಳಿತ ಹಾಗೂ ಜನರ ಆರ್ಥಿಕ ಜೀವನ ಮಟ್ಟವು ಕೆಳಮಟ್ಟಗಿಳಿದಿದೆ, ಈ ಕಾರಣದಿಂದಾಗಿ ಅಫ್ಘಾನಿಸ್ತಾನದ ನೆರವಿಗೆ ಆಗಮಿಸುವಂತೆ ತಾಲಿಬಾನ ಉಗ್ರರು ಮನವಿ ಮಾಡಿಕೊಂಡಿದ್ದಾರೆ.
* ಪ್ರಸ್ತುತ ಈ ತಾಲಿಬಾನ ಉಗ್ರರು ಮನವಿಗೆ ಸ್ಪಂದಿಸಿ ಯೂರೋಪಿಯನ್ ಯೂನಿಯನ್ ಇದೀಗ ಅಫ್ಘಾನಿಸ್ತಾನಕ್ಕೆ 1 ಬಿಲಿಯನ್ ಯುರೋ ಆರ್ಥಿಕ ನೆರವನ್ನು ಘೋಷಣೆ ಮಾಡಿದೆ ಎಂದು ತಿಳಿದು ಬಂದಿದೆ.

## ವಿದೇಶಿ ಸೋಲಾರ್ ಸಂಸ್ಥೆಗಳು ಇದೀಗ ರಿಲಯನ್ಸ್ ವಶಕ್ಕೆ




* ಪ್ರಸ್ತುತ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಇದೀಗ ಸೋಲಾರ್ ಉಪಕರಣ ತಯಾರಕ ಎರಡು ಪ್ರಮುಖ ವಿದೇಶಿ ಸಂಸ್ಥೆಗಳನ್ನು ತನ್ನ ವಶಕ್ಕೆ ಪಡೆದುಕೊಂಡಿದೆ.
* ಪ್ರಸ್ತುತ ನಾರ್ವೆ ಮೂಲದ ಆರ್ ಇ ಸಿ ಸಂಸ್ಥೆಯನ್ನು ರಿಲಯನ್ಸ್ 5.8 ಸಾವಿರ ಕೋಟಿ ರೂ.ಗೆ ಖರೀದಿ ಮಾಡಿದೆ, ಹಾಗೂ ಸ್ಟರ್ಲಿಂಗ್ ಅಂಡ್ ವಿಲ್ಸನ್'ನ್ನು ರಿಲಯನ್ಸ್ 2.8 ಸಾವಿರ ಕೋಟಿ ರೂ.ಗೆ ಖರೀದಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.
* ಈ ನಾರ್ವೆ ಮೂಲದ ಆರ್ ಇ ಸಿ ಸಂಸ್ಥೆ ಪೇಟೆಂಟ್ ತಂತ್ರಜ್ಞಾನವನ್ನು ಹೊಂದಿದೆ, ಇದರಿಂದ ರಿಲಯನ್ಸ್ ಸಂಸ್ಥೆಯು ಸೋಲಾರ್ ಉದ್ಯಮ ರಫ್ತು ಮಾರುಕಟ್ಟೆಗೆ ಕಾಲಿಡಲು ಸಹಾಯವಾಗಲಿದೆ ಎಂದು ತಿಳಿದುಬಂದಿದೆ.
* ಈ ಮೊದಲು ಯುರೋಪ್ ಮತ್ತು ಅಮೆರಿಕ ದೇಶಗಳಿಗೆ ನಾರ್ವೆ ಮೂಲದ ಈ ಆರ್ ಇ ಸಿ ಸಂಸ್ಥೆ ಸೋಲಾರ್ ತಂತ್ರಜ್ಞಾನ ರಫ್ತು ಮಾಡಲಾಗುತಿತ್ತು.

## ಕೊರೊನಾ ಸೋಂಕಿನ ಚಿಕಿತ್ಸೆಗೆ 'Molnupiravir' ಎಂಬ ವಿಶ್ವದ ಮೊದಲ ಮಾತ್ರೆ




* ವಿಶ್ವ ಆರೋಗ್ಯ ಸಂಸ್ಥೆ (WHO)ಯು ಬಡ ಮತ್ತು ಕಡಿಮೆ ಆದಾಯದ ರಾಷ್ಟ್ರಗಳಲ್ಲಿ ಲಸಿಕೆ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ದೇಶಗಳಿಗೆ ಸೂಚಿಸುತ್ತಿದೆ, ಇದರ ನಡುವೆ ಇದೀಗ ವಿಶ್ವದ ಮೊದಲ ಮಾತ್ರೆ 'Molnupiravir' ಕೊರೊನಾ ಸೋಂಕಿನ ಚಿಕಿತ್ಸೆಗೆ ಸಿದ್ಧವಾಗಿದೆ, ಈ ಔಷಧವು ಕೋವಿಡ್ 19 ವಿರುದ್ಧದ ಹೋರಾಡಲು ಸಹಾಯ ಮಾಡುತ್ತದೆ.

* ಪ್ರಸ್ತುತ ಔಷಧೀಯ ದೈತ್ಯ ಮೆರ್ಕ್ ಈ ಹೊಸ ಔಷಧೀಯ ತುರ್ತು ಬಳಕೆಯ ದೃಢೀಕರಣಕ್ಕಾಗಿ ಅರ್ಜಿ ಸಲ್ಲಿಸಿದೆ, ಅಷ್ಟೇ ಅಲ್ಲದೇ ಈ ಹೊಸ ಔಷಧವು ಸಾವಿನ ಪ್ರಮಾಣವನ್ನು ಶೇ. 50ರಷ್ಟು ಕಡಿಮೆ ಮಾಡಲಿದೆ ಎಂದು ತಿಳಿದು ಬಂದಿದೆ.

* ಕೊರೊನಾ ಸೋಂಕಿನ ಚಿಕಿತ್ಸೆಗೆ ಸಿದ್ದವಾಗಿರುವ ಈ ಔಷಧಕ್ಕೆ ಮೊಲ್ನುಪಿರಾವಿರ್(Molnupiravir) ಎನ್ನಲಾಗಿದೆ, ಈ ಮಾತ್ರೆಯನ್ನು ಜನರಿಗೆ ಸೋಂಕಿನ ಆರಂಭದಲ್ಲಿ ನೀಡುವದರಿಂದ ಆಸ್ಪತ್ರೆಗೆ ದಾಖಲಾಗುವ ಅಥವಾ ಸಾವಿನ ಅಪಾಯವನ್ನು ಕಡಿಮೆ ಮಾಡಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಕೊರೊನಾ ವೈರಸ್ ವಿರುದ್ಧ ಅಪಾರ ಸಂಖ್ಯೆಯ ಲಸಿಕೆಗಳ ನಡುವೆ ಅನುಮೋದನೆ ಪಡೆದಕೊಳ್ಳುವ ಮೊದಲ ಮಾತ್ರೆ ಇದಾಗಲಿದೆ ಎಂದಿದ್ದಾರೆ.

* ಮೆರ್ಕ್ ಫಾರ್ಮಾ ಈ ವರ್ಷದ ಆರಂಭದಲ್ಲಿ ಯುಎಸ್ ಸರ್ಕಾರದೊಂದಿಗೆ ಈ ಮಾತ್ರೆಯ ಖರೀದಿಗೆ ಒಪ್ಪಂದವನ್ನು ಮಾಡಿಕೊಂಡಿತ್ತು, ಇದರ ಅನುಸಾರವಾಗಿ ಅನುಮೋದನೆಯ ನಂತರ ಸರಿ ಸುಮಾರು 1.7 ಮಿಲಿಯನ್ ಕೋರ್ಸ್'ಗಳನ್ನು ಮೊಲ್ನುಪಿರಾವೀರ್(Molnupiravir) ಪೂರೈಸಲಿದೆ ಎಂದು ತಿಳಿದು ಬಂದಿದೆ.

## 'ಒನ್ ವೆಬ್' ಖಾಸಗಿ ಸಂಸ್ಥೆಯು ಭಾರತ ನೆಲದಿಂದ ಉಪಗ್ರಹ ಹಾರಿಸುತಿದೆ

OneWeb Satellites

* ಪ್ರಸ್ತುತ ಏರ್ಟೆಲ್ ಮಾಲೀಕ ಸುನಿಲ್ ಭಾರ್ತಿ ಮಿತ್ತಲ್ ಅವರ ಒನ್ ವೆಬ್ ಸಂಸ್ಥೆಯು ಭಾರತೀಯ ಬಾಹ್ಯಾಕಾಶಯಾನ ಕ್ಷೇತ್ರದಲ್ಲಿ ಗ್ರಾಹಕನಾಗಿ ಕಾಲಿಡುತ್ತಿದ್ದೆ.

* ಈ ಒನ್ ವೆಬ್ ಸಂಸ್ಥೆಯು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೊ ಜಿಎಸ್ ಎಲ್ ವಿ ಮಾರ್ಕ್3 ರಾಕೆಟ್'ನ್ನು ಬಳಸಿಕೊಂಡು ಕಕ್ಷೆಗೆ ತನ್ನ ಸಂಸ್ಥೆಯ ಮೊದಲ ಉಪಗ್ರಹ ಉಡಾವಣೆ ಮಾಡುತ್ತಿದೆ.

* ಪ್ರಸ್ತುತ ಒನ್ ವೆಬ್ ಸಂಸ್ಥೆಯ ಒಡೆತನದಲ್ಲಿರುವ 322 ಉಪಗ್ರಹಗಳು ಸದ್ಯ ಬಾಹ್ಯಾಕಾಶದಲ್ಲಿವೆ ಎಂದು ತಿಳಿದು ಬಂದಿದೆ.

## ಕೆಂಪೇಗೌಡ ವಿಮಾನ ನಿಲ್ದಾಣದಿಂದ ಅತಿಹೆಚ್ಚು ಪೆರಿಷಬಲ್ ಪದಾರ್ಥಗಳ ಸರಕು ಸಾಗಣೆ



* ಪ್ರಸ್ತುತ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಟ್ರಾಟಜಿ ಆಂಡ್ ಡೆವಲಪ್‌ಮೆಂಟ್ ಮುಖ್ಯಾಧಿಕಾರಿ ಸಾತ್ಯಕಿ ರಘುನಾಥ್ ವರದಿ ಮಾಡಿರುವ ಪ್ರಕಾರ ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅತಿಹೆಚ್ಚು ಪೆರಿಷಬಲ್ ಪದಾರ್ಥಗಳ ಸರಕು ಸಾಗಣೆ ಮಾಡಿದ ದೇಶದ ಮೊದಲ ವಿಮಾನ ನಿಲ್ದಾಣ ಎಂಬ ಕೀರ್ತಿಗೆ ಪಾತ್ರವಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ2020 21 ಹಣಕಾಸು ವರ್ಷದಲ್ಲಿ 41,130 ಮೆಟ್ರಿಕ್ ಟನ್ ಗಳಷ್ಟು ಕಡಿಮೆ ಬಾಳಿಕೆ ಅವಧಿ ಹಣ್ಣು, ತರಕಾರಿಯಂಥ (ಪೆರಿಷಬಲ್) ಉತ್ಪನ್ನ ರಫ್ತು ಮಾಡಲಾಗಿದೆ, ಎಂದು ಕೃಷಿ ಮತ್ತು ಸಂಸ್ಕರಿಸಿದ ಉತ್ಪನ್ನಗಳ ರಫ್ತು ಅಭಿವೃದ್ಧಿ ಮಂಡಳಿ ಮಾಹಿತಿ ನೀಡಿದೆ.

* ದೇಶದ ಒಟ್ಟು ಪೆರಿಷಬಲ್ ಉತ್ಪನ್ನಗಳ ಪೈಕಿ ಶೇ. 31ರಷ್ಟು ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣದಿಂದಲೇ ಸಾಗಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ 1,296 ಮೆಟ್ರಿಕ್ ಟನ್ ಹೂವು ರಫ್ತು ಮಾಡಲಾಗಿದೆ ಎಂದಿದ್ದಾರೆ.

* ಒಟ್ಟು 24 ವಿಮಾನಯಾನ ಸಂಸ್ಥೆಗಳು 46 ವಿದೇಶಗಳಲ್ಲಿ ಪೆರಿಷಬಲ್ ಉತ್ಪನ್ನ ರಫ್ತು ಮಾಡುತ್ತಿವೆ.

## 'ದೇಶ್ ಕೆ ಮೆಂಟರ್' ಕಾರ್ಯಕ್ರಮ ಆರಂಭಿಸಿದ ದೆಹಲಿ ಸರ್ಕಾರ





* ದೆಹಲಿ ಸರ್ಕಾರವು ಇದೇ ಅಕ್ಟೋಬರ್ 11 ರಂದು 'ದೇಶ್ ಕೆ ಮೆಂಟರ್ಸ್' ಎಂಬ ಕಾರ್ಯಕ್ರಮವನ್ನು ಆರಂಭಿಸಿತು, ಪ್ರಸ್ತುತ ಈ ಕಾರ್ಯಕ್ರಮವು ದೆಹಲಿಯ ಎಲ್ಲಾ ಶಾಲೆಗಳಲ್ಲಿ ಜಾರಿಗೆ ತರಲಾಗುತ್ತಿದೆ.

* ದೆಹಲಿ ಸರ್ಕಾರವು ವಿದ್ಯಾರ್ಥಿಗಳಿಗೆ ಯುವ ಮಾರ್ಗದರ್ಶಕರನ್ನು ನೀಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಿದೆ, ಇಲ್ಲಿನ ಯುವ ಮಾರ್ಗದರ್ಶಕರು 9 ನೇ ತರಗತಿಯಿಂದ 12 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಮಾರ್ಗದರ್ಶನವನ್ನು ನೀಡಲಿದ್ದಾರೆ.

* ಪ್ರಸ್ತುತ ದೆಹಲಿಯ ತಾಂತ್ರಿಕ ವಿಶ್ವವಿದ್ಯಾಲಯದ ತಂಡವು ರಚಿಸಿರುವ ಆ್ಯಪ್ ಮೂಲಕ ಮಾರ್ಗದರ್ಶನ ಪಡೆಯಲು ವಿದ್ಯಾರ್ಥಿಗಳು ಸೈನ್ ಅಪ್ ಮಾಡಬಹುದು.

* ದೆಹಲಿ ಸರ್ಕಾರದ ಈ 'ದೇಶ್ ಕೆ ಮೆಂಟರ್ಸ್ ಕಾರ್ಯಕ್ರಮ' ಕನಿಷ್ಠಪಕ್ಷ ಎರಡು ತಿಂಗಳವರೆಗೆ ವಿದ್ಯಾರ್ಥಿಗಳಿಗೆ ಲಭ್ಯವಿರಲಿದೆ, ಇದಾಗಿಯೂ ಹೆಚ್ಚುವರಿಯಾಗಿ '4'ತಿಂಗಳವರೆಗೆ ಮುಂದುವರಿಸಬಹುದು ಎಂದು ತಿಳಿಸಿದ್ದಾರೆ, ಇದರಲ್ಲಿ ಒಬ್ಬ ಮಾರ್ಗದರ್ಶಕರು 2 ರಿಂದ 5 ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ.

## ಪ್ರತಿಷ್ಠಿತ ಸಿ.ಕೆ.ಪ್ರಹ್ಲಾದ್ ಪ್ರಶಸ್ತಿಗೆ ಮೈಕ್ರೋಸಾಫ್ಟ್ ಸಂಸ್ಥೆಯ ಸತ್ಯ ನಾದೆಲ್ಲಾ ಆಯ್ಕೆ



* ಮೈಕ್ರೋಸಾಫ್ಟ್‌ನ ಸಿಇಒ ಹಾಗೂ ಭಾರತೀಯ ಅಮೆರಿಕನ್ ಸತ್ಯ ನಾದೆಲ್ಲಾ ಅವರನ್ನು 'ಗ್ಲೋಬಲ್ ಬಿಸಿನೆಸ್ ಸಸ್ಟೇನಬಿಲಿಟಿ ಲೀಡರ್‌ಷಿಪ್ 'ಗಾಗಿ ನೀಡುವ ಪ್ರತಿಷ್ಠಿತ ಸಿ.ಕೆ.ಪ್ರಹ್ಲಾದ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಈ ಪ್ರಶಸ್ತಿಯನ್ನು ಉದ್ಯಮ ಹಾಗೂ ಸುಸ್ಥಿರ ಅಭಿವೃದ್ಧಿ ಕ್ಷೇತ್ರದಲ್ಲಿ ತೋರಿದ ನಾಯಕತ್ವಕ್ಕಾಗಿ ನೀಡಲಾಗಿದೆ ಎಂದು ಈ ಪ್ರತಿಷ್ಠಿತ ಪ್ರಶಸ್ತಿ ನೀಡುವ 'ಕಾರ್ಪೊರೇಟ್ ಇಕೊ ಫೋರಂ'ನ ಸಂಸ್ಥಾಪಕ ಎಂ.ಆರ್.ರಂಗಸ್ವಾಮಿ ತಿಳಿಸಿದ್ದಾರೆ.

* ಇವರ ಜೊತೆಗೆ ಮೈಕ್ರೋಸಾಫ್ಟ್‌ನ ಉನ್ನತ ಅಧಿಕಾರಿಗಳಾದ, ಅಧ್ಯಕ್ಷ ಬ್ರ್ಯಾಡ್ ಸ್ಮಿತ್, ಮುಖ್ಯ ಹಣಕಾಸು ಅಧಿಕಾರಿ ಅಮಿ ಹೂಡ್ ಹಾಗೂ ಮುಖ್ಯ ಪರಿಸರ ಅಧಿಕಾರಿ ಲೂಕಾಸ್ ಜೊಪ್ಪಾ ಅವರು ಸಹ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಈ ಪ್ರಶಸ್ತಿಯನ್ನು ಪರಿಸರಕ್ಕೆ ಇಂಗಾಲ ಸೇರುವುದನ್ನು ತಡೆಗಟ್ಟಲು ಕಂಪನಿ ಕೈಗೊಂಡ ಕ್ರಮಗಳನ್ನು ಪರಿಗಣಿಸಿ ನೀಡಲಾಗಿದೆ.

* 2030ರ ವೇಳೆಗೆ ಮೈಕ್ರೋಸಾಫ್ಟ್‌ಅನ್ನು 'ಕಾರ್ಬನ್ ನೆಗೆಟಿವ್ ಕಂಪನಿ'ಯನ್ನಾಗಿ ಪರಿವರ್ತಿಸಲು ಈ ನಾಲ್ವರ ಸಂಘಟಿತ ಪ್ರಯತ್ನ, ನಾಯಕತ್ವ ಅನುಕರಣೀಯ' ಎಂದು ಎಂ.ಆರ್.ರಂಗಸ್ವಾಮಿ ತಿಳಿಸಿದ್ದಾರೆ.

## ನಾಗರಿಕ ವಿಮಾನಯಾನ ಸಚಿವಾಲಯದಿಂದ 'ಆಕಾಶ ಏರ್' ಹೆಸರಿನ ಹೊಸ ವಿಮಾನಯಾನ ಸಂಸ್ಥೆಗೆ NOC



* ಪ್ರಸ್ತುತ ಈ 'ಆಕಾಶ ಏರ್' ಎಂಬ ಹೊಸ ವಿಮಾನಯಾನ ಸಂಸ್ಥೆಯು 2022 ರ ಮಧ್ಯದಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಲಿದೆ ಎನ್ನಲಾಗಿದೆ, ಅಷ್ಟೇ ಅಲ್ಲದೇ ಇದು ಮುಂಬರುವ '4' ವರ್ಷಗಳಲ್ಲಿ ಅಂದಾಜು 70 ವಿಮಾನಗಳನ್ನು ನಿರ್ವಹಿಸಲು ಏರ್ ಲೈನ್'ನ್ನು ನಿಯೋಜಿಸಲಿದೆ.

* ಈ 'ಆಕಾಶ ಏರ್'ಲೈನ್ ಅಲ್ಟ್ರಾ ಕಡಿಮೆ ವೆಚ್ಚದ ಕ್ಯಾರಿಯರ್ ಸೇವೆಯಾಗಿದೆ, ಇದನ್ನು ರಾಕೇಶ್ ಜುಂಜುನ್‌ವಾಲಾ ಪ್ರಾರಂಭಿಸಿದ್ದಾರೆ, ಅಷ್ಟೇ ಅಲ್ಲದೇ ಇವರು ಈ ಕಂಪನಿಯಲ್ಲಿ ಸುಮಾರು ಶೇ. 40 ರಷ್ಟು ಪಾಲನ್ನು ಹೊಂದಿದ್ದಾರೆ.

* ಜೆಟ್ ಏರ್‌ವೇಸ್‌ನ ಮಾಜಿ ಸಿಇಒ ವಿನಯ್ ದುಬೆ ಆಕಾಶ ಕಂಪನಿಯ ಸಿಇಒ(CEO) ಆಗಿದ್ದಾರೆ, ಹಾಗೂ ಆದಿತ್ಯ ಘೋಷ್ ಜುಂಜುನ್‌ವಾಲಾ ಅವರ ನಾಮಿನಿಯಾಗಿ ಕಾರ್ಯನಿರ್ವಹಿಸುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

* ULCC ಎಂದರೆ 'ಅತಿ ಕಡಿಮೆ ಬೆಲೆಯ ವಾಹಕಗಳು' ಎಂದರ್ಥ, ಪ್ರಸ್ತುತ ಈ ಏರ್ಲೈನ್ ಕಂಪನಿಯು ಇಂಡಿಗೊ ಹಾಗೂ ಸ್ಪೈಸ್ ಜೆಟ್ ನಂತಹ ಸಾಮಾನ್ಯ ಬಜೆಟ್ ವಿಮಾನಯಾನಗಳಿಗಿಂತ ಕಡಿಮೆ ನಿರ್ವಹಣಾ ವೆಚ್ಚವನ್ನು ಹೊಂದಿರಲಿದೆ ಎಂದು ಅಂದಾಜಿಸಲಾಗಿದೆ, ಅಷ್ಟೇ ಅಲ್ಲದೇ ಚೆಕ್ ಇನ್ ಬ್ಯಾಗೇಜ್, ಕ್ಯಾಬಿನ್ ಬ್ಯಾಗೇಜ್, ಇತ್ಯಾದಿ ಸೇವೆಗಳನ್ನು ಕಡಿಮೆ ದರಗಳೊಂದಿಗೆ ಕಾರ್ಯನಿರ್ವಹಿಸುತ್ತವೆ ಆದರೆ ULCC ಕನಿಷ್ಠ ವೆಚ್ಚದಲ್ಲಿ ಕಾರ್ಯನಿರ್ವಹಿಸುತ್ತವೆ ಎಂದು ತಿಳಿಸಿದೆ.

## ರಜನೀಶ್ ಕುಮಾರ್ "ಭಾರತ್ ಪೇ"ಗೆ ಅಧ್ಯಕ್ಷರಾಗಿ ಸೇರ್ಪಡೆ




* ರಜನೀಶ್ ಕುಮಾರ್ ಭಾರತ್ ಪೇ ಮಂಡಳಿಗೆ ಅಧ್ಯಕ್ಷರಾಗಿ ಸೇರ್ಪಡೆಯಾಗಿದ್ದಾರೆ, ಇವರು ಈ ಮೊದಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಮುಖ್ಯಸ್ಥರಾಗಿದ್ದರು.

* ಭಾರತ್ ಪೇ ಸೆಂಟ್ರಮ್ ಕ್ಯಾಪಿಟಲ್ ಪಂಜಾಬ್ ಮಹಾರಾಷ್ಟ್ರ ಬ್ಯಾಂಕ್'ನ್ನು ಸ್ವಾಧೀನಪಡಿಸಿಕೊಳ್ಳುವ ಸಣ್ಣ ಹಣಕಾಸು ಬ್ಯಾಂಕ್ ಸ್ಥಾಪಿಸಲು(RBI) ಭಾರತೀಯ ರಿಸರ್ವ್ ಬ್ಯಾಂಕ್'ನಿಂದ ಇನ್ ಪ್ರಿನ್ಸಿಪಲ್ ಅನುಮೋದನೆಯನ್ನು ಪಡೆದುಕೊಂಡಿದೆ.

* ರಜನೀಶ್ ಕುಮಾರ್ ಅವರು ಭಾರತ್ ಪೇ ಅಧ್ಯಕ್ಷರಾಗಿ, ವ್ಯಾಪಾರ ಕಾರ್ಯಕ್ಷಮತೆ ಮತ್ತು ಕಾರ್ಪೊರೇಟ್ ಆಡಳಿತದ ವಿಷಯಗಳ ಬಗೆಗಿನ ಭಾರತ್ ಪೇ ನಿರ್ವಹಣೆಗೆ ಸಲಹೆಗಳನ್ನೂ ನೀಡುತ್ತಾರೆ.

* ಇತ್ತೀಚಿಗೆ 2020ರ ಅಕ್ಟೋಬರ್'ನಲ್ಲಿ ರಜನೀಶ್ ಕುಮಾರ್ ಅವರು ಭಾರತದ ಅತಿದೊಡ್ಡ ಸಾಲ ಒದಗಿಸುವ SBIನ ಅಧ್ಯಕ್ಷರಾಗಿ ತಮ್ಮ ಅವಧಿಯನ್ನು ಮುಕ್ತಾಯ ಮಾಡಿದ್ದರು.

* ರಜನೀಶ್ ಕುಮಾರ್ ಅವರು ಪ್ರಸ್ತುತ ಆಂಧ್ರಪ್ರದೇಶ ಸರ್ಕಾರದ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಅಷ್ಟೇ ಅಲ್ಲದೇ ಈ ಮೊದಲು ಇವರು ರಾಷ್ಟ್ರೀಯ ಬ್ಯಾಂಕಿಂಗ್ ಸಮೂಹದ ವ್ಯವಸ್ಥಾಪಕ ನಿರ್ದೇಶಕರಾಗಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

## ಬಡಗು ತಿಟ್ಟಿನ ಹಿರಿಯ ವೇಷಧಾರಿ ಅನಂತ ಕುಲಾಲ್ ನಿಧನ



* ಬಡಗು ತಿಟ್ಟು ಯಕ್ಷಗಾನ ರಂಗದ ಹಿರಿಯ ವೇಷಧಾರಿ ಅನಂತ ಕುಲಾಲ್ ಅವರು ತಮ್ಮ 66 ವಯಸ್ಸಿನಲ್ಲಿ ನಿಧನರಾದರು.

* ಅನಂತ ಕುಲಾಲ್ ಅವರು ಪ್ರಸಿದ್ಧ ಮಾರಣಕಟ್ಟೆ ಕ್ಷೇತ್ರದ ಬಯಲಾಟ ಮೇಳಗಳಲ್ಲೇ ಸುಮಾರು 4 ದಶಕಗಳ ಕಾಲ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು.

* ಇವರು 'ಯಕ್ಷಗಾನ ಕಲಾರಂಗ ಪ್ರಶಸ್ತಿ', ಎಮ್. ಎಮ್. ಹೆಗಡೆ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

# 14-10-2021

## ರಾಜ್ಯದ ಕೊಪ್ಪಳ ಜಿಲ್ಲೆಯ ನಾರಿನಾಳ ಗ್ರಾಮದ ಸಮೀಪ ಮತ್ತೊಂದು ಚಿನ್ನದ ನಿಕ್ಷೇಪ ಪತ್ತೆ



* ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ನಾರಿನಾಳ ಗ್ರಾಮದ ಸಮೀಪ 113 ಅಡಿ ಆಳದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿರುವ ಬಗ್ಗೆ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ತಂಡ ಮಾಹಿತಿ ನೀಡಿದೆ.
* ಹಟ್ಟಿ ಚಿನ್ನದ ಗಣಿಯಿಂದ ಸುಮಾರು 70 ಕಿ.ಮೀ ದೂರದಲ್ಲಿರುವ ಚಿನ್ನದ ನಿಕ್ಷೇಪ ಪತ್ತೆಗೆ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ ತಂಡ ಅಧ್ಯಯನ ನಡೆಸಿದ್ದು, ನಾರಿನಾಳ ಗ್ರಾಮದ ಸಮೀಪ 113 ಅಡಿ ಆಳದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿರುದನ್ನು ಖಚಿತಪಡಿಸಿದೆ.

# 16-10-2021

## ಕೇಂದ್ರ ಸರ್ಕಾರವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 100 ಕೋಟಿ ರೂ. ಡೋಸ್ ಕೋವಿಡ್ ಲಸಿಕೆ ನೀಡಿದೆ




* ಪ್ರಸ್ತುತ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 100 ಕೋಟಿ ಡೋಸ್ ಕೋವಿಡ್ ಲಸಿಕೆ ವಿತರಿಸಲಾಗಿದೆ ಎಂದು ತಿಳಿಸಿದೆ, ಆದರೆ ಇದೀಗ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಳಸದೆ ಇರುವ ಒಟ್ಟು 10,53,11,155 ಲಸಿಕೆಗಳಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.
* ಪ್ರಧಾನಿ ಮೋದಿಯವರು ಭಾರತದಲ್ಲಿಯೇ ದೇಶಿಯವಾಗಿ ನಿರ್ಮಿತಗೊಂಡ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಕೊರೋನಾ ಲಸಿಕೆಗೆ ಜನೇವರಿ. 16 ರಂದು ಚಾಲನೆ ನೀಡಿದ್ದಾರೆ.
* ಕೇಂದ್ರ ಸರ್ಕಾರವು ಲಸಿಕೆ ಅಭಿಯಾನದಿಂದ ಇಲ್ಲಿಯತನಕ ಒಟ್ಟು 97,14,38,553 ಜನರಿಗೆ ಲಸಿಕೆಯನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಮಾಹಿತಿ ನೀಡಿದೆ.

## ಭಾರತೀಯ ಅಮೆರಿಕನ್ ರವಿ ಚೌಧರಿ ಪೆಂಟಗನ್ ಪ್ರಮುಖ ಹುದ್ದೆಗೆ ನೇಮಕ



* ಪ್ರಸ್ತುತ ಅಮೇರಿಕ ಸರ್ಕಾರವು ಭಾರತೀಯ ಅಮೆರಿಕನ್ ರವಿ ಚೌಧರಿ ಅವರನ್ನು ಅಮೇರಿಕ ಸರ್ಕಾರದ ರಕ್ಷಣಾ ಇಲಾಖೆಯಲ್ಲಿ (ಪೆಂಟಗನ್)ನ ಪ್ರಮುಖ ಹುದ್ದೆಗೆ ನಾಮನಿರ್ದೇಶನ ಮಾಡಲಾಗಿದೆ ಅಧ್ಯಕ್ಷ ಜೋ ಬೈಡನ್ ಅವರು ಘೋಷಣೆ ಮಾಡಿದ್ದಾರೆ.
* ಭಾರತೀಯ ಅಮೆರಿಕನ್ ರವಿ ಚೌಧರಿ ಅವರು ಈ ಮೊದಲು ಅಮೇರಿಕದ ವಾಯುಪಡೆಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಇವರ ನಿವೃತ್ತಿ ನಂತರ ಇವರನ್ನು ಅಮೇರಿಕ ವಾಯುಪಡೆಯಲ್ಲಿನ ಇಂಧನ ಮತ್ತು ಪರಿಸರ ವಿಭಾಗದ ಸಹಾಯಕ ಕಾರ್ಯದರ್ಶಿ ಹುದ್ದೆಗೆ ನಾಮನಿರ್ದೇಶನ ಮಾಡಲಾಗಿದೆ ಅಧ್ಯಕ್ಷ ಜೋ ಬೈಡನ್ ಮಾಹಿತಿ ನೀಡಿದ್ದಾರೆ.
* ಅಷ್ಟೇ ಅಲ್ಲದೆ ಚೌಧರಿ ಅವರು ಈ ಮೊದಲು ಅಮೇರಿಕದ ಸಾರಿಗೆ ಇಲಾಖೆಯಲ್ಲಿ ಹಿರಿಯ ಕಾರ್ಯನಿರ್ವಾಹಕರಾಗಿ ಕಾರ್ಯ ನಿರ್ವಹಿಸಿದ್ದಾರೆ, ಈ ಎಲ್ಲ ಮಾಹಿತಿಯನ್ನು ಶ್ವೇತ ಭವನವು ಪ್ರಕಟಣೆಯಲ್ಲಿ ನೀಡಿದೆ.

## ಕನ್ನಡದ ಹಿರಿಯ ನಟ ಜಿ.ಕೆ. ಗೋವಿಂದ ರಾವ್ ವಿಧಿವಶ



* ಕನ್ನಡದ ಹಿರಿಯ ನಟ ಪ್ರೊ. ಜಿ.ಕೆ. ಗೋವಿಂದ ರಾವ್ ಅವರು ವಿಧಿವಶರಾಗಿದ್ದಾರೆ.
* ಜಿ.ಕೆ. ಗೋವಿಂದ ರಾವ್ ಅವರು ವೃತ್ತಿಯಿಂದ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು ಹಾಗೂ ಇವರು ರಂಗಭೂಮಿ ಕಲಾವಿದರಾಗಿದ್ದರು, ಮಾಲ್ಗುಡಿ ಡೇಸ್, ಮಹಾಪರ್ವ ಎಂಬ ಧಾರಾವಾಹಿ ಹಾಗೂ ಅನೇಕ ಚಲನಚಿತ್ರಗಳಲ್ಲಿ ನಟಿಸಿದ್ದಾರೆ.
* ಹಿರಿಯ ನಟ ಪ್ರೊ. ಜಿ.ಕೆ. ಗೋವಿಂದ ರಾವ್ ಅವರು ಈಶ್ವರ ಅಲ್ಲಾ ಎಂಬ ಕಿರು ಕಾದಂಬರಿ, ಶೇಕ್ಸ್‌ಪೀಯರ್ ನಾಟಕ ಅಧ್ಯಯನ, ಶೇಕ್ಸ್‌ಪೀಯರ್ ಸಂವಾದ ಲೇಖನ ಮಾಲಿಕೆ, ನಡೆ ನುಡಿ ನಾಗರಿಕತೆ, ಅರಾಜಕತೆ, ಬಿಂಬ ಪ್ರತಿಬಿಂಬ, ಕ್ರಿಯೆ ಪ್ರತಿಕ್ರಿಯೆ, ಮನು ವರ್ಸಸ್ ಅಂಬೇಡ್ಕರ್ ಮುಂತಾದ ಹಲವು ಕೃತಿಗಳನ್ನು ರಚಿಸಿದ್ದಾರೆ.
* ರಾಜ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯನವರು ಕನ್ನಡದ ಹಿರಿಯ ನಟ, ಚಿಂತಕ, ಪ್ರೊ.ಜಿ.ಕೆ ಗೋವಿಂದ ರಾವ್ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸಿದ್ದಾರೆ.

## ನೇಪಾಳ, ಮ್ಯಾನ್ಮಾರ್, ಇರಾನ್ ರಾಷ್ಟ್ರಗಳಿಗೆ ಕೋವಿಡ್ ಲಸಿಕೆಗಳ ರಫ್ತು ಆರಂಭಿಸಿದ ಭಾರತ



* ಇದೀಗ ಭಾರತವು ಕೋವಿಡ್ 19 ಲಸಿಕೆಗಳನ್ನು ನೇಪಾಳ, ಮ್ಯಾನ್ಮಾರ್ ಮತ್ತು ಇರಾನ್ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.
* ನೆರೆ ರಾಷ್ಟ್ರಗಳಿಗೆ ಕೋವಿಡ್ ಲಸಿಕೆಗಳನ್ನು ರಫ್ತು ಮಾಡುವುದನ್ನು ಭಾರತ ಸರ್ಕಾರ ಮತ್ತೆ ಆರಂಭಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಹೇಳಿದ್ದಾರೆ.
* ಪ್ರಸ್ತುತ ಭಾರತವು ವಿಶ್ವದಲ್ಲೇ ಅತೀ ಹೆಚ್ಚು ಲಸಿಕೆಗಳನ್ನು ಉತ್ಪಾದಿಸುವ ರಾಷ್ಟ್ರವಾಗಿದೆ.
* ಇದೀಗ ಭಾರತದಲ್ಲಿ ಕೋವಿಡ್ 19 ಸೋಂಕು ನಿಯಂತ್ರಣಕ್ಕೆ ಬಂದಿರುವ ಹಿನ್ನಲೆಯಲ್ಲಿ, ಕೋವಿಡ್ 19 ಲಸಿಕೆಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವಿಯ ಮಾಹಿತಿ ನೀಡಿದ್ದಾರೆ.

## ಮುಂದಿನ 4 ವರ್ಷಗಳಲ್ಲಿ 500 ಮಲ್ಟಿ ಮೋಡ್ ಕಾರ್ಗೋ ಟರ್ಮಿನಲ್ ನಿರ್ಮಾಣ ಮಾಡಲಿರುವ ಭಾರತೀಯ ರೈಲ್ವೆ




* ಪ್ರಸ್ತುತ ಭಾರತೀಯ ರೈಲ್ವೆ ವಲಯದಾದ್ಯಂತ ತಡೆರಹಿತ ಸಮಗ್ರ ಸರಕು ಸಾಗಣೆಯನ್ನು ಸುಧಾರಿಸವ ನಿಟ್ಟಿನಲ್ಲಿ ಮುಂಬರುವ 3 ರಿಂದ 4 ವರ್ಷಗಳಲ್ಲಿ ಸರಿ ಸುಮಾರು 500 ಮಲ್ಟಿ ಮೋಡ್ ಕಾರ್ಗೋ ಟರ್ಮಿನಲ್‌ಗಳನ್ನು ನಿರ್ಮಾಣ ಮಾಡಲಿದೆ, ಈ ನಿರ್ಮಾಣದ ಕಾರ್ಯಕ್ಕೆ ಸುಮಾರು 50 ಸಾವಿರ ಕೋಟಿ ರೂ. ವೆಚ್ಚವಾಗಲಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.
* ಭಾರತೀಯ ರೈಲ್ವೆ ಟರ್ಮಿನಲ್‌ಗಳನ್ನು ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅಡಿಯಲ್ಲಿ ನಿರ್ಮಿಸಲಿದೆ, ವಿಮಾನ ನಿಲ್ದಾಣಗಳು, ಹೆದ್ದಾರಿಗಳು, ಬಂದರುಗಳು ಮತ್ತು ನದಿ ಜಲಮಾರ್ಗಗಳಲ್ಲಿ ವಿವಿಧ ವಿಧಾನಗಳ ತಡೆರಹಿತವಾಗಿ ಸರಕು ಸಾಗಣೆಗೆ ಸಂಪರ್ಕಿಸಲು ಈ ಟರ್ಮಿನಲ್'ನ್ನು ನಿರ್ಮಿಸಲಾಗುತ್ತಿದೆ ಎಂದು ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ತಿಳಿಸಿದ್ದಾರೆ, ಅಸತೇ ಅಲ್ಲದೆ ಕಳೆದ 7 ವರ್ಷಗಳಲ್ಲಿ 24000 ಕಿ. ಮೀ. ಗಳಷ್ಟು ರೈಲ್ವೆ ಹಳಿಗಳನ್ನು ವಿದ್ಯುದ್ದೀಕರಿಸಲಾಗಿದೆ ಎಂದು ತಿಳಿಸಿದ್ದಾರೆ.

## ಜಾಗತಿಕ ಹಸಿವು ಸೂಚ್ಯಂಕ 2021ರಲ್ಲಿ ಭಾರತಕ್ಕೆ 101ನೇ ಸ್ಥಾನ




* ಪ್ರಸ್ತುತ 2021ರ ಜಾಗತಿಕ ಹಸಿವು ಸೂಚ್ಯಂಕದ 116 ರಾಷ್ಟ್ರಗಳ ಪೈಕಿ ಭಾರತವು 101ನೇ ಸ್ಥಾನ ಪಡೆದಿದೆ, ಈ ಮೊದಲು ಭಾರತ 2020 ರಲ್ಲಿ 94ನೇ ಸ್ಥಾನದಲ್ಲಿತ್ತು, ಈ ವರ್ಷ ಭಾರತವು ಜಾಗತಿಕ ಹಸಿವು ಸೂಚ್ಯಂಕದಲ್ಲಿ ಕುಸಿತ ಕಂಡಿದೆ.
* 2021ರ ಜಾಗತಿಕ ಹಸಿವು ಸೂಚ್ಯಂಕದ ಅಗ್ರ ಸ್ಥಾನವನ್ನು ಚೀನಾ, ಬ್ರಜಿಲ್ ಮತ್ತು ಕುವೈತ್, ಹಾಗೂ ಇನ್ನು 18 ರಾಷ್ಟ್ರಗಳು ಹಂಚಿಕೊಂಡಿವೆ ಎಂದು ಗ್ಲೋಬಲ್ ಹಂಗರ್ ಇಂಡೆಕ್ಸ್ ಜಾಲತಾಣವು ಮಾಹಿತಿ ನೀಡಿದೆ.
* 2021 ರ ಜಾಗತಿಕ ಹಸಿವು ಸೂಚ್ಯಂಕವನ್ನು ಐರಿಶ್ ನೆರವಿನ ಸಂಸ್ಥೆ ಕನ್ಸರ್ನ್ ವರ್ಲ್ಡ್ ವೈಡ್ ಮತ್ತು ಜರ್ಮನಿಯ ವೆಲ್ಟ್ ಹಂಗರ್ ಹಿಲ್ಫೆ ಸಂಸ್ಥೆ ಜಂಟಿಯಾಗಿ ಸಿದ್ಧಪಡಿಸಿವೆ.
* ಈ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಪಾಕಿಸ್ತಾನ 92ನೇ ಸ್ಥಾನ, ನೇಪಾಳ 76ನೇ ಸ್ಥಾನ, ಬಾಂಗ್ಲಾದೇಶ 76ನೇ ಸ್ಥಾನ, ಹಾಗೂ ಮಾನ್ಮಾರ್ 71ನೇ ಸ್ಥಾನ ಪಡೆದುಕೊಂಡಿದೆ, ಇದೀಗ ಈ ಎಲ್ಲ ರಾಷ್ಟ್ರಗಳಲ್ಲಿ ಭಾರತಕ್ಕಿಂತ ಕಡಿಮೆ ಪ್ರಮಾಣದ ಹಸಿವಿನ ಸಮಸ್ಯೆಯಿದೆ ಎಂದು ತಿಳಿದು ಬಂದಿದೆ.

## ಕೇರಳ ರಾಜ್ಯದ ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಅದಾನಿ ಗ್ರೂಪ್ ಅಧೀನಕ್ಕೆ




* ಪ್ರಸ್ತುತ ಕೇರಳದ ತಿರುವನಂತಪುರಂನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಆಡಳಿತವನ್ನು ಅದಾನಿ ಗ್ರೂಪ್ ತನ್ನ ವಶಕ್ಕೆ ಪಡೆದುಕೊಂಡಿದೆ.
* ಪ್ರಸ್ತುತ ಕೇರಳ ರಾಜ್ಯದಲ್ಲಿ ಅಧಿಕಾರದಲ್ಲಿರುವ ಎಲ್‌ಡಿಎಫ್ ಪಕ್ಷ ಮತ್ತು ಯುಡಿಎಫ್ ಎಂಬ ವಿರೋಧ ಪಕ್ಷಗಳು ಇದನ್ನು ವಿರೋಧಿಸಿ ಪ್ರತಿಭಟನೆಯನ್ನು ನಡೆಸಿವೆ, ಇದರ ನಡುವೆಯೂ ಈ ವಿಮಾನ ನಿಲ್ದಾಣದ ಆಡಳಿತವನ್ನು ಅದಾನಿ ಗ್ರೂಪ್ ತನ್ನ ವಶಕ್ಕೆ ಪಡೆದುಕೊಂಡಿದೆ.
* ಕೇರಳದ ತಿರುವನಂಪುರಂನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು 1932ರಲ್ಲಿ ಸ್ಥಾಪಿಸಲಾಗಿದೆ, ಇಲ್ಲಿಯವರೆಗೂ ಈ ನಿಲ್ದಾಣವು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಡಿಯಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿತ್ತು, ಆದರೆ ಇದೀಗ ಅದಾನಿ ಗ್ರೂಪ್ ಈ ವಿಮಾನ ನಿಲ್ದಾಣದ ನಿರ್ವಹಣೆಯನ್ನು ತನ್ನ ವಶಕ್ಕೆ ಪಡೆದುಕೊಂಡಿದೆ.

## 'ಆರೋಗ್ಯಕರ ಸ್ಮೈಲ್'(Healthy Smile) ಎಂಬ ಮೊಬೈಲ್ ಆಪ್ ಬಿಡುಗಡೆ ಮಾಡಿದ ಏಮ್ಸ್(AIIMS)



* ಪ್ರಸ್ತುತ ಮಕ್ಕಳಲ್ಲಿ ಮೌಖಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಹಾಗೂ ಅದರ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಏಮ್ಸ್ (AIIMS) ಈ ಮೊಬೈಲ್ ಅಪ್ಲಿಕೇಶನ್'ನ್ನು ಆರಂಭಿಸಿದೆ.

* ಈ ಆ್ಯಪ್ ಮಕ್ಕಳಿಗೆ ದಿನಕ್ಕೆ 2 ಸಾರಿ ಸಂಪೂರ್ಣವಾಗಿ ಬ್ರಷ್ ಮಾಡಲು ಉತ್ತೇಜನ ನೀಡುತ್ತದೆ, ಅಷ್ಟೇ ಅಲ್ಲದೇ ಮಕ್ಕಳ ಸ್ನೇಹಿ ವರ್ಣರಂಜಿತ ಪ್ಯಾನಲ್‌ಗಳು, ಪ್ರೇರಕ ಹಾಡುಗಳು, ಹಾಗೂ ಮೌಖಿಕ ಆರೈಕೆ ಸಲಹೆಗಳ ಜೊತೆಗೆ ಗರ್ಭಾವಸ್ಥೆಯ ಪ್ರದರ್ಶನದ ವೀಡಿಯೊಗಳನ್ನು ಹೊಂದಿರಲಿದೆ.

* ಭಾರತದ40 50 ಪ್ರತಿಶತದಷ್ಟು ಮಕ್ಕಳ ಜನಸಂಖ್ಯೆಯಲ್ಲಿ 'ದಂತ ಕ್ಷಯ'ಇದೆ ಎಂದು ತಿಳಿದು ಬಂದಿದೆ, ಈ ವಿಷಯವನ್ನು ಮನಗಂಡು ನಂತರ ಈ ಅಪ್ಲಿಕೇಶನ್'ನ್ನು ಆರಂಭಿಸಲಾಗಿದೆ.

* ಈ ಆಪ್‌ನಿಂದ ಮಕ್ಕಳಿಗೆ ಮುಂದಿನ ದಿನಗಳಲ್ಲಿ ಹಲ್ಲಿನ ಕಾಯಿಲೆಗಳ ಹೊರೆಯನ್ನು ಕಡಿಮೆ ಮಾಡಲು ಸಹಾಯ ಮಾಡಲಿದೆ ಎಂದು ತಿಳಿಸಿದ್ದಾರೆ.

## ಮೈಪಾರ್ಕಿಂಗ್ಸ್(MyParkings) ಅಪ್ಲಿಕೇಶನ್ ಬಿಡುಗಡೆ ಮಾಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್



* ಪ್ರಸ್ತುತ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಅವರು 'ಮೈಪಾರ್ಕಿಂಗ್ಸ್' ಆಪ್'ನ್ನು ಇದೇ ಅಕ್ಟೋಬರ್. 14 ರಂದು ಬಿಡುಗಡೆ ಮಾಡಿದ್ದಾರೆ.

* ಮೈಪಾರ್ಕಿಂಗ್ಸ್ ಆಪ್'ನ ಮೂಲಕ ಜನರು ದಕ್ಷಿಣ ದೆಹಲಿ ಮುನ್ಸಿಪಲ್ ಕಾರ್ಪೊರೇಶನ್ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಆನ್ ಲೈನ್‌ನಲ್ಲಿ ಪಾರ್ಕಿಂಗ್ ಸ್ಲಾಟ್‌ಗಳನ್ನು ಬುಕ್ ಮಾಡಬಹುದು.

* ಪ್ರಸ್ತುತ ಈಗಿರುವ ವಾಹನ ಪಾರ್ಕಿಂಗ್ ದಟ್ಟಣೆ ಸಮಸ್ಯೆಯನ್ನು ನಿಭಾಯಿಸುವ ನಿಟ್ಟಿನಲ್ಲಿ ಈ MyParkings ಆಪ್'ನ್ನು ಪ್ರಾರಂಭಿಸಲಾಗಿದೆ, ಈ ಆಪ್ ಆ ಪ್ರದೇಶದಲ್ಲಿ ನಿಲ್ಲಿಸಬಹುದಾದ ಒಟ್ಟು ವಾಹನಗಳ ಸಾಮರ್ಥ್ಯ, ಹಾಗೂ ಪ್ರತಿಯೊಂದು ಪಾರ್ಕಿಂಗ್ ಸ್ಥಳದಲ್ಲಿ ಪಾರ್ಕಿಂಗ್ ಮಾಡಿರುವ ಮತ್ತು ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳಗಳ ಮಾಹಿತಿಯನ್ನು ನೀಡುತ್ತದೆ.

* ಈ MyParkings ಆಪ್'ನ್ನು ಬ್ರಾಡ್‌ಕಾಸ್ಟ್ ಎಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಇಂಡಿಯಾ ಲಿಮಿಟೆಡ್ (BECIL) ಅಭಿವೃದ್ಧಿಪಡಿಸಿದೆ.

* ಈ ಪಾರ್ಕಿಂಗ್ ವ್ಯವಸ್ಥೆಯು SDMC ನ್ಯಾಯವ್ಯಾಪ್ತಿಯಲ್ಲಿ ಬರಲಿದೆ, ಹಾಗೂ ಈ ಆಪ್ SDMC'ನ ನಾಲ್ಕು ವಲಯಗಳಲ್ಲಿ 145 ಸರ್ಫೇಸ್ ಪಾರ್ಕಿಂಗ್ ತಾಣಗಳನ್ನು ನಿರ್ವಹಿಸುತ್ತದೆ.

## ಜಾಗತಿಕ ಕೈ ತೊಳೆಯುವ ದಿನ




* ಜಾಗತಿಕ ಕೈತೊಳೆಯುವ ದಿನವನ್ನು ಜಾಗತಿಕವಾಗಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹಾಗೂ ಜನರನ್ನು ಸುರಕ್ಷಿತ ಹಾಗೂ ಕೈ ನೈರ್ಮಲ್ಯದ ಮಹತ್ವದ ಬಗ್ಗೆ ತಿಳುವಳಿಕೆಯನ್ನು ನೀಡಲು ಪ್ರತಿ ವರ್ಷ ಅಕ್ಟೋಬರ್ 15 ರಂದು ಆಚರಿಸಲಾಗುತ್ತದೆ.

* 'ನಮ್ಮ ಭವಿಷ್ಯವು ಹತ್ತಿರದಲ್ಲಿದೆ, ಹಾಗೂ ಒಟ್ಟಿಗೆ ಸಾಗೋಣ' ಎಂಬ ಧ್ಯೇಯ ವಾಕ್ಯದ ಅಡಿಯಲ್ಲಿ 2021 ರ ಜಾಗತಿಕ ಕೈತೊಳೆಯುವ ದಿನ ಆಚರಿಸಲಾಗಿದೆ.

* ಈ ಜಾಗತಿಕ ಕೈತೊಳೆಯುವ ದಿನವು ಕೋವಿಡ್ 19 ಸಾಂಕ್ರಾಮಿಕ ರೋಗದ ನಡುವೆ ಅತೀ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ, ಹಾಗೂ ಹಲವಾರು ಜೀವಗಳನ್ನು ಬದುಕಿಸಲು ಮತ್ತು ವೈರಲ್ ಸೋಂಕು ಮತ್ತು ಜ್ವರವನ್ನು ತಡೆಗಟ್ಟಲು ಸಹಾಯವಾಗಿದೆ.

* ಪ್ರತಿವರ್ಷವು ಭಾರತದಲ್ಲಿ ಸುಮಾರು 1ಲಕ್ಷ ಮಕ್ಕಳು ಅತಿಸಾರದಿಂದ ಸಾಯುತ್ತಿದ್ದಾರೆ ಎಂದು ರಾಷ್ಟ್ರೀಯ ಆರೋಗ್ಯ ಮಿಷನ್ ವರದಿ ಮಾಡಿದೆ, ಯುನಿಸೆಫ್ ಪ್ರಕಾರ ಕೈ ತೊಳೆಯುವ ಮೂಲಕ ಶೇ. 40 ರಷ್ಟು ಅತಿಸಾರವನ್ನು ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಲಾಗಿದೆ.

* ಕನಿಷ್ಠ ಪಕ್ಷ 20 ಸೆಕೆಂಡುಗಳ ಕಾಲ ಸೋಪ್ ಮತ್ತು ನೀರಿನಿಂದ ಕೈಗಳನ್ನು ತೊಳೆಯಬೇಕು.

* ಈ ಜಾಗತಿಕ ಕೈತೊಳೆಯುವ ದಿನವನ್ನು 2008 ರಲ್ಲಿ 'ಜಾಗತಿಕ ಕೈತೊಳೆಯುವ ಪಾಲುದಾರಿಕೆ'(Global Handwashing Partnership)(GHP) ಸ್ಥಾಪಿಸಿದೆ.

# 18-10-2021

## 8ನೇ ಬಾರಿ ಸ್ಯಾಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡ ಭಾರತೀಯ ಫುಟ್‌ಬಾಲ್ ತಂಡ




* ಪ್ರಸ್ತುತ ಭಾರತೀಯ ಫುಟ್‌ಬಾಲ್ ತಂಡವು 8ನೇ ಬಾರಿ ಸ್ಯಾಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡಿದೆ, ಭಾರತೀಯ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ

80ನೇ ಗೋಲು ಗಳಿಸಿದ್ದಾರೆ, ಈ ಮೂಲಕ ಇವರು ಲಯೊನೆಲ್ ಮೆಸ್ಸಿ ಸಾಧನೆಯ ಹಂತವನ್ನು ತಲುಪಿದ್ದಾರೆ.

* ಸ್ಯಾಫ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಭಾರತ ಫುಟ್ಬಾಲ್ ತಂಡವು ನೇಪಾಳ ಫುಟ್ಬಾಲ್ ತಂಡವನ್ನು 3 0 ಗೋಲುಗಳಿಂದ ಸೋಲಿಸಿದೆ, ಈ ಗೆಲುವಿನ ಮೂಲಕ ಭಾರತ ಒಟ್ಟಾರೆ 8ನೇ ಬಾರಿ ಸ್ಯಾಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಜಯಿಸಿಕೊಂಡಿದೆ.

## ರಾಜ್ಯಪಾಲರಿಂದ ಸಾಧಕರಿಗೆ ಡಾಕ್ ಸೇವಾ ಪ್ರಶಸ್ತಿ ಪ್ರಧಾನ

* ಕರ್ನಾಟಕ ರಾಜ್ಯ ರಾಜ್ಯಪಾಲ ಥಾವರ್ ಚಂದ್ ಗೆಲ್ಹೋಟ್ ಅವರು '8' ಸಾಧಕರಿಗೆ ಡಾಕ್ ಸೇವಾ ಪ್ರಶಸ್ತಿ ಪ್ರದಾನ ಮಾಡಿದರು.

* ಪ್ರಸ್ತುತ ಅಂಚೆ ಇಲಾಖೆಯಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿರುವ '8' ಸಾಧಕರಿಗೆ 2020 21ನೇ ಸಾಲಿನ ರಾಜ್ಯಮಟ್ಟದ ಡಾಕ್ ಸೇವಾ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ.

* ಡಾಕ್ ಸೇವಾ ಪ್ರಶಸ್ತಿ ಪಡೆದ '8' ಸಾಧಕರು: ಬ್ರ್ಯಾಂಚ್ ಪೋಸ್ಟ್ ಮಾಸ್ಟರ್(BPM) ಶಂಕರ್ ವೈ ಹರಿಜನ್, ಪೋಸ್ಟ್ ಮಾನ್(PM) ಹೆಚ್.ಅಶ್ವತ್. ಪೋಸ್ಟಲ್ ಅಸಿಸ್ಟೆಂಟ್ ಸೋಮಶೇಖರ ಎನ್, ಅಂಚೆ ಕಚೇರಿಯ ಅಸಿಸ್ಟೆಂಟ್ ಸೂಪರಿಂಟೆಡೆಂಟ್ ಮೋಹನ್ ಜೆ, ಅಸಿಸ್ಟೆಂಟ್ ಪೋಸ್ಟ್ ಮಾಸ್ಟರ್ ಜನರಲ್ ವಿ ತಾರಾ, ಪೋಸ್ಟಲ್ ಅಸಿಸ್ಟೆಂಟ್ ಶ್ರೀವತ್ಸ ಜೆ, ಬ್ರ್ಯಾಂಚ್ ಪೋಸ್ಟ್ ಮಾಸ್ಟರ್ ನಾಗಮ್ಮ ಎಸ್ ಮಂತ, ಧನಂಜಯ.ಟಿ ಇವರಿಗೆ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ.

## ದೆಹಲಿ ಮೆಟ್ರೊ ರೈಲು ಪ್ರಯಾಣಿಕರಿಗೆ ಉಚಿತ ವೈಫೈ ಸೇವೆ



* ಇನ್ನು ಮುಂದೆ ಉಚಿತವಾಗಿ ಇಂಟರ್‌ನೆಟ್ ಸೇವೆಯನ್ನು ದೆಹಲಿಯಲ್ಲಿನ ಮೆಟ್ರೊ ರೈಲು ಪ್ರಯಾಣಿಕರು ಪಡೆಯಬಹುದು, ಈ ಹೈಸ್ಪೀಡ್ ವೈ ಫೈ ಉಚಿತ ಸೇವೆಗೆ ಮೆಟ್ರೊ ರೈಲು ಸೇವೆಯ ಹಳದಿ ಮಾರ್ಗದಲ್ಲಿ ಪ್ರಾರಂಭಿಸಲಾಗಿದೆ ಎಂದು ದೆಹಲಿ ಮೆಟ್ರೊ ರೈಲು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಈ ಮೊದಲು 2020ರ ಜನೇವರಿಯಲ್ಲಿ ದೆಹಲಿ ಮೆಟ್ರೊ ರೈಲು ನವದೆಹಲಿ ಹಾಗೂ ದ್ವಾರ್ಕಾ ಸೆಕ್ಟರ್ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ ಕೋಚ್ ಒಳಗಡೆ ಈ ವೈ ಫೈ ಸೌಲಭ್ಯ ಕಲ್ಪಿಸಿತ್ತು, ಇದೀಗ ಒಂದೇ ವರ್ಷದ ಅವಧಿಯಲ್ಲಿ ಹಳದಿ ಮಾರ್ಗದಲ್ಲಿಯೂ ಕೂಡ ಈ ಸೌಲಭ್ಯವನ್ನು ಕಲ್ಪಿಸಲಾಗಿದೆ.

* ದೆಹಲಿ ಮೆಟ್ರೊ ರೈಲು ಈತರಹದ ಉಚಿತ ವೈ ಫೈ ಸೌಲಭ್ಯವನ್ನು ಕಲ್ಪಿಸಿರುವ ದಕ್ಷಿಣ ಏಷಿಯಾ ವಲಯದಲ್ಲಿಯೇ ಇದೇ ಮೊದಲ ಮೆಟ್ರೊ ರೈಲಾಗಿದೆ.

## ಶ್ರೀಲಂಕಾ ದೇಶವು ತೈಲ ಖರೀದಿಸಲು ಭಾರತದ ಬಳಿ 500 ಮಿಲಿಯನ್ ಡಾಲರ್ ಸಾಲ ಕೇಳಿದೆ



* ಪ್ರಸ್ತುತ ಶ್ರೀಲಂಕಾ ದೇಶವು ವಿದೇಶಿ ವಿನಿಮಯ ಬಿಕ್ಕಟ್ಟಿಗೆ ಸಿಲುಕಿಕೊಂಡಿದೆ, ಇದೀಗ ಈ ದ್ವೀಪ ರಾಷ್ಟ್ರ ಶ್ರೀಲಂಕಾ ಕಚ್ಚಾ ತೈಲ ಖರೀದಿಸಲು ಭಾರತದಿಂದ 500 ಮಿಲಿಯನ್ ಡಾಲರ್ ಸಾಲವನ್ನು ಕೇಳಿದೆ.

* ಶ್ರೀಲಂಕಾ ದೇಶದಲ್ಲಿ ಮುಂದಿನ ಜನೇವರಿವರೆಗೆ ಮಾತ್ರ ಇಂಧನದ ಲಭ್ಯತೆ ಇದೇ ಎಂದು ಅಲ್ಲಿನ ಇಂಧನ ಸಚಿವ ಉದಯ ಗಮ್ಮನಪಿಲ ಅವರು ತಿಳಿಸಿದ್ದಾರೆ, ಈ ಹಿನ್ನಲೆಯಿಂದಾಗಿ ಶ್ರೀಲಂಕಾ ತೈಲ ಖರೀದಿಗಾಗಿ ಭಾರತಕ್ಕೆ ಸಾಲ ಕೇಳಿಕೊಂಡಿದೆ.

* ಪ್ರಸ್ತುತ ಶ್ರೀಲಂಕಾ ದೇಶದ ಎರಡು ಪ್ರಮುಖ ರಾಷ್ಟ್ರೀಯ ಬ್ಯಾಂಕ್ ಗಳಾದ 'ಬ್ಯಾಂಕ್ ಆಫ್ ಸಿಲೋನ್' ಹಾಗೂ 'ಪೀಪಲ್ಸ್ ಬ್ಯಾಂಕ್' ಬಳಿ ಸರ್ಕಾರಿ ಸ್ವಾಮ್ಯದ, 'ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ ಸುಮಾರು 3.3 ಬಿಲಿಯನ್ ಡಾಲರ್ ಬಾಕಿ ಹಣವನ್ನು ಉಳಿಸಿಕೊಂಡಿದೆ, ಇದೀಗ ದೇಶದ ತೈಲ ವಿತರಕರು ಮಧ್ಯಪ್ರಾಚ್ಯದಿಂದ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ.

* ಭಾರತ ಶ್ರೀಲಂಕಾ ಆರ್ಥಿಕ ಪಾಲುದಾರಿಕೆ ವ್ಯವಸ್ಥೆ' ಅಡಿಯಲ್ಲಿ 3,751 ಕೋಟಿ ರೂ. ನೆರವು ಪಡೆಯಲು ಸಾಧ್ಯವೇ ಎಂಬುವದನ್ನು ಭಾರತದ ಹೈಕಮಿಷನರ್ ಮೂಲಕ ಪ್ರಯತ್ನ ನಡೆಸಲಾಗುತ್ತಿದೆ,' ಎಂದು ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ (ಸಿಪಿಸಿ) ಅಧ್ಯಕ್ಷ ಸುಮಿತ್ ವಿಜಯ ಸಿಂಘೆ ತಿಳಿಸಿದ್ದಾರೆ.

## ರಷ್ಯಾದ ಚಿತ್ರ ತಂಡವು ಬಾಹ್ಯಾಕಾಶದಲ್ಲಿ ಚಿತ್ರೀಕರಣ ಮುಗಿಸಿ ಭೂಮಿಗೆ ಮರಳಿದೆ



* ಪ್ರಸ್ತುತ ರಷ್ಯಾದ ಚಿತ್ರ ತಂಡವು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 12 ದಿನಗಳ ಕಾಲ ಸಿನಿಮಾ ಚಿತ್ರೀಕರಣ ನಡೆಸಿ ನಂತರ ಭೂಮಿಗೆ ಮರಳಿದ್ದಾರೆ ಎಂದು ತಿಳಿಸಲಾಗಿದೆ.

* ರಷ್ಯಾದ ಈ ಚಿತ್ರವು ಬಾಹ್ಯಾಕಾಶದಲ್ಲಿ ಚಿತ್ರೀಕರಣಗೊಂಡ ಮೊದಲ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ ಎಂದಿದ್ದಾರೆ.

* ರಷ್ಯಾದ ಚಿತ್ರ ತಂಡವು 'ದಿ ಚಾಲೆಂಜ್' ಎಂಬ ಚಿತ್ರದ ಕೆಲ ದೃಶ್ಯಗಳನ್ನು ಚಿತ್ರೀಕರಿಸಲು ನಟಿ ಯುಲಿಯಾ ಪೆರಿಸಿಲ್ಡ್, ಹಾಗು ನಿರ್ದೇಶಕ ಲಿಮ್ ಶಿಪೆಂಕೊ ಅವರು ಹಿರಿಯ ಗಗನಯಾತ್ರಿ ಅಂಟೊನ್ ಕಪ್ಲೆರೊವ್ ಅವರ ಜೊತೆಯಾಗಿ ಕಜಕಿಸ್ತಾನದ ಬೈಕೋನೂರ್ ಕಾಸ್ಮೋಡ್ರೋಮ್‌ನಿಂದ ಇದೇ ತಿಂಗಳ ಪ್ರಾರಂಭದಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣ ಕೈಗೊಂಡಿದ್ದರು.

* ರಷ್ಯಾದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಸಿಬ್ಬಂದಿ

ಒಲೆಗ್ ನೊವಿಟ್‌ಸ್ಕಿ, ನಟಿ ಯುಲಿಯಾ ಪೆರೆಸಿಲ್ಡ್, ನಿರ್ದೇಶಕ ಲಿಮ್ ಶಿಪೆಂಕೊ ಇವರುಗಳು 'ಸೊಯುಜ್ ಎಂಎಸ್ 18' ಹೆಸರಿನ ಬಾಹ್ಯಾಕಾಶ ಗಗನ ನೌಕೆ ಮೂಲಕ ಕಜಕ್‌ಸ್ತಾನ ಹೊರವಲಯದಲ್ಲಿ ಬಂದು ತಲಿಪಿದ್ದಾರೆ ಎಂದು ರಷ್ಯಾದ ಬಾಹ್ಯಾಕಾಶ ಸಂಸ್ಥೆ ರೋಸ್ಕೋಸ್ಮೋಸ್ ತಿಳಿಸಿದೆ.

## ಚೀನಾದಿಂದ ಎರಡನೇ ಮಾನವ ಸಹಿತ ಅಂತರಿಕ್ಷ ಯಾನಕ್ಕೆ ಚಾಲನೆ



* ಪ್ರಸ್ತುತ ಚೀನಾದ ಗನ್ಸು ಪ್ರಾಂತ್ಯದ ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಇಬ್ಬರು ಪುರುಷ ಮತ್ತು ಓರ್ವ ಮಹಿಳೆಯನ್ನು ಒಳಗೊಂಡ ಅಂತರಿಕ್ಷ ಯಾನಿಗಳ ತಂಡವನ್ನು ಬಾಹ್ಯಾಕಾಶಕ್ಕೆ ಕಳುಹಿಸುವ 6 ತಿಂಗಳ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಚೀನಾ ಚಾಲನೆ ನೀಡಿದೆ ಎನ್ನಲಾಗಿದೆ.


* ಚೀನಾ ದೇಶವು ಅಂತರಿಕ್ಷದಲ್ಲಿ ನಿರ್ಮಾಣಮಾಡುತ್ತಿರುವ ತಿಯಾನೆ ಬಾಹ್ಯಾಕಾಶ ನಿಲ್ದಾಣದ ನಿರ್ಮಾಣ ಕಾರ್ಯಕ್ಕೆ ಈ ಅಂತರಿಕ್ಷ ಯಾನಿಗಳು ನೆರವಾಗಲಿದ್ದಾರೆ.

* ಪ್ರಸ್ತುತ ಈ ಕಾರ್ಯಕ್ಕೆ ಮಾರ್ಚ್ 2ಎಫ್ ರಾಕೆಟ್ ಮೂಲಕ ಶೆನ್ಝೌ 13 ಎಂಬ ಹೆಸರಿನ ಅಂತರಿಕ್ಷ ನೌಕೆಯನ್ನು ಅಂತರಿಕ್ಷಕ್ಕೆ ಉಡಾಯಿಸಲಾಗಿದೆ ಎಂದು ತಿಳಿಸಿದ್ದಾರೆ.

* ಚೀನಾ ನಿರ್ಮಾಣ ಮಾಡುತ್ತಿರುವ ಬಾಹ್ಯಾಕಾಶ ನಿಲ್ದಾಣದಲ್ಲಿ ಈ ತಂಡವು 6 ತಿಂಗಳು ವಾಸ್ತವ್ಯವನ್ನು ಹೂಡಲಿದೆ, ಹಾಗೂ ನಿರ್ಮಾಣ ಕಾರ್ಯವನ್ನು ನಿರ್ವಹಿಸಲಿದೆ.

* ಇದೇ 2021ರ ಏಪ್ರಿಲ್'ನಿಂದ ಬಾಹ್ಯಾಕಾಶ ನಿಲ್ದಾಣ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ, ಇದು 2022ರ ಡಿಸೆಂಬರ್'ನಲ್ಲಿ ಪೂರ್ಣಗೊಳ್ಳುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

## ನಾಸಾ(NASA)ದ ಲೂಸಿ ನೌಕೆಯು ಕ್ಷುದ್ರ ಗ್ರಹಗಳ ಅಧ್ಯಯನಕ್ಕೆ ಹೊರಟಿದೆ



* ಪ್ರಸ್ತುತ ಅಮೆರಿಕದ ಬಾಹ್ಯಾಕಾಶ ಸಂಸ್ಥೆ (NASA) ನಾಸಾಯು ಸೌರ ಮಂಡಲದ ಅಧ್ಯಯನ ಮತ್ತು ಗುರುಗ್ರಹದ ಟ್ರೋಜನ್ ಕ್ಷುದ್ರಗ್ರಹಗಳ ಅಧ್ಯಯನಕ್ಕಾಗಿ ಲೂಸಿ ಎಂಬ ನೌಕೆಯನ್ನು ರವಾನಿಸಿದೆ, ಅಷ್ಟೇ ಅಲ್ಲದೆ ಈ ಲೂಸಿ ನೌಕೆಯು ಸೌರಮಂಡಲದಲ್ಲಿ 12 ವರ್ಷಗಳ ಕಾಲ ತನ್ನ ಕಾರ್ಯಾವನ್ನು ನಿರ್ವಹಿಸಲಿದೆ.

* ನಾಸಾದ ಅಟ್ಲಾಸ್ 5 ರಾಕೆಟ್ ಫ್ಲಾರಿಡಾದ ಕೇಪ್ ಕ್ಯಾನವೆರಲ್ ಉಡಾವಣಾ ನೆಲೆಯಿಂದ ಈ ಲೂಸಿ ನೌಕೆಯನ್ನು ಉಡಾವಣೆ ಮಾಡಲಾಗಿದೆ, ಈ ಲೂಸಿ ನೌಕೆಯು ಸೌರಶಕ್ತಿಚಾಲಿತ ನೌಕೆಯಾಗಿದೆ, ಇದು 8 ಕ್ಷುದ್ರಗ್ರಹಗಳ ಬಗ್ಗೆ ಅಧ್ಯಯನವನ್ನು ನಡೆಸಲಿದೆ.

* ಪ್ರಸ್ತುತ 2025ರಲ್ಲಿ ಮೊದಲ ಬಾರಿಗೆ ಮಂಗಳ ಹಾಗೂ ಗುರುವಿನ ನಡುವಿನ ವಲಯದಲ್ಲಿರುವ ಡೊನಾಲ್ಡ್ ಜೋಹಾನ್ಸನ್ ಎಂಬ ಟ್ರೋಜನ್ ಕ್ಷುದ್ರಗ್ರಹವನ್ನು ಈ ಲೂಸಿ ನೌಕೆಯು ಭೇಟಿಯಾಗಲಿದೆ., ಹಾಗೂ 2027ರಿಂದ 2033ರವರೆಗೆ ಲೂಸಿ ಒಟ್ಟಾರೆ 7 ಟ್ರೋಜನ್ ಕ್ಷುದ್ರಗ್ರಗಳ ಬಗ್ಗೆ ಅನ್ವೇಷಣೆ ನಡೆಸಲಿದೆ ಎಂದು ತಿಳಿಸಿದ್ದಾರೆ.

* ಸರಿ ಸುಮಾರು 7000 ಟ್ರೋಜನ್ ಕುದ್ರಗ್ರಹಗಳು ಗುರು ಗ್ರಹಕ್ಕೆ ಹೊಂದಿಕೊಂಡಿವೇ ಎನ್ನಲಾಗಿದೆ.

## ಗುಜರಾತ್ ಸರ್ಕಾರದಿಂದ ಬುಡಕಟ್ಟು ಜನರಿಗೆ 5 ಸಾವಿರ ರೂ. ನೆರವು



* ಗುಜರಾತ್ ಸರ್ಕಾರವು ರಾಜ್ಯದ ಬುಡಕಟ್ಟು ಸಮುದಾಯದ ಪ್ರತಿ ಪ್ರಜೆಗೆ 5 ಸಾವಿರ ರೂ. ಆರ್ಥಿಕ ನೆರವು ನೀಡಲು ತೀರ್ಮಾನಿಸಿದೆ, ಇದನ್ನು ಅಯೋಧ್ಯೆಯಲ್ಲಿನ ಶ್ರೀರಾಮ ಜನ್ಮಭೂಮಿಯ ತೀರ್ಥಯಾತ್ರೆಗಾಗಿ ನೀಡಲಾಗುತ್ತದೆ ಎಂದು ಗುಜರಾತ್'ನ ಪ್ರವಾಸೋದ್ಯಮ ಮತ್ತು ಯಾತ್ರಾ ಅಭಿವೃದ್ಧಿ ಸಚಿವ ಪೂರ್ಣೇಶ್ ಮೋದಿ ಅವರು ಹೇಳಿದ್ದಾರೆ.

* ಗುಜರಾತ್ ಸರ್ಕಾರದಿಂದ ಪ್ರತಿವರ್ಷವು ರಾಜ್ಯಮಟ್ಟದ ದಸರಾ ಮಹೋತ್ಸವ ನಿಯೋಜಿಸಲಾಗುವದು ಹಾಗೂ ಶ್ರೀರಾಮ ಜನ್ಮಭೂಮಿ ಯಾತ್ರೆಗಾಗಿ ರಾಜ್ಯದಲ್ಲಿನ ಬುಡಕಟ್ಟು ಸಮುದಾಯದ ಪ್ರತಿ ಪ್ರಜೆಗೆ 5 ಸಾವಿರ ಆರ್ಥಿಕ ನೆರವು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ನ್ಯೂಜಿಲೆಂಡ್'ನ 'ವ್ಯಾಕ್ಸಾಥಾನ್' ಅಭಿಯಾನ



* ಪ್ರಸ್ತುತ ನ್ಯೂಜಿಲೆಂಡ್'ನಲ್ಲಿನ ಜನರಿಗೆ ಕೋವಿಡ್ 19 ಲಸಿಕೆ ಹಾಕುವ ಹಿನ್ನೆಲೆಯಲ್ಲಿ 'ವ್ಯಾಕ್ಸಾಥಾನ್' ಎಂಬ ಲಸಿಕಾ ಉತ್ಸವವನ್ನು ನಿಯೋಜಿಸಲಾಗಿದೆ, ನ್ಯೂಜಿಲೆಂಡ್'ನ ಆರೋಗ್ಯ ಕಾರ್ಯಕರ್ತರು ಈ ಅಭಿಯಾನದ ಮೂಲಕ ಸಾರ್ವಜನಿಕರಿಗೆ ದಾಖಲೆ ಪ್ರಮಾಣದಲ್ಲಿ ಕೋವಿಡ್ 19 ಲಸಿಕೆಗಳನ್ನು ನೀಡಿದ್ದಾರೆ.

* ಈ 'ವ್ಯಾಕ್ಸಾಥಾನ್' ಲಸಿಕಾ ಅಭಿಯಾನವು ಸತತ ಎಂಟು ಗಂಟೆಗಳ ಕಾಲ ಟಿವಿ ಹಾಗೂ ಆನ್‌ಲೈನ್ ಜಾಲತಾಣಗಳಲ್ಲಿ ಪ್ರಸಾರವಾಗಿದೆ.

* ನ್ಯೂಜಿಲೆಂಡ್'ನ ಆರೋಗ್ಯ ಕಾರ್ಯಕರ್ತರು ಈ ಲಸಿಕಾ ಅಭಿಯಾನದ ಮೂಲಕ 1.20 ಲಕ್ಷ ಜನರಿಗೆ ಕೋವಿಡ್ 19 ಲಸಿಕೆಯನ್ನು ಹಾಕಿದ್ದಾರೆ, ಈ ಮೊದಲು ಪ್ರತಿ ನಿತ್ಯ ಸರಾಸರಿ 93

ಸಾವಿರ ಜನರು ಕೋವಿಡ್ 19 ಲಸಿಕೆ ಪಡೆಯುತ್ತಿದ್ದರು.
* ನ್ಯೂಜಿಲೆಂಡ್‌ನ ಪ್ರಧಾನ ಮಂತ್ರಿ ಜೆಸಿಂಡ ಅರ್ಡೆಮ್ ಅವರು ಈ ಲಸಿಕಾ ಅಭಿಯಾನ ಬಗ್ಗೆ ಅಲ್ಲಿನ ಲಸಿಕಾ ಕೇಂದ್ರದ ಸಿಬ್ಬಂದಿ ಜೊತೆ ಮಾತುಕತೆಯನ್ನು ನಡೆಸಿದರು.

## ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ




* ಪ್ರತಿ ವರ್ಷವು ಅಕ್ಟೋಬರ್. 15 ರಂದು ಅಂತರಾಷ್ಟ್ರೀಯ ಗ್ರಾಮೀಣ ದಿನವನ್ನು ಆಚರಣೆ ಮಾಡಲಾಗುತ್ತದೆ.
* ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಈ ಅಂತರಾಷ್ಟ್ರೀಯ ಗ್ರಾಮೀಣ ದಿನವನ್ನು 2007 ರ ಡಿಸೆಂಬರ್. 18 ರಂದು ಸ್ಥಾಪಿಸಿದೆ.
* 2021 ರ ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಗ್ರಾಮೀಣ ಮಹಿಳೆಯರು ಎಲ್ಲರಿಗೂ ಒಳ್ಳೆಯ ಆಹಾರವನ್ನು ಬೆಳೆಸುತ್ತಿದ್ದಾರೆ' ಎಂಬ ವಿಷಯದ ಅಡಿಯಲ್ಲಿ ಆಚರಿಸಲಾಗುತ್ತದೆ.
*ಪ್ರಸ್ತುತ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸಲು ಹಾಗೂ ಲಿಂಗ ಸಮಾನತೆಯ ಮೇಲೆ ಕೇಂದ್ರೀಕರಿಸಲು ಈ ದಿನ ಸಹಾಯ ಮಾಡಲಿದೆ, ಅಷ್ಟೇ ಅಲ್ಲದೇ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಹೆಚ್ಚಿಸುವಲ್ಲಿ, ಬಡತನವನ್ನು ನಿರ್ಮೂಲನೆ ಹಾಗೂ ಆಹಾರ ಭದ್ರತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಈ ದಿನ ಪ್ರಮುಖ ಪಾತ್ರವನ್ನು ವಹಿಸಲಿದೆ.
* ವಿಶ್ವಸಂಸ್ಥೆಯ ನೀಡಿರುವ ವರದಿಯ ಪ್ರಕಾರ ಇಗೀಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ಒಟ್ಟು ಕೃಷಿ ಕಾರ್ಮಿಕರಲ್ಲಿ ಶೇ. 40 ರಷ್ಟು ಮಹಿಳೆಯರಿದ್ದಾರೆ ಎಂದು ತಿಳಿಸಿದೆ.

# 20-10-2021

## ಈಶಾನ್ಯ ರಾಜ್ಯಗಳಲ್ಲಿ '6' ಹೊಸ ವಾಯುಮಾರ್ಗ



* ಪ್ರಸ್ತುತ ಕೇಂದ್ರ ಸರ್ಕಾರವು ಈಶಾನ್ಯ ರಾಜ್ಯಗಳಲ್ಲಿ ವೈಮಾನಿಕ ಸಂಚಾರ ಕಲ್ಪಿಸುವ ಉದ್ದೇಶ ಹೊಂದಿದೆ, ಇದೀಗ ಈಶಾನ್ಯ ರಾಜ್ಯಗಳ ಮೂರು ನಗರಗಳನ್ನು ಸಂಪರ್ಕಿಸುವ 6 ಹೆಚ್ಚುವರಿ ವಾಯುಮಾರ್ಗಗಳನ್ನು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ವರ್ಚುಲ್ ಸಭೆಯ ಮೂಲಕ ಅವುಗಳಿಗೆ ಚಾಲನೆ ನೀಡಿದ್ದಾರೆ.
* ಹೊಸದಾಗಿ ಲೋಕಾರ್ಪಣೆಗೊಂಡ ವಾಯುಮಾರ್ಗಗಳು: ಕೋಲ್ಕತಾ ಗುವಾಹಟಿ, ಗುವಾಹಟಿ ಐಜ್ವಾಲ್, ಐಜ್ವಾಲ್ ಗುವಾಹಟಿ, ಐಜ್ವಾಲ್ ಶಿಲ್ಲಾಂಗ್, ಶಿಲ್ಲಾಂಗ್ ಐಜ್ವಾಲ್, ಗುವಾಹಟಿ ಕೋಲ್ಕತಾ ಮಾರ್ಗಗಳಾಗಿವೆ.

## ಮನು ಅತ್ರಿ ಸಾಯಿ ಪ್ರಣೀತ್‌ಗೆ ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಸೋಲು

* ಡೆನ್ಮಾರ್ಕ್ 2017ರ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿರುವ ಶ್ರೀಕಾಂತ್ ಅವರು, ಆರಂಭದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದವರೇ ಆಗಿರುವ ಬಿ.ಸಾಯಿ ಪ್ರಣೀತ್ ಅವರನ್ನು ಸೋಲಿಸಿದರು.
* ಥಾಯ್ಲೆಂಡ್‌ನ ಕುನ್ಲಾವುತ್ ವಿತಿದ್ಸನ್ ಎದುರು ವಿಶ್ವ ರ‍್ಯಾಂಕಿಂಗ್‌ನ 28ನೇ ಸ್ಥಾನದಲ್ಲಿರುವ ಸಮೀರ್ ವರ್ಮಾ ಅವರು 21 17, 21 14ರಿಂದ ಗೆಲುವು ಸಾಧಿಸಿದರು.
* ಪುರುಷರ ಡಬಲ್ಸ್‌ನಲ್ಲಿ ಮಲೇಷ್ಯಾದ ಗೋ ಜೆ ಫೆಯ್ ಹಾಗೂ ನೂರ್ ಇಜ್ಜುದ್ದೀನ್ ಅವರ ವಿರುದ್ಧ ಮನು ಅತ್ರಿ ಬಿ.ಸಾಯಿ ಪ್ರಣೀತ್ ಅವರು 18 21, 11 21ರಿಂದ ಮೊದಲ ಸುತ್ತಿನಲ್ಲೇ ಸೋಲ ಅನುಭವಿಸಿದರು.

## ಭಾರತ ಮತ್ತು ಇಸ್ರೇಲ್ ಲಸಿಕೆ ಪ್ರಮಾಣೀಕರಣದ ಪರಸ್ಪರ ಗುರುತಿಸುವಿಕೆಗೆ ಒಪ್ಪಿಗೆ




* ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರು ಮೂರು ದಿನಗಳ ಇಸ್ರೇಲ್ ಭೇಟಿಯ ಸಮಯದಲ್ಲಿ ಇಸ್ರೇಲಿ ಕೌಂಟರ್'ನ ಅಂತಾರಾಷ್ಟ್ರೀಯ ಪ್ರಯಾಣದ ನಡುವೆ ಕೋವಿಡ್ 19 ಲಸಿಕೆ ಪ್ರಮಾಣಪತ್ರಗಳನ್ನು ಪರಸ್ಪರ ಗುರುತಿಸಲು ಒಪ್ಪಿಕೊಂಡಿದ್ದಾರೆ.
* ಅಷ್ಟೇ ಅಲ್ಲದೇ ಜೈಶಂಕರ್ ಅವರು ಅಲ್ಲಿನ ಸರ್ಕಾರಿ ಅಧಿಕಾರಿಗಳು, ವ್ಯಾಪಾರ ಮುಖಂಡರು ಹಾಗೂ ಭಾರತೀಯ ಯಹೂದಿ ಸಮುದಾಯಗಳೊಂದಿಗೆ ಸಭೆ ನಡೆಸಿ, ನಂತರ ಇಸ್ರೇಲ್'ನ ವಿದೇಶಾಂಗ ಸಚಿವ ಯಾರ್ ಲ್ಯಾಪಿಡ್ ಅವರನ್ನು ಭೇಟಿಯಾದರು, ಈ ಭೇಟಿಯ ಸಂಧರ್ಭದಲ್ಲಿ ಕೋವಿಡ್ 19 ಲಸಿಕೆಯ ಪ್ರಮಾಣೀಕರಣದ ಪರಸ್ಪರ ಗುರುತಿಸುವಿಕೆ ಮತ್ತು ಮುಂದಿನ ದಿನಗಳ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಪುನರಾರಂಭಿಸಲು ಉಭಯ ಪಕ್ಷಗಳು ತಾತ್ವಿಕವಾಗಿ ಒಪ್ಪಿಕೊಂಡಿವೆ' ಎಂದು ತಿಳಿಸಿದ್ದಾರೆ.
* ಪ್ರಸ್ತುತ 2022 ರ ನಡುವೆ ಭಾರತ ಮತ್ತು ಇಸ್ರೇಲ್ ಒಪ್ಪಂದದ ಸಹಿಗಾಗಿ ಸಿದ್ಧವಾಗಿವೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಆರೋಗ್ಯ ಕ್ಷೇತ್ರ, ಕೃಷಿ ಮತ್ತು ಹಸಿರು ಬೆಳವಣಿಗೆ ಆದ್ಯತೆಯನ್ನು ನೀಡಲಿದೆ ಎಂದಿದ್ದಾರೆ, ಹಾಗೂ ಕೋವಿಡ್ 19 ಲಸಿಕೆ ಪ್ರಮಾಣಪತ್ರಗಳನ್ನು ಪರಸ್ಪರ ಗುರುತಿಸಲು ಹಂಗೇರಿ, ಸೆರ್ಬಿಯಾ ಭಾರತಕ್ಕೆ ಒಪ್ಪಿಗೆಯನ್ನು ನೀಡಿವೆ ಎಂದು ತಿಳಿದು ಬಂದಿದೆ.

## ಐರ್ಲೆಂಡ್‌ನ ಕರ್ಟಿಸ್ ಕ್ಯಾಂಪರ್ ಸತತ 4 ವಿಕೆಟ್ ಪಡೆದ ವಿಶ್ವ ದಾಖಲೆ



* ಪ್ರಸ್ತುತ ಟ್ವೆಂಟಿ 20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಐರ್ಲೆಂಡ್‌ನ ಕರ್ಟಿಸ್ ಕ್ಯಾಂಪರ್ ಅವರು ಸತತವಾಗಿ 4 ಎಸೆತಗಳಲ್ಲಿ 4 ವಿಕೆಟ್'ಗಳನ್ನೂ ಪಡೆದುಕೊಂಡು ವಿಶ್ವ ದಾಖಲೆ ನಿರ್ಮಿಸಿದ್ದಾರೆ.
* ಅಷ್ಟೇ ಅಲ್ಲದೇ ಟ್ವೆಂಟಿ 20 ಅಂತರರಾಷ್ಟ್ರೀಯ ಕ್ರಿಕೆಟ್‌ನ ಇತಿಹಾಸದಲ್ಲಿ ಹ್ಯಾಟ್ರಿಕ್ ವಿಕೆಟ್ ಸಾಧನೆ ಮಾಡಿದ ಐರ್ಲೆಂಡ್‌ನ ಮೊದಲ ಬೌಲರ್ ಕೂಡ ಇವರಾಗಿದ್ದಾರೆ.
* ಟ್ವೆಂಟಿ 20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈ ದಾಖಲೆ ನಿರ್ಮಿಸಿದ ವಿಶ್ವದ 3ನೇ ಬೌಲರ್ ಅವರಾಗಿದ್ದಾರೆ.
* ಈ ಮೊದಲು ಶ್ರೀಲಂಕಾದ ಬೌಲರ್ ಲಸಿತ್ ಮಾಲಿಂಗ ಮತ್ತು ಅಫ್ಘಾನಿಸ್ತಾನದ ರಶೀದ್ ಖಾನ್ ಸತತ 4 ಎಸೆತಗಳಲ್ಲಿ 4 ವಿಕೆಟ್ ಗಳನ್ನು ಪಡೆದುಕೊಂಡು ದಾಖಲೆ ನಿರ್ಮಿಸಿದ್ದರು.

## ಶೀಘ್ರ ಪೋಲಿಯೊ ಲಸಿಕೆ ಆರಂಭಿಸಲಿರುವ ಅಫ್ಘಾನಿಸ್ತಾನ್



* ಪ್ರಸ್ತುತ ಅಫ್ಘಾನಿಸ್ತಾನಿನ ತಾಲಿಬಾನ್ ಪೋಲಿಯೊ ಲಸಿಕಾ ಅಭಿಯಾನವನ್ನು ಬೆಂಬಲಿಸಲು ಒಪ್ಪಿಗೆ ನೀಡಿದ್ದಾರೆ, ಅಷ್ಟೇ ಅಲ್ಲದೇ ಅಫ್ಘಾನಿಸ್ತಾನ ರಾಷ್ಟ್ರದಲ್ಲಿ ಮುಂದಿನ ತಿಂಗಳು ಆರೋಗ್ಯ ಕಾರ್ಯಕರ್ತರು ಪ್ರತಿ ಮನೆ ಮನೆಗೆ ತೆರಳಿ ಪೋಲಿಯೊ ಲಸಿಕಾ ಅಭಿಯಾನವನ್ನು ಪ್ರಾರಂಭಿಸಲಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ(WHO) ಹಾಗೂ ಯುನಿಸೆಫ್ ತಿಳಿಸಿವೆ.
* ಸದ್ಯ ಇದೀಗ ಅಫ್ಘಾನಿಸ್ತಾನ ಹಾಗೂ ಪಾಕಿಸ್ತಾನದಲ್ಲಿ ಈಗಲೂ ಪೋಲಿಯೊ ಇದೆ.
* ಅಫ್ಘಾನಿಸ್ತಾನ 30 ಲಕ್ಷಕ್ಕಿಂತ ಹೆಚ್ಚಿನ ಮಕ್ಕಳಿಗೆ ಲಸಿಕೆ ನೀಡುವ ಗುರಿಯನ್ನು ಹೊಂದಿದೆ, ಇದೇ ನವೆಂಬರ್ 8 ರಿಂದ ಪೋಲಿಯೊ ಲಸಿಕಾ ಅಭಿಯಾನ ಪ್ರಾರಂಭವಾಗಲಿದೆ ಎಂದು ತಿಳಿಸಿದ್ದಾರೆ.
* ಪೋಲಿಯೊ ಲಸಿಕೆಯ 2ನೇ ಅಭಿಯಾನ ಡಿಸೆಂಬರ್ ತಿಂಗಳಿನಲ್ಲಿ ಪಾಕಿಸ್ತಾನದಲ್ಲಿಯು ಆರಂಭಿಸಲು ಒಪ್ಪಿಗೆ ನೀಡಲಾಗಿದೆ.
* ಇದೀಗ ಅಫ್ಘಾನಿಸ್ತಾನ ಲಸಿಕೆ ನೀಡುವ ಮೂಲಕ ಪೋಲಿಯೊವನ್ನು ನಿರ್ಮೂಲನೆ ಮಾಡುವ ಉದ್ದೇಶವನ್ನು ಹೊಂದಿದೆ ಎನ್ನಲಾಗಿದೆ.

## ಯುಕೆ ಯಲ್ಲಿ ಚಿನ್ನದ ಪದಕ ಗೆದ್ದ ಭಾರತೀಯ ಸೇನೆ



* ಇತ್ತೀಚಿಗೆ ಯುಕೆ (UK) ನಲ್ಲಿ ನಡೆದ ಕೇಂಬ್ರಿಯನ್ ಪೆಟ್ರೋಲ್ ತಾಲೀಮಿ (Cambrian patrol exercise) ನಲ್ಲಿ ಭಾರತೀಯ ಸೇನೆಯು ಚಿನ್ನದ ಪದಕವನ್ನು ಜಯಿಸಿದೆ.
* ಈ ಹಿಂದೆ ಅಕ್ಟೋಬರ್ 13 15ರ ಅವಧಿಯಲ್ಲಿ ವೇಲ್ಸ್ ನ ಬ್ರೆಕಾನ್'ನಲ್ಲಿ ನಡೆದ ಡ್ರಿಲ್ ನಲ್ಲಿ ಗೂರ್ಖಾ ರೈಫಲ್ಸ್ (frontier force) ಭಾರತೀಯ ಸೇನೆಯನ್ನು ಪ್ರತಿನಿಧಿಸಿತ್ತು.
* ಯುಕೆಯಲ್ಲಿ ನಡೆದ ಕೇಂಬ್ರಿಯನ್ ಪೆಟ್ರೋಲ್ ತಾಲೀಮಿ ಈವೆಂಟ್'ನ್ನು ಮಾನವ ಸಹಿಷ್ಣುತೆ ಹಾಗೂ ತಂಡದ ಮನೋಭಾವದ ಅಂತಿಮ ಪರೀಕ್ಷೆ ಎಂದು ಗುರುತಿಸಲಾಗಿದೆ, ಹಾಗೂ ಇದನ್ನು "ಮಿಲಿಟರಿ ಪೆಟ್ರೋಲಿಂಗ್‌ನ ಒಲಿಂಪಿಕ್ಸ್" ಎಂದು ಗುರುತಿಸಲಾಗಿದೆ.
* ಪ್ರಸ್ತುತ ಭಾಗವಹಿಸಿರುವ 96 ತಂಡಗಳ ಪೈಕಿ ಕೇವಲ 3 ಅಂತರಾಷ್ಟ್ರೀಯ ಗಸ್ತುಗಳಿಗೆ ಮಾತ್ರ ಚಿನ್ನದ ಪದಕವನ್ನು ಪ್ರಧಾನ ಮಾಡಲಾಗಿದೆ.

## ಭಾರತೀಯ 'ತಕಾಚಾರ್' ಸಂಸ್ಥೆಗೆ 'ಅರ್ಥ್‌ಶಾಟ್' ಪ್ರಶಸ್ತಿ



* ಪ್ರಸ್ತುತ ಭಾರತೀಯ 'ತಕಾಚಾರ್' ಸಂಸ್ಥೆಯು ಬಿಬಿಸಿಯ 1 ಮಿಲಿಯನ್ ಪೌಂಡ್ ಬಹುಮಾನದ 'ಅರ್ಥ್‌ಶಾಟ್' ಪ್ರಶಸ್ತಿ ಪಡೆದುಕೊಂಡಿದೆ.
* ಪರಿಸರಕ್ಕೆ ಯಾವುದೇ ರೀತಿಯ ಹಾನಿ ಉಂಟಾಗದ ರೀತಿಯಲ್ಲಿ ಕೃಷಿ ತ್ಯಾಜ್ಯವನ್ನು ಉಪಯೋಗಿ ಉತ್ಪನ್ನಗಳನ್ನಾಗಿ ಪರಿವರ್ತಿಸುವ ತಂತ್ರಜ್ಞಾನವನ್ನು ಆವಿಷ್ಕರಿಸಿರುವ ವಿದ್ಯುತ್ ಮೋಹನ್ ಅವರ ತಕಾಚಾರ್ ಸಂಸ್ಥೆಗೆ "ಅರ್ಥ್‌ಶಾಟ್" ಪ್ರಶಸ್ತಿಯು ಕ್ಲೀನ್ ಔಟ್ ಏರ್ ವಿಭಾಗದಲ್ಲಿ ಲಭಿಸಿದೆ.
* ಈ ಪ್ರಶಸ್ತಿಯ 1 ಮಿಲಿಯನ್ ಪೌಂಡ್ ಬಹುಮಾನವನ್ನು ಹೊಂದಿರಲಿದೆ.
* 2030ರೊಳಗೆ ಜಗತ್ತು ಎದುರಿಸುತ್ತಿರುವ ಪರಿಸರಕ್ಕೆ ಸಂಬಂಧಿಸಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಕನಿಷ್ಠ 50 ಪರಿಹಾರಗಳನ್ನು ನೀಡುವವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.
* ಬಿಬಿಸಿ ಈ ಅರ್ಥ್‌ಶಾಟ್ ಪ್ರಶಸ್ತಿಯನ್ನು ಮುಂದಿನ 10 ವರ್ಷಗಳಲ್ಲಿ ಪ್ರತಿ ವರ್ಷ 5 ಜನರಿಗೆ ನೀಡಲಿದೆ ಎಂದು ತಿಳಿಸಿದೆ.

### ಕೇಂದ್ರ ಸರ್ಕಾರವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 102 ಕೋಟಿ ಡೋಸ್ ಕೋವಿಡ್ ಲಸಿಕೆ ವಿತರಿಸಿದೆ




* ಸದ್ಯ ಕೇಂದ್ರ ಸರ್ಕಾರವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟು 102 ಕೋಟಿ ಡೋಸ್ ಕೋವಿಡ್ 19 ಲಸಿಕೆಯನ್ನು ವಿತರಣೆ ಮಾಡಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.
* ಭಾರತದಲ್ಲಿ ಜನೇವರಿ. 16 ರಂದು ಸ್ವದೇಶಿ ನಿರ್ಮಿತ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಕೋವಿಡ್ 19 ಲಸಿಕೆಗಳಿಗೆ ಪ್ರಧಾನಿ ಮೋದಿಯವರು ಚಾಲನೆ ನೀಡಿದ್ದಾರೆ, ಈ ಲಸಿಕೆಗಳನ್ನು ಮೊದಲಿಗೆ ಕೋರೋಣ ವಾರಿಯರ್ಸ್'ಗೆ ಕ್ರಮೇಣವಾಗಿ 45 ವರ್ಷ ಮೇಲ್ಪಟ್ಟ ನಾಗರೀಕರಿಗೆ, ಹಾಗೂ ಮೇ.1ರಿಂದ 18 45 ವರ್ಷ ವಯಸ್ಸಿನ ಎಲ್ಲ ಪ್ರಜೆಗಳಿಗೂ ಲಸಿಕೆ ನೀಡಲು ಆರಂಭಿಸಲಾಗಿದೆ.
* ಪ್ರಸ್ತುತ ಲಸಿಕೆ ಅಭಿಯಾನ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು 97,79,47,783 ಜನರಿಗೆ ಕೋವಿಡ್ 19 ಲಸಿಕೆಯನ್ನು ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

### ಟಾಟಾಕೂಟಿ ಪರ್ವತ ಯಶಸ್ವಿಯಾಗಿ ಏರಿದ ಕರ್ನಾಟಕದ ಧನರಾಜ್



* ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಂನ 15,568 ಅಡಿ ಎತ್ತರದ ಟಾಟಾಕೂಟಿ ಪರ್ವತವನ್ನು ಚಿತ್ರದುರ್ಗ ಜಿಲ್ಲೆಯ ಅನ್ನೆಹಾಳ್ ಗ್ರಾಮದ ನಿವಾಸಿಯಾಗಿರುವ ಧನರಾಜ್ ಯಶಸ್ವಿಯಾಗಿ ಏರಿದ್ದಾರೆ.
* ಇತ್ತೀಚಿಗೆ ಪರ್ವತಾರೋಹಣ ಸಾಹಸ ಕಾರ್ಯಕ್ಕೆ ಯುವ ಸಬಲೀಕರಣ ಕ್ರೀಡಾ ಇಲಾಖೆ, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯು 38 ಜನರನ್ನು ಆಯ್ಕೆ ಮಾಡಿತ್ತು.
* ಜಮ್ಮು ಮತ್ತು ಕಾಶ್ಮೀರದ ಜವಾಹರ್ ಇನ್‌ಸ್ಟಿಟ್ಯೂಟ್ ಆಫ್ ಮೌಂಟೆನೆರಿಂಗ್ ಅಂಡ್ ವಿಂಟರ್ ಸ್ಪೋರ್ಟ್ಸ್‌ನಲ್ಲಿ ಧನರಾಜ್ ಅವರು 10 ದಿನ ತರಬೇತಿಯನ್ನು ಪಡೆದುಕೊಂಡಿದ್ದರು.
* ಯುವ ಸಾಹಸಿ ಧನರಾಜ್ ಅವರು ಕೇವಲ 23 ಗಂಟೆಯೊಳಗೆ ಈ ಪರ್ವತವನ್ನು ಏರಿದ್ದಾರೆ, ಈ ಮೊದಲು 2019ರಲ್ಲಿ ಧನರಾಜ್ ಅವರು ಜಮ್ಮು ಮತ್ತು ಕಾಶ್ಮೀರದ ಸೋನಾ ಮಾರ್ಗ್ ಪರ್ವತ ಏರುವುದಕ್ಕೆ ಆಯ್ಕೆಯಾಗಿದ್ದರು, ತದನಂತರ 13,500 ಅಡಿ ಎತ್ತರದ ಶಿಖರ ಏರಿದ್ದರು.

## 21-10-2021

### NPCI ಕಾರ್ಡ್ ಟೋಕನೈಸೇಶನ್‌ಗಾಗಿ NTS ಪ್ಲಾಟ್ ಫಾರ್ಮ್ ಆರಂಭ

* ಪ್ರಸ್ತುತ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (NPCI) ಟೋಕನೈಸೇಶನ್ ಸಿಸ್ಟಮ್ (Tokenization system) (NTS) ಅನ್ನು ಆರಂಭಿಸಿದೆ, ಇದು ಕಾರ್ಡ್‌ಗಳ ಟೋಕನೈಸೇಶನ್‌ಗೆ ಬೆಂಬಲವಾಗಿ ಕಾರ್ಡ್ ವಿವರಗಳನ್ನು ವ್ಯಾಪಾರಿಗಳೊಂದಿಗೆ ಸಂಗ್ರಹಿಸಲು ಪರ್ಯಾಯ ವ್ಯಸ್ಥೆಯನ್ನು ನೀಡಲಿದೆ.
* ಗ್ರಾಹಕರ ಸುರಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಹಾಗೂ ಗ್ರಾಹಕರಿಗೆ ತಡೆರಹಿತ ಶಾಪಿಂಗ್ ಅನುಭವವನ್ನು ನೀಡಲು NTS ರುಪೇ ಕಾರ್ಡ್‌ಗಳ ಟೋಕನೈಸೇಶನ್'ನ್ನು ಬೆಂಬಲಿಸಲಾಗಿದೆ.
* ಎಲ್ಲಾ ವ್ಯವಹಾರಗಳು TROF'ನ್ನು ಬಳಸಿಕೊಳ್ಳುವ ಮೂಲಕ ತಮ್ಮ ರುಪೇ ಗ್ರಾಹಕರ ಮೂಲವನ್ನು ಭವಿಷ್ಯದ ವಹಿವಾಟುಗಳಿಗಾಗಿ ತಮ್ಮ ರುಪೇ ಗ್ರಾಹಕರಿಂದ ಆರಂಭಿಸಬಹುದು ಎಂದು ತಿಲಿಸಿದೆ.
* ಎಲ್ಲ ವ್ಯಾಪಾರಿಗಳು 2022 ರ ಜನೇವರಿ. 01 ರೊಳಗೆ ಟೋಕನೈಸೇಶನ್'ನ್ನು ಪೂರೈಸಬೇಕು ಎಂದು ತಿಳಿಸಲಾಗಿದೆ.
* ರಾಷ್ಟ್ರೀಯ ಪಾವತಿಗಳ ನಿಗಮ (NPCI)ವು ಭಾರತೀಯ ರಿಸರ್ವ್ ಬ್ಯಾಂಕ್'ನ ವಿಶೇಷ ವಿಭಾಗವಾಗಿದೆ, ಅಷ್ಟೇ ಅಲ್ಲದೇ ಇದು ಹಣಕಾಸು ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ, ಇದನ್ನು ಭಾರತದಲ್ಲಿನ ಚಿಲ್ಲರೆ ಪಾವತಿ ಮತ್ತು ವಸಾಹತು ವ್ಯವಸ್ಥೆಯನ್ನು ನಿರ್ವಹಿಸಲು ಸ್ಥಾಪನೆ ಮಾಡಲಾಗಿದೆ.
* 2008 ರ ಡಿಸೆಂಬರ್'ನಲ್ಲಿ NPCI'ನ್ನು ಸ್ಥಾಪಿಸಲಾಗಿದೆ.

### International Monetary Fund (IMF) ತೊರೆಯಲಿರುವ ಗೀತಾ ಗೋಪಿನಾಥ್



* ಮುಖ್ಯ ಅರ್ಥಶಾಸ್ತ್ರಜ್ಞೆ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಯ (IMF) ಸಂಶೋಧನಾ ವಿಭಾಗದ ನಿರ್ದೇಶಕಿಯಾಗಿರುವ ಗೀತಾ ಗೋಪಿನಾಥ್ ಅವರು 2022 ರ ಜನೇವರಿಯಲ್ಲಿ ತಮ್ಮ ಕೆಲಸವನ್ನು ತೊರೆಯಲಿದ್ದಾರೆ, ನಂತರ ಇವರು ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಮರಳಲಿದ್ದಾರೆ ಎಂದು ತಿಳಿದು ಬಂದಿದೆ.
* ಗೀತಾ ಗೋಪಿನಾಥ್ ಅವರು 2019 ರ ಜನೇವರಿಯಲ್ಲಿ IMFಗೆ ಭಾರತೀಯ ಅಮೇರಿಕನ್ ಅರ್ಥಶಾಸ್ತ್ರಜ್ಞರಾಗಿ ಸೇರ್ಪಡೆಯಾಗಿದ್ದರು.
* ಗೀತಾ ಗೋಪಿನಾಥ್ ಅವರು IMF'ನ ಮೊದಲ ಮಹಿಳಾ ಮುಖ್ಯ ಅರ್ಥಶಾಸ್ತ್ರಜ್ಞೆಯಾಗಿದ್ದಾರೆ.

* ಗೀತಾ ಗೋಪಿನಾಥ್ ಅವರು 1971 ರಲ್ಲಿ ಜನಿಸಿ, ತಮ್ಮ ಶಾಲಾ ಶಿಕ್ಷಣವನ್ನು ಕೋಲ್ಕತ್ತಾದಲ್ಲಿ ಮುಗಿಸಿ, ನಂತರ ದೆಹಲಿಯ ಲೇಡಿ ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್‌ನಿಂದ ಪದವಿ ಮುಗಿಸಿದರು, ಇದಾದ ನಂತರ 2001 ರಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ phD ಪೂರ್ಣಗೊಳಿಸಿದಳು.

* ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ನಂತರ ಹಾರ್ವರ್ಡ್‌ನಲ್ಲಿ ಈ ಹುದ್ದೆ ಅಲಂಕರಿಸಿದ ಮೊದಲ ಭಾರತೀಯ ಗೀತಾ ಗೋಪಿನಾಥ್ ಅವರಾಗಿದ್ದಾರೆ.

## ಮುಖ್ಯ ಮಂತ್ರಿ ಪಡಿತರ ಆಪ್ಕೆ ದ್ವಾರ(Aapke Dwar) ಯೋಜನೆಯನ್ನು ಜಾರಿಗೆ ತರಲು ಸಿದ್ಧವಾದ ಮಧ್ಯಪ್ರದೇಶದ ರಾಜ್ಯ ಕ್ಯಾಬಿನೆಟ್



* 2021 ರ ಅಕ್ಟೋಬರ್. 19 ರಂದು ನಡೆದ ಮಧ್ಯಪ್ರದೇಶದ ರಾಜ್ಯ ಕ್ಯಾಬಿನೆಟ್ ಸಭೆಯಲ್ಲಿ ಮುಖ್ಯ ಮಂತ್ರಿ ಪಡಿತರ ಆಪ್ಕೆ ದ್ವಾರ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಿದೆ.

* ಮಧ್ಯಪ್ರದೇಶದ ರಾಜ್ಯದಲ್ಲಿನ ಬಡ ಬುಡಕಟ್ಟು ಕುಟುಂಬಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಮುಖ್ಯ ಮಂತ್ರಿ ಪಡಿತರ ಆಪ್ಕೆ ದ್ವಾರ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಕ್ಯಾಬಿನೆಟ್ ತಿಳಿಸಿದೆ.

* ಈ ಯೋಜನೆಯು ಉಪಯೋಗವನ್ನು ಮಧ್ಯಪ್ರದೇಶದ 16 ಜಿಲ್ಲೆಗಳ 74 ಅಭಿವೃದ್ಧಿ ಬ್ಲಾಕ್‌ಗಳಲ್ಲಿನ ಸರಿ ಸುಮಾರು 7511 ಹಳ್ಳಿಗಳ ಬುಡಕಟ್ಟು ಕುಟುಂಬಗಳು ಪಡೆಯಲಿವೆ.

* ಪ್ರಸ್ತುತ 220 ರಿಂದ 440 ಕ್ವಿಂಟಾಲ್ ಪಡಿತರವನ್ನು 22 ರಿಂದ 25 ದಿನಗಳವರೆಗೆ ವಾಹನದ ಮೂಲಕ ಪ್ರಜೆಗಳ ಮನೆಗಳಿಗೆ ರವಾನಿಸಲಾಗುತ್ತದೆ, ಈ ಯೋಜನೆಗಾಗಿಯೇ ಸುಮಾರು 472 ವಾಹನಗಳನ್ನು ಬಳಸಲಾಗುತ್ತದೆ.

## ಕಾಶ್ಮೀರಕ್ಕೆ 250 ಎಂಎಂ ಸೀರ್(seer)ನೀರು ಸರಬರಾಜು ಯೋಜನೆಗೆ ಚಾಲನೆ



* ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಕಾಶ್ಮೀರಕ್ಕೆ ಎರಡು ದಿನಗಳ ಭೇಟಿ ನೀಡಿದಾಗ ಕಾಶ್ಮೀರದ ಪಹಲ್ಗಾಮ್ ಜಿಲ್ಲೆಗೆ 250 ಎಂಎಂ ಸೀರ್ ನೀರು ಸರಬರಾಜು ಯೋಜನೆಯನ್ನು ಉದ್ಘಾಟನೆ ಮಾಡಿದರು, ಅಷ್ಟೇ ಅಲ್ಲದೇ ಗಾಲ್ಫ್ ಕೋರ್ಸ್ ಪಹಲ್ಗಾಮ್'ನಲ್ಲಿನ ಪಹಲ್ಗಾಮ್ ಅಭಿವೃದ್ಧಿ ಪ್ರಾಧಿಕಾರದ ಪ್ರವಾಸಿ ಗುಡಿಸಲನ್ನು ಉದ್ಘಾಟಿಸಿದರು.

* ಇದೇ ಸಂಧರ್ಭದಲ್ಲಿ ಅರಣ್ಯ ಇಲಾಖೆಗಳ ದೇವದಾರು ಸಸಿ ನೆಡುವ ಕಾರ್ಯಕ್ರಮವನ್ನು ನೆರವೇರಿಸಿದರು, ಗ್ರೀನ್ ಜೆಕೆ ಡ್ರೈವ್ ಬ್ಯಾನರ್ ಅಡಿಯಲ್ಲಿ ಈ ಡ್ರೈವ್ ನೆರವೇರಿಸಿದರು.

* ಈ ಗ್ರೀನ್ ಜೆಕೆ ಡ್ರೈವ್ ಮೂಲಕ ಒಟ್ಟು 1ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಗಿದೆ ಎಂದು ತಿಳಿಸಿದ್ದಾರೆ.

## ಭಾರತ ಬ್ರಿಟನ್ ವಿದೇಶಾಂಗ ಅಧಿಕಾರಿಗಳಿಂದ ಬಹುಪಕ್ಷೀಯ ವಿಚಾರಗಳ ಚರ್ಚೆ



* ಪ್ರಸ್ತುತ ಭಾರತ ಬ್ರಿಟನ್ ವಿದೇಶಾಂಗ ಅಧಿಕಾರಿಗಳು ವಿಶ್ವಸಂಸ್ಥೆಯ ಸುಧಾರಣಾ ಕ್ರಮಗಳು, ಭಯೋತ್ಪಾದನೆ ನಿಗ್ರಹ, ಶಾಂತಿಪಾಲನೇ ಹಾಗೂ ಹವಾಮಾನ ಬದಲಾವಣೆ ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.

* ಭಾರತ ಬ್ರಿಟನ್ ಉಭಯ ದೇಶಗಳ ಅಧಿಕಾರಿಗಳ ಮಧ್ಯೇ ನಡೆದಿರುವ 2ನೇ ಬಹುಪಕ್ಷೀಯ ಚರ್ಚೆ ಇದಾಗಿದೆ.

* ಭಾರತದ ಪರವಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಕಾಶ್ ಗುಪ್ತಾ, ಹಾಗೂ ಬ್ರಿಟನ್ ಪರವಾಗಿ ಬ್ರಿಟನ್ ವಿದೇಶಾಂಗ, ಕಾಮನ್‌ವೆಲ್ತ್ ಮತ್ತು ಅಭಿವೃದ್ಧಿ ಕಚೇರಿಯ ರಾಜಕೀಯ ಉಪ ನಿರ್ದೇಶಕ ಹ್ಯಾರಿಯೇಟ್ ಮ್ಯಾಥ್ಯೂ ಅವರು ಭಾಗಿಯಾಗಿದ್ದರು, ಈ ಅಧಿಕಾರಿಗಳು ಕಾಮನ್‌ವೆಲ್ತ್ ಯೋಜನೆಯ ಕಾರ್ಯತಂತ್ರದ ವಿಚಾರಗಳನ್ನು ವಿನಿಯಮ ಮಾಡಿಕೊಂಡರು.

* ಈ ಉಭಯ ರಾಷ್ಟ್ರಗಳು ಬಹುಪಕ್ಷೀಯ ವಿಚಾರದಲ್ಲಿ ತಮ್ಮ ತಮ್ಮ ಸಹಕಾರವನ್ನು ಇನ್ನಷ್ಟು ಬಲವರ್ಧನೆಗೊಳಿಸಲು ಪರಸ್ಪರ ಒಪ್ಪಿಕೊಂಡಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

## ಸಿಎಂ ಬೊಮ್ಮಾಯಿ ಅವರಿಂದ 2020 2021 ನೇ ಸಾಲಿನ ಸಾಧಕರಿಗೆ ವಾಲ್ಮೀಕಿ ಪ್ರಶಸ್ತಿ ಪ್ರದಾನ



* ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಬೊಮ್ಮಾಯಿ ಅವರು ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ 2020 2021 ನೇ ಸಾಲಿನ ಸಾಧಕರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಮಾಡಿದರು.

* ರಾಜ್ಯ ಸರ್ಕಾರವು 2020ನೇ ಸಾಲಿಗೆ 5 ಸಾಧಕರು ಹಾಗೂ 2021ನೇ ಸಾಲಿಗೆ 6 ಸಾಧಕರು, ಒಟ್ಟಾರೆ 11 ಸಾಧಕರಿಗೆ ಈ ಬಾರಿ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ನೀಡಲಾಗಿದೆ.

* 2020 ನೇ ಸಾಲಿನಲ್ಲಿ ವಾಲ್ಮೀಕಿ ಪ್ರಶಸ್ತಿ ಪಡೆದವರು: ಡಾ.ಕೆ.ಆರ್. ಪಾಟೀಲ್, ಡಾ.ಬಿ. ಎಲ್.ವೇಣು, ಗೌರಿ ಕೊರಗ, ಮಾರಪ್ಪ

ನಾಯಕ, ಸಿರಿಗೆರೆ ತಿಪ್ಪೇಶ್

* 2021ನೇ ಸಾಲಿನಲ್ಲಿ ವಾಲ್ಮೀಕಿ ಪ್ರಶಸ್ತಿ ಪಡೆದವರು: ಕೆ.ಸಿ.ನಾಗರಾಜು, ಲಕ್ಷ್ಮೀ ಗಣಪತಿ ಸಿದ್ದಿ, ಪ್ರೊ.ಎಸ್.ಆರ್.ನಿರಂಜನ, ಭಟ್ರಹಳ್ಳಿ ಗೂಳಪ್ಪ, ಅಶ್ವತ್ಥ ರಾಮಯ್ಯ, ಜಂಭಯ್ಯ ನಾಯಕರಿಗೆ ಪ್ರಶಸ್ತಿ ನೀಡಲಾಗಿದೆ.

* ಮಹರ್ಷಿ ವಾಲ್ಮೀಕಿ ರಾಮಾಯಣದ ಲೇಖಕ, ಇವರನ್ನು ಈ ಮಹಾಕಾವ್ಯವಾದ ಆದಿ ಕವಿ ಎಂದು ಗೌರವಿಸಲಾಗುತ್ತದೆ.

* ಮೂಲತಃ ವಾಲ್ಮೀಕಿ ರಚಿಸಿರುವ ರಾಮಾಯಣವು 24,000 ಶ್ಲೋಕಗಳನ್ನು ಒಳಗೊಂಡಿದೆ, ಹಾಗೂ ಈ ರಾಮಾಯಣವು ಸುಮಾರು 480,002 ಪದಗಳಿಂದ ಕೂಡಿದೆ, ರಾಮಾಯಣವು ರಾಜಕುಮಾರನ ಕಥೆಯನ್ನು ಹೇಳುತ್ತದೆ.

* ಬ್ರಿಟಿಷ್ ವಿಡಂಬನಕಾರ ಆಬ್ರೆ ಮೆನೆನ್ ತಿಳಿಸಿರುವ ಪ್ರಕಾರ ವಾಲ್ಮೀಕಿಯನ್ನು ಒಬ್ಬ ಸಾಹಿತ್ಯ ಪ್ರತಿಭೆ ಎಂದು ಗುರುತಿಸಲಾಗಿದೆ.

## ಪ್ರಧಾನಿ ಮೋದಿಯಿಂದ ಕುಶಿನಗರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟನೆ



* ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಕುಶಿನಗರದಲ್ಲಿ ನಿರ್ಮಾಣವಾಗಿರುವ ವಿಮಾನ ನಿಲ್ದಾಣವನ್ನು ಉದ್ಘಾಟಿಸಿದರು.

* ಕೇಂದ್ರ ಸಚಿವ ಸಂಪುಟವು 2020 ರ ಜೂನ್'ನಲ್ಲಿ ಉತ್ತರ ಪ್ರದೇಶದ ಕುಶಿನಗರ ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಘೋಷಣೆ ಮಾಡಲು ಅನುಮೋದನೆ ನೀಡಿತ್ತು.

* ಕುಶಿನಗರವು ಬೌದ್ಧ ಸಾಂಸ್ಕೃತಿಕ ತಾಣವಾಗಿದೆ, ಈ ಕುಶಿನಗರ ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಘೋಷಣೆ ಮಾಡಿರುವ ಹಿನ್ನಲೆಯಿಂದ ಅಂತರಾಷ್ಟ್ರೀಯ ಪ್ರವಾಸೋದ್ಯಮ ಹಾಗೂ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡಿದಂತಾಗಿದೆ.

* ಈ ಕುಶಿನಗರ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು 260 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ, ಈ ವಿಮಾನ ನಿಲ್ದಾಣವು ವಿಶ್ವದಾದ್ಯಂತ ಬೌದ್ಧ ಯಾತ್ರಾಸ್ಥಳಗಳನ್ನು ಸಂಪರ್ಕಿಸಲಿದೆ ಎಂದು ತಿಳಿಸಿದ್ದಾರೆ.

## ಭಾರತೀಯ ರೈಲ್ವೇ ನಿಲ್ದಾಣಗಳ ಅಭಿವೃದ್ಧಿ ನಿಗಮವನ್ನು ಸ್ಥಗಿತಗೊಳಿಸಲು ಆದೇಶಿಸಿದ ಭಾರತೀಯ ರೈಲ್ವೆ

INDIAN RAILWAY STATIONS DEVELOPMENT CORPORATION LIMITED

* ಕೇಂದ್ರ ಹಣಕಾಸು ಸಚಿವಾಲಯದ ಪ್ರಧಾನ ಆರ್ಥಿಕ ಸಲಹೆಗಾರ ಸಂಜೀವ್ ಸನ್ಯಾಲ್ ಅವರ ಶಿಫಾರಸಿನ ಮೇರೆಗೆ ಇದೀಗ ಭಾರತೀಯ ರೈಲ್ವೇ ನಿಲ್ದಾಣಗಳ ಅಭಿವೃದ್ಧಿ ನಿಗಮವನ್ನು ವಿಸರ್ಜಿಸಲು ಭಾರತೀಯ ರೈಲ್ವೆ ಆದೇಶ ಹೊರಡಿಸಿದೆ.

* ರೈಲ್ವೇ ಬೋರ್ಡ್ IRSDCಯನ್ನು ಮುಚ್ಚಲು ಅಗತ್ಯವಿರುವ ಎಲ್ಲ ಕಾರ್ಯವಿಧಾನಗಳನ್ನು ಆರಂಭಿಸಲು ಆದೇಶ ನೀಡಿದೆ, ಅಷ್ಟೇ ಅಲ್ಲದೇ IRSDC ನಿರ್ವಹಿಸುತ್ತಿರುವ ಕೇಂದ್ರಗಳು ಮತ್ತು ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಆಯಾ ರೈಲ್ವೆ ವಲಯಗಳಿಗೆ ನೀಡಲಾಗುತ್ತದೆ.

* ಇದೀಗ ರೈಲ್ವೇ ಸಚಿವಾಲಯದ ಅಡಿಯಲ್ಲಿ ಸ್ಥಗಿತಗೊಳ್ಳುವ 2ನೇ ಸಂಸ್ಥೆ ಇದಾಗಿದೆ, ಇದ್ದಕು ಮುಂಚೆ 2021 ರ ಸೆಪ್ಟೆಂಬರ್. 7ರಂದು ಭಾರತೀಯ ರೈಲ್ವೇ ಪರ್ಯಾಯ ಇಂಧನಕ್ಕಾಗಿ ಭಾರತೀಯ ರೈಲ್ವೇ ಸಂಘಟನೆ (IROAF)ಯನ್ನು ಸ್ಥಗಿತಗೊಳಿಸಲಾಗಿತ್ತು.

* IRSDC ಇದೊಂದು ವಿಶೇಷ ಉದ್ದೇಶದ ವಾಹನವಾಗಿದೆ, ಅಷ್ಟೇ ಅಲ್ಲದೇ ಇದು ರೈಲ್ ಲ್ಯಾಂಡ್ ಡೆವಲಪ್‌ಮೆಂಟ್ ಅಥಾರಿಟಿ RITES ಮತ್ತು IRCON ನ ಜಂಟಿ ಉದ್ಯಮವಾಗಿದೆ, ಈ ಎಲ್ಲ ಭಾರತೀಯ ರೈಲ್ವೆಯ 3 ಕಂಪನಿಗಳು ಭಾರತೀಯ ರೈಲ್ವೇ ಸಚಿವಾಲಯದ ಅಧೀನದಲ್ಲಿವೆ.

## ವಾಯು ಗುಣಮಟ್ಟದ ಮುಂಚಿನ ಎಚ್ಚರಿಕೆ ವ್ಯವಸ್ಥೆ ಅಭಿವೃದ್ಧಿ



* ಭಾರತೀಯ ಉಷ್ಣವಲಯ ಹವಾಮಾನ ಸಂಸ್ಥೆಯು ಹೊಸ 'ನಿರ್ಧಾರ ಬೆಂಬಲ ವ್ಯವಸ್ಥೆ' ಮತ್ತು 'ವಾಯು ಗುಣಮಟ್ಟದ ಮುಂಚಿನ ಎಚ್ಚರಿಕೆ ವ್ಯವಸ್ಥೆ' ಅಭಿವೃದ್ಧಿಪಡಿಸಿದೆ.

* ಪ್ರಸ್ತುತ ಕೇಂದ್ರ ರಾಜ್ಯ ಸಚಿವ ವಿಜ್ಞಾನ ಮತ್ತು ತಂತ್ರಜ್ಞಾನ, ಡಾ. ಜಿತೇಂದ್ರ ಸಿಂಗ್ ಅವರು ಈ ವ್ಯವಸ್ಥೆಗಳನ್ನು ಪ್ರಾರಂಭಿಸಿದ್ದಾರೆ.

* ಈ ವ್ಯವಸ್ಥೆಗಳನ್ನು ದೆಹಲಿ ಪ್ರದೇಶದಲ್ಲಿ ಉತ್ತಮ ವಾಯು ಗುಣಮಟ್ಟದ ನಿರ್ವಹಣೆಗಾಗಿ ಆರಂಭಿಸಲಾಗಿದೆ.

* ಭಾರತೀಯ ಉಷ್ಣವಲಯ ಹವಾಮಾನ ಸಂಸ್ಥೆಯು ಭೂ ವಿಜ್ಞಾನ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ, ಇದೀಗ ಈ ಸಂಸ್ಥೆಯು ಪುಣೆ ನಗರದಲ್ಲಿದೆ.

* ಪುಣೆಯಲ್ಲಿನ ಭಾರತೀಯ ಉಷ್ಣವಲಯದ ಹವಾಮಾನಶಾಸ್ತ್ರ ಸಂಸ್ಥೆಯು ಈ ವಾಯು ಗುಣಮಟ್ಟದ ಮುಂಚಿನ ಎಚ್ಚರಿಕೆ ವ್ಯವಸ್ಥೆ (AQEWS)ಯನ್ನು ಅಭಿವೃದ್ಧಿಪಡಿಸಿದೆ, ಈ ವ್ಯವಸ್ಥೆಯು ಮುಂದಿನ 72 ಗಂಟೆಗಳ ಕಾಲ ವಾಯು ಮಾಲಿನ್ಯದ ಮಟ್ಟವನ್ನು ಅಂದಾಜಿಸಲು ಡೇಟಾವನ್ನು ಗಾಳಿಯ ವೇಗದೊಂದಿಗೆ ಸಂಯೋಜಿಸುತ್ತದೆ, ಹಾಗೂ ಎಚ್ಚರಿಕೆ ಸಂದೇಶಗಳು ಮತ್ತು ಬುಲೆಟಿನ್‌ಗಳನ್ನು ಒದಗಿಸುತ್ತದೆ.

## ಅಪರಾಧ ಅಲೆಗಳ ಮೇಲೆ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ ದೇಶ ಈಕ್ವೆಡಾರ್



* ಪ್ರಸ್ತುತ ದಕ್ಷಿಣ ಅಮೆರಿಕಾದ ದೇಶ ಈಕ್ವೆಡಾರ್ ಇದೀಗ ಅಪರಾಧ ತರಂಗದಿಂದಾಗಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದೆ.
* ಈಕ್ವೆಡಾರ್ ದೇಶದಲ್ಲಿ ಹಿಂಸಾತ್ಮಕ ಮಾದಕದ್ರವ್ಯದ ಅಪರಾಧಗಳ ಹೆಚ್ಚಳವಾಗಿರುವ ಹಿನ್ನಲೆಯಿಂದಾಗಿ ಈಕ್ವೆಡಾರ್‌ನ ಅಧ್ಯಕ್ಷ ಗಿಲ್ಲೆರ್ಮೊ ಲಾಸೊ ಅವರು 60 ದಿನಗಳ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ್ದಾರೆ.
* ಈಕ್ವೆಡಾರ್ ವಾಯುವ್ಯ ದಕ್ಷಿಣ ಅಮೆರಿಕಾದ ಒಂದು ದೇಶವಾಗಿದೆ, ಕ್ವಿಟೊ ನಗರವು ಈಕ್ವೆಡಾರ್‌ನ ರಾಜಧಾನಿಯಾಗಿದೆ, ಇದು ಕೊಲಂಬಿಯಾ, ಪೆರು ಮತ್ತು ಪೆಸಿಫಿಕ್ ಸಾಗರದ ಗಡಿಯನ್ನು ಹಂಚಿಕೊಂಡಿದೆ.
* ಈಕ್ವೆಡಾರ್ 1830 ರಲ್ಲಿ ತನ್ನದೇ ಆದ ಸಾರ್ವಭೌಮ ರಾಜ್ಯವಾಗಿ ಹೊರಹೊಮ್ಮಿದೆ, ಸ್ಪ್ಯಾನಿಷ್ ಈಕ್ವೆಡಾರ್‌ನ ಅಧಿಕೃತ ಭಾಷೆಯಾಗಿದೆ, ಈ ದೇಶದಲ್ಲಿ ಸುಮಾರು 13 ಸ್ಥಳೀಯ ಭಾಷೆಗಳನ್ನು ಗುರುತಿಸಿದೆ.

## ಪೇಟಿಯಂಗೆ ಒಂದು ಕೋಟಿ ರೂಪಾಯಿ ದಂಡ ವಿಧಿಸಿದ ಆರ್‌ಬಿಐ




* ಇತ್ತೀಚಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಪಾವತಿ ಮತ್ತು ವಸಾಹತು ವ್ಯವಸ್ಥೆಗಳ ಕಾಯ್ದೆ 2007 ರ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಒಂದು ಕೋಟಿ ರೂಪಾಯಿ ದಂಡವನ್ನು ವಿಧಿಸಿತ್ತು.
* ಪ್ರಸ್ತುತ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪೇಟಿಎಂ ಒಡೆತನದ ಪೇಟಿಎಂ ಪಾವತಿ ಬ್ಯಾಂಕಿಗೆ 1 ಕೋಟಿ ರೂ ಮೊತ್ತದ ದಂಡ ವಿಧಿಸಿದೆ, ಜೊತೆಗೆ ವೆಸ್ಟರ್ನ್ ಯೂನಿಯನ್ ಫೈನಾನ್ಶಿಯಲ್ ಸರ್ವಿಸಸ್ ಗೆ ಕೂಡ 27.8 ಲಕ್ಷ ರೂಪಾಯಿ ಮೊತ್ತದ ದಂಡವನ್ನು ವಿಧಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

## ಟ್ರುಥ್ ಸೋಶಿಯಲ್ ಎಂಬ ಹೊಸ ಜಾಲತಾಣ ಘೋಷಿಸಿದ ಟ್ರಂಪ್



* ಅಮೇರಿಕಾದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ವಂತ ಸಾಮಾಜಿಕ ಜಾಲತಾಣ ಆರಂಭಿಸುವುದಾಗಿ ಘೋಷಿಸಿದ್ದಾರೆ.
* ಸಾಮಾಜಿಕ ಜಾಲತಾಣಕ್ಕೆ 'ಟ್ರೂಥ್ ಸೋಷಿಯಲ್'' ಎಂದು ಹೆಸರಿಡಲಾಗಿದೆ.
* ಈಗಾಗಲೇ ಫೇಸ್ಬುಕ್ ಹಾಗೂ ಟ್ವಿಟರ್‌ನಿಂದ ನಿಷೇಧಕ್ಕೊಳಗಾಗಿದ್ದ ಡೊನಾಲ್ಡ್ ಟ್ರಂಪ್ ಅವರು ಇದೀಗ 'ಟ್ರಂಪ್ ಮೀಡಿಯಾ ಆಂಡ್ ಟೆಕ್ನಾಲಜಿ' ಸಂಸ್ಥೆಯ ಮೊದಲ ಪ್ರಾಜೆಕ್ಟ್ ಭಾಗವಾಗಿ 'ಟ್ರೂಥ್ ಸೋಷಿಯಲ್' ಎಂಬ ಹೊಸ ಜಾಲತಾಣವನ್ನು ನವೆಂಬರ್ ನಲ್ಲಿ ಲಾಂಚ್ ಮಾಡುವದಾಗಿ ತಿಳಿಸಿದ್ದಾರೆ.

## ಭಾರತದಲ್ಲಿ ಇದುವರೆಗೆ ಒಟ್ಟು 100 ಕೋಟಿ ಕೋವಿಡ್ ಲಸಿಕೆ ವಿತರಣೆ



* ವಿಶ್ವದಲ್ಲೇ ಅತಿ ಹೆಚ್ಚು ಕೋವಿಡ್ ಲಸಿಕೆ ನೀಡಿದ ದೇಶವೆಂದು ಹೆಗ್ಗಳಿಕೆಗೆ ಪಾತ್ರವಾದ ಭಾರತ ಇಂದು 130 ಕೋಟಿ ಜನಸಂಖ್ಯೆಯಲ್ಲಿ 100 ಕೋಟಿ ಜನಕ್ಕೆ ಲಸಿಕೆಯನ್ನು ನೀಡಿದೆ.
* ಲಸಿಕೆಯನ್ನು ನೀಡಲಿಕ್ಕೆ ಸಹಕರಿಸಿದ ಪ್ರತಿಯೊಬ್ಬ ಕಾರ್ಯಕರ್ತರಿಗೆ ಪ್ರಧಾನಿ ಮೋದಿ ಅವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.
* ಕೇಂದ್ರ ಸರಕಾರ ನೀಡಿದ ಮಾಹಿತಿಯ ಪ್ರಕಾರ ಮೊದಲ 10 ದಿನಗಳಲ್ಲಿ 86 ಕೋಟಿ ಜನರಿಗೆ ಲಸಿಕೆಯನ್ನು ಹಾಕಿಸಿದರೆ ಉಳಿದ 14 ಕೋಟಿ ಜನರಿಗೆ ಲಸಿಕೆಯನ್ನು ಹಾಕಿಸಿಕೊಳ್ಳಲು 45 ದಿನಗಳನ್ನು ತೆಗೆದುಕೊಳ್ಳಲಾಯಿತು.

# 22-10-2021

## ಪೊಲೀಸ್ ಸ್ಮರಣಾರ್ಥ ದಿನ




* ಭಾರತದಲ್ಲಿ ಪ್ರತಿ ವರ್ಷ ಅಕ್ಟೋಬರ್. 21 ರಂದು ರಾಷ್ಟ್ರೀಯ ಪೊಲೀಸ್ ಸ್ಮರಣಾರ್ಥ ದಿನವನ್ನು ಆಚರಣೆ ಮಾಡಲಾಗುತ್ತದೆ, ಪ್ರಸ್ತುತ ಈ ದಿನವನ್ನು 1959 ರಲ್ಲಿನ ಚೀನಾದ ಗುಂಡಿನ ದಾಳಿಯಲ್ಲಿ ಮೃತಪಟ್ಟ 10 ಪೊಲೀಸರ ತ್ಯಾಗಕ್ಕೆ ಅರ್ಪಿಸಲಾಗಿದೆ.
* ಚೀನಾ ದೇಶದ ಪಡೆಗಳು 1959 ರ ಅಕ್ಟೋಬರ್. 21 ರಂದು ಲಡಾಖ್‌ನಲ್ಲಿ ಗ್ರೆನೇಡ್‌ಗಳನ್ನು ಎಸೆದು 20 ಭಾರತೀಯ ಸೈನಿಕರ ಮೇಲೆ ಗುಂಡು ಹಾರಿಸಿ ದಾಳಿ ನಡೆಸಿದರು, ಅವರಲ್ಲಿ 10 ಜನ ಪೊಲೀಸ್ ಸಿಬ್ಬಂದಿ ಹುತಾತ್ಮರಾದರು, ತದನಂತರ ಚೀನಾ ದೇಶವು ಒಂದು ತಿಂಗಳಿನ ನಂತರ ಅಂದರೆ 1959 ರ ನವೆಂಬರ್. 28 ರಂದು ಹುತಾತ್ಮರಾಗಿರುವ ಪೊಲೀಸರ ಮೃತ ದೇಹಗಳನ್ನು ಭಾರತಕ್ಕೆ

ಹಸ್ತಾಂತರಿಸಿದರು, ಈ ಹಿನ್ನಲೆಯಿಂದಾಗಿ ಅಕ್ಟೋಬರ್. 21'ನ್ನು ಪೊಲೀಸ್ ಸ್ಮರಣಾರ್ಥ ದಿನ ಎಂದು ಆಚರಣೆ ಮಾಡಲಾಗುತ್ತಿದೆ.

* ಚಾಣಕ್ಯಪುರಿಯ ಪೋಲಿಸ್ ಸ್ಮಾರಕದಲ್ಲಿ ರಾಷ್ಟ್ರೀಯ ಮಟ್ಟದ ಪೋಲಿಸ್ ಸ್ಮರಣೋತ್ಸವ ದಿನದ ಮೆರವಣಿಗೆ ನಡೆಯುತ್ತದೆ, ಇದನ್ನು 2012 ರಿಂದ ಆರಂಭಿಸಲಾಗಿದೆ.

* ಪ್ರಧಾನಿ ಮೋದಿ ಅವರು 2018 ರ ಅಕ್ಟೋಬರ್. 15 ರಂದು ದೆಹಲಿಯಲ್ಲಿ ರಾಷ್ಟ್ರೀಯ ಪೊಲೀಸ್ ಮ್ಯೂಸಿಯಂ'ನ್ನು ಉದ್ಘಾಟಿಸಿದರು, ಈ ಮ್ಯೂಸಿಯಂ ಭಾರತದ ಕೇಂದ್ರ ಮತ್ತು ರಾಜ್ಯ ಪೊಲೀಸ್ ಪಡೆಗಳ ಇತಿಹಾಸವನ್ನು ತಿಳಿಸುತ್ತದೆ.

## ಭಾರತದಿಂದ ನ್ಯಾನೊ ನೈಟ್ರೋಜನ್ ದ್ರವ ಗೊಬ್ಬರ ಸ್ವೀಕರಿಸಿದ ಶ್ರೀಲಂಕಾ




* ಶ್ರೀಲಂಕಾ ದೇಶವು ಭಾರತದಿಂದ ಹಾನಿಕಾರಕವಲ್ಲದ ನ್ಯಾನೋ ನೈಟ್ರೋಜನ್ ದ್ರವ ರಸಗೊಬ್ಬರವನ್ನು ಸ್ವೀಕರಿಸಿದೆ.

* ಇದೀಗ ಭಾರತವು 3.1 ಮಿಲಿಯನ್ ಲೀಟರ್ ಉತ್ತಮವಾದ ಹಾನಿಕಾರಕವಲ್ಲದ ನ್ಯಾನೋ ನೈಟ್ರೋಜನ್ ದ್ರವ ಗೊಬ್ಬರವನ್ನು ರವಾನಿಸಿದೆ, ಹಾಗೂ ಇದು ಶ್ರೀಲಂಕಾ ದೇಶದಲ್ಲಿನ ಜೋಳ ಮತ್ತು ಭತ್ತದ ಕೃಷಿಯಲ್ಲಿಯ ರಸಗೊಬ್ಬರಕ್ಕೆ ಸಹಾಯ ಮಾಡಲಿದೆ ಎಂದು ತಿಳಿಸಿದ್ದಾರೆ.

* ಇತ್ತೀಚಿಗೆ ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರು ರಾಸಾಯನಿಕ ಗೊಬ್ಬರ ಆಮದು ಸ್ಥಗಿತಗೊಳಿಸಿದ್ದರು, ಇದೀಗ ಶ್ರೀಲಂಕಾ ದೇಶವು ನ್ಯಾನೋ ನೈಟ್ರೋಜನ್ ದ್ರವ ಗೊಬ್ಬರವನ್ನು ಆಮದು ಮಾಡಿಕೊಳ್ಳಲು ಆರಂಭಿಸಿದೆ.

* ನ್ಯಾನೊ ನೈಟ್ರೋಜನ್ ದ್ರವ ಗೊಬ್ಬರವನ್ನು ಭಾರತೀಯ ಫಾರ್ಮರ್ಸ್ ಫರ್ಟಿಲೈಜರ್ ಕೋಆಪರೇಟಿವ್ ಲಿಮಿಟೆಡ್ (IFFCO) ಅಭಿವೃದ್ಧಿಪಡಿಸಿದೆ, ಇದರಿಂದ ಅತಿಯಾದ ಯೂರಿಯಾ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ.

* ಪ್ರಪಂಚದಲ್ಲಿಯೇ ಮೊದಲ ಬಾರಿಗೆ ಈ ನ್ಯಾನೊ ನೈಟ್ರೋಜನ್ ದ್ರವ ಗೊಬ್ಬರವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ. ಹಾಗೂ ಇದನ್ನು ಗುಜರಾತ್ ರಾಜ್ಯದಲ್ಲಿನ ಕಲೋಲ್‌ನಲ್ಲಿರುವ IFFCO ಯ ನ್ಯಾನೋ ಬಯೋಟೆಕ್ನಾಲಜಿ ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸಲಾಗಿದೆ.

* ನ್ಯಾನೋ ಯೂರಿಯಾ ಸಸ್ಯದ ನಿರ್ಣಾಯಕ ಬೆಳೆ ಬೆಳವಣಿಗೆಯ ಹಂತಗಳಲ್ಲಿ ಸಾರಜನಕದ ಅಗತ್ಯವನ್ನು ಪೂರೈಸಲಿದೆ, ಹಾಗೂ ಯೂರಿಯಾಕ್ಕಿಂತಲೂ ಹೆಚ್ಚಿನ ಗುಣಮಟ್ಟವನ್ನು ಹೊಂದಿದೆ.

## ಭಾರತ ಯುಕೆ ಕೊಂಕಣ ಶಕ್ತಿ ವ್ಯಾಯಾಮ



* ಯುಕೆ ಭಾರತ ರಾಷ್ಟ್ರಗಳ ಅತಿದೊಡ್ಡ ಜಂಟಿ ಮಿಲಿಟರಿ ವ್ಯಾಯಾಮವನ್ನು 'ಕೊಂಕಣ ಶಕ್ತಿ' ಎಂದು ಕರೆಯಲು ಆರಂಭಿಸಿವೆ.

* ಉಭಯ ದೇಶಗಳ ಜಂಟಿ ಮಿಲಿಟರಿ ವ್ಯಾಯಾಮದಲ್ಲಿ ಯುಕೆ'ನ ಕ್ಯಾರಿಯರ್ ಸ್ಟ್ರೈಕ್ ಗ್ರೂಪ್'ನ್ನು ಪಶ್ಚಿಮ ಹಿಂದೂ ಮಹಾಸಾಗರದ ನೀರಿನಲ್ಲಿ ಮರು ಪ್ರವೇಶ ನೀಡಲಾಗುವದು, ಹಾಗೂ ಇಂಡೋ ಪೆಸಿಫಿಕ್ ನೀರಿನಲ್ಲಿ ಸಿಎಸ್‌ಜಿ, ಎಚ್‌ಎಂಎಸ್ ಕ್ವೀನ್ ಎಲಿಜಬೆತ್'ನ್ನು ಎಲ್ಲಾ ಬೇಸಿಗೆಯಲ್ಲಿ ನಿಯೋಜನೆ ಮಾಡಲಾಗುತ್ತದೆ ಎಂದು ತಿಳಿಸಲಾಗಿದೆ.

* ಪ್ರಸ್ತುತ ಸಿಂಗಾಪುರ ಮತ್ತು ಬಾಂಗ್ಲಾದೇಶದಲ್ಲಿ ತಮ್ಮ ಸಹವರ್ತಿಗಳೊಂದಿಗೆ ಯುಕೆ ಮಿಲಿಟರಿ ಪಡೆಯು ತೊಡಗಿಸಿಕೊಂಡಿದೆ.

* ಸಿಎಸ್‌ಜಿ ಭಾರತೀಯ ಜಲಪ್ರದೇಶಕ್ಕೆ ಅಕ್ಟೋಬರ್. 21 ರಂದು ಪ್ರವೇಶ ಪಡೆದಿದೆ, ಇದರಲ್ಲಿ ಒಂದು ಹಡಗು ಮುಂಬೈ ಬಂದರಿಗೆ ಸೇರಲಿದೆ, ಪ್ರಸ್ತುತ ಯುಕೆ ರಾಷ್ಟ್ರವು ಸಂಯೋಜಿತ ವಿದ್ಯುತ್ ಚಾಲಿತ ತಂತ್ರಜ್ಞಾನವನ್ನು ಹೊಂದಿದೆ, ಇದುನ್ನು ಭಾರತೀಯ ನೌಕಾಪಡೆಯಲ್ಲಿ ಭವಿಷ್ಯದ ಹಡಗುಗಳಿಗೆ ಮಾರಾಟ ಮಾಡಲು ಆದೇಶಿಸಿದೆ ಎಂದು ತಿಳಿಸಿದ್ದಾರೆ.

* ಕೊಂಕಣ ಶಕ್ತಿ ವ್ಯಾಯಾಮವು ಭಾರತ ಮತ್ತು ಯುನೈಟೆಡ್ ಕಿಂಗ್ ಡಮ್(ಯುಕೆ) ದೇಶಗಳ ನಡುವಿನ ಮೊದಲ ತ್ರಿ ಸೇವಾ ವ್ಯಾಯಾಮವಾಗಿದೆ.

## ಟೆಸ್ಟ್ ಕ್ರಿಕೆಟ್‌ಗೆ ವಿದಾಯ ತಿಳಿಸಿದ ಆಸಿಸ್ ಬೌಲರ್ ಜೇಮ್ಸ್ ಪ್ಯಾಟಿನ್ಸನ್



* ಟೆಸ್ಟ್ ಕ್ರಿಕೆಟ್‌ನಿಂದ ಆಸ್ಟ್ರೇಲಿಯಾದ ವೇಗದ ಬೌಲರ್ ಜೇಮ್ಸ್ ಪ್ಯಾಟಿನ್ಸನ್ ಅವರು ನಿವೃತ್ತಿ ಘೋಷಣೆ ಮಾಡಿದ್ದಾರೆ.

* ಆಸ್ಟ್ರೇಲಿಯಾದ ಬೌಲರ್ ಜೇಮ್ಸ್ ಪ್ಯಾಟಿನ್ಸನ್ ಅವರು ತಮ್ಮ ದೇಶದ ಪರವಾಗಿ 21 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ, ಅದರಲ್ಲಿ ಇವರು 81 ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ.

* 2011ರ ಡಿಸೆಂಬರ್‌ನಲ್ಲಿ ಬೌಲರ್ ಜೇಮ್ಸ್ ಪ್ಯಾಟಿನ್ಸನ್ ಅವರು ಅಂತರ್‌ರಾಷ್ಟ್ರೀಯ ಕ್ರಿಕೆಟ್‌ಗೆ ಆಯ್ಕೆಯಾಗಿ ಆಟವನ್ನು ಆರಂಭಿಸಿದ್ದರು.

## 100 ಕೋಟಿ ಡೋಸ್ ಲಸಿಕೆ ನೀಡಿದ ಜಗತ್ತಿನ 2ನೇ ದೇಶ ಭಾರತ



* ಪ್ರಸ್ತುತ ಕೋವಿಡ್ 19 ಲಸಿಕಾ ಅಭಿಯಾನವು ಆರಂಭವಾದ 9 ತಿಂಗಳಿನಲ್ಲಿ ಭಾರತ ದೇಶವು ಸಾರ್ವಜನಿಕರಿಗೆ 100 ಕೋಟಿ ಡೋಸ್ ಗಳನ್ನು ನೀಡಿ ದಾಖಲೆಯನ್ನು ಬರೆದಿದೆ.
* ಇದಕ್ಕೂ ಮೊದಲು ಚೀನಾ ದೇಶವು 100 ಕೋಟಿ ಡೋಸ್ ಕೋವಿಡ್ 19 ಲಸಿಕೆಯನ್ನು ನೀಡಿತ್ತು, ಇದೀಗ ಭಾರತವು ಕೂಡ ಈ ದಾಖಲೆಯನ್ನು ಸರಗಟ್ಟಿದೆ.
* ಪ್ರಸ್ತುತ 100 ಕೋಟಿ 30 ಲಕ್ಷ ಡೋಸ್‌ಗಳನ್ನು ನೀಡಿದೆ ಎಂದು ಕೋವಿನ್ ಪೋರ್ಟಲ್ ತಿಳಿದು ಬಂದಿದೆ, ಇದೇ ಸಂಧರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ರಾಮಮನೋಹರ ಲೋಹಿಯ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯಕೀಯ ಸಿಬ್ಬಂದಿಗಳೊಂದಿಗೆ ಮಾತುಕತೆಯನ್ನು ನಡೆಸಿದರು, ಹಾಗೂ ಎಲ್ಲ ಕೋರನಾ ವಾರಿಯರ್ಸ್'ಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.
* ಭಾರತದಲ್ಲಿ ಅತೀ ಹೆಚ್ಚು ಕೋವಿಡ್ 19 ಲಸಿಕೆಗಳನ್ನು ನೀಡಿರುವ ರಾಜ್ಯ ಉತ್ತರಪ್ರದೇಶ.

## ತಾಂತ್ರಿಕ ದೋಷದಿಂದ ವಾಯುಪಡೆ ವಿಮಾನ ಪತನ




* ಮಧ್ಯಪ್ರದೇಶ ರಾಜ್ಯದ ಭಿಂಡ್ ಜಿಲ್ಲೆಯಲ್ಲಿ ಭಾರತೀಯ ವಾಯುಪಡೆಯ (IAF) ವಿಮಾನವು ತಾಂತ್ರಿಕ ದೋಷದಿಂದ ಪತನಗೊಂಡಿದೆ ಎಂದು IAF ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ಭಾರತೀಯ ವಾಯುಪಡೆಯ (IAF) ಮಿರಾಜ್ 2000 ವಿಮಾನವು ಕೇಂದ್ರ ವಲಯದಲ್ಲಿ ತರಬೇತಿ ನೀಡುವ ಸಮಯದಲ್ಲಿ ತಾಂತ್ರಿಕ ದೋಷದಿಂದಾಗಿ ಪತನಗೊಂಡಿದೆ, ಆದರೆ ಆ ವಿಮಾನದ ಚಾಲಕ ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ಬಹಿರಂಗಪಡಿಸಿದ್ದಾರೆ.

## ಕೇಂದ್ರ ಸಚಿವ ಸಂಪುಟದಿಂದ 'ಗತಿ ಶಕ್ತಿ ಮಾಸ್ಟರ್ ಪ್ಲಾನ್'ಗೆ ಅನುಮೋದನೆ




* ಪ್ರಸ್ತುತ ಪ್ರಧಾನಮಂತ್ರಿ ಗತಿ ಶಕ್ತಿರಾಷ್ಟ್ರೀಯ ಮಾಸ್ಟರ್ ಪ್ಲಾನ್(PM GatiShakti National Master Plan)ನ್ನು ಕೇಂದ್ರ ಸಚಿವ ಅನುಮೋದಿಸಿದೆ, ಇದು ಆರ್ಥಿಕ ವಲಯಗಳಿಗೆ ಬಹು ಮಾದರಿ ಸಂಪರ್ಕ ಕಲ್ಪಿಸುವ ಉದ್ದೇಶವನ್ನು ಹೊಂದಿದೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಬಹು ಮಾದರಿ ಸಂಪರ್ಕಕ್ಕಾಗಿ 100 ಲಕ್ಷ ಕೋಟಿ ರೂ.ಗಳ ರಾಷ್ಟ್ರೀಯ ಮಾಸ್ಟರ್ ಯೋಜನೆಯನ್ನು ಆರಂಭಿಸಿದ್ದಾರೆ
* ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್'ಗೆ ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ತಿಳಿಸಿದ್ದಾರೆ, ಹಾಗೂ ಇದು ಬಹು ಮಾದರಿ ಸಂಪರ್ಕ ಒದಗಿಸಲು ಸಾಂಸ್ಥಿಕ ಚೌಕಟ್ಟು, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಬೆಂಬಲ ವ್ಯವಸ್ಥೆಯನ್ನು ಒದಗಿಸಲಿದೆ.
* ಪ್ರಸ್ತುತ 3 ಹಂತಗಳ ವ್ಯವಸ್ಥೆಯಲ್ಲಿ ಈ ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ.

## ರಕ್ಷಣಾ ಉತ್ಪನ್ನಗಳನ್ನು ರಫ್ತು ಮಾಡುವ ಅಗ್ರ 25 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ ಸ್ಥಾನ



* ಪ್ರಸ್ತುತ ವಿಶ್ವದಾದ್ಯಂತ ರಕ್ಷಣಾ ಉತ್ಪನ್ನಗಳನ್ನು ರಫ್ತು ಮಾಡುವ ಅಗ್ರ 25 ದೇಶಗಳ ಪಟ್ಟಿಯಲ್ಲಿ ಭಾರತವು ಸ್ಥಾನ ಪಡೆದುಕೊಂಡಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.
* ಈ ಮಾಹಿತಿಯನ್ನು ಸ್ಟಾಕ್ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ ವರದಿ ಮಾಡಿದೆ.
* 2024 25 ರೊಳಗೆ ಭಾರತವು ರಕ್ಷಣಾ ವಸ್ತುಗಳ ರಫ್ತನ್ನು ಹೆಚ್ಚಿಸುವ ನಿಟ್ಟಿನಲ್ಲಿ ಭಾರತವನ್ನು ಜಾಗತಿಕ ರಕ್ಷಣಾ ಪೂರೈಕೆ ಸರಪಳಿಯ ಅಂಗವಾಗಿಸಲು ಭಾರತವು 35,000 ಕೋಟಿ ರೂ. ಏರೋಸ್ಪೇಸ್ ಮತ್ತು ಉತ್ತಮ ರಕ್ಷಣಾ ಸೇವೆಗಳನ್ನು ಒದಗಿಸುವ ಗುರಿ ಹೊಂದಿದ್ದೇವೆ' ಎಂದು ರಕ್ಷಣಾ ಸಚಿವರು ತಿಳಿಸಿದ್ದಾರೆ.
* ಪ್ರಸ್ತುತ ರಕ್ಷಣಾ ಸಚಿವಾಲಯದ ಆಡಳಿತ ನಿಯಂತ್ರಣದಲ್ಲಿರುವ 9 ಕೇಂದ್ರ ಸಾರ್ವಜನಿಕ ವಲಯದ ಸಂಸ್ಥೆಗಳು: ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL), ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL), ಭಾರತ್ ಡೈನಾಮಿಕ್ಸ್ ಲಿಮಿಟೆಡ್, ಬಿಇಎಂಎಲ್ ಲಿಮಿಟೆಡ್, ಮಿಶ್ರ ಧಾತು ನಿಗಮ್ ಲಿಮಿಟೆಡ್, ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್, ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಮತ್ತು ಇಂಜಿನಿಯರ್ಸ್ ಲಿಮಿಟೆಡ್, ಗೋವಾ ಶಿಪ್ ಯಾರ್ಡ್ ಲಿಮಿಟೆಡ್ ಮತ್ತು ಹಿಂದುಸ್ತಾನ್ ಶಿಪ್ ಯಾರ್ಡ್ ಲಿಮಿಟೆಡ್.
* 2020 ರ ಆಗಸ್ಟ'ನಲ್ಲಿ ಕೇಂದ್ರ ಸರ್ಕಾರದ 'ಆತ್ಮ ನಿರ್ಭರ ಭಾರತ್ ಅಭಿಯಾನ' ಅನುಸಾರವಾಗಿ ರಕ್ಷಣಾ ವಲಯದಲ್ಲಿ ದೇಶೀಕರಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ 101 ಐಟಂಗಳನ್ನು ಹೊಂದಿರುವ ಮೊದಲ ಧನಾತ್ಮಕ ಸ್ವದೇಶೀಕರಣ ಪಟ್ಟಿಯನ್ನು ಸೂಚಿಸಲಾಗಿದೆ.
* ರಾಷ್ಟ್ರ ರಾಜಧಾನಿಯಲ್ಲಿ 2021 ರ ಅಕ್ಟೋಬರ್. 15 ರಂದು ಅಂದರೆ 'ವಿಜಯದಶಮಿ' ದಂದು ಕೇಂದ್ರ ರಕ್ಷಣಾ ಸಚಿವಾಲಯ

ಆಯೋಜಿಸಿರುವ ಕಾರ್ಯಕ್ರಮದಲ್ಲಿ ಆರ್ಡನೆನ್ಸ್ ಫ್ಯಾಕ್ಟರಿ ಬೋರ್ಡ್ (OFB)ನ 7 ಹೊಸ ರಕ್ಷಣಾ ಕಂಪನಿಗಳನ್ನು ದೇಶಕ್ಕೆ ಸಮರ್ಪಿಸಲಾಗಿದೆ.

### ದಕ್ಷಿಣ ಕೊರಿಯಾದಿಂದ ಸ್ವದೇಶಿ ರಾಕೆಟ್ ಪರೀಕ್ಷಾರ್ಥ ಉಡಾವಣೆ



* ಪ್ರಸ್ತುತ ದಕ್ಷಿಣ ಕೊರಿಯಾ ರಾಷ್ಟ್ರವು ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಮೊಟ್ಟಮೊದಲ ಬಾಹ್ಯಾಕಾಶ ರಾಕೆಟ್'ನ್ನು ಪರೀಕ್ಷಾರ್ಥ ಪ್ರಯೋಗವನ್ನು ಯಸ್ಸವಿಗೊಳಿಸಿದೆ.
* ಉಡಾವಣೆಯಾಗಿರುವ ರಾಕೆಟ್'ನ್ನು ಭೂಮಿಯಿಂದ 600 ರಿಂದ 800 ಕಿ.ಮೀ ದೂರದ ಕಕ್ಷೆಗೆ ತಲುಪಿಸಲಾಗಿದೆ ಎಂದು ಅಂದಾಜಿಸಲಾಗಿದೆ.
* ಸ್ವದೇಶಿ ತಂತ್ರಜ್ಞಾನಗಳನ್ನೂ ಬಳಸಿಕೊಂಡು ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಕಳುಹಿಸಿದ 10ನೇ ರಾಷ್ಟ್ರ ದಕ್ಷಿಣ ಕೊರಿಯಾ ಆಗಿದೆ, ಅಷ್ಟೇ ಅಲ್ಲದೇ 2030ರ ವೇಳೆಗೆ ಚಂದ್ರ ಗ್ರಹಕ್ಕೆ ಬಾಹ್ಯಾಕಾಶ ನೌಕೆ ರವಾನಿಸುವ ಉದ್ದೇಶವನ್ನು ಹೊಂದಿದೆ ಎನ್ನಲಾಗಿದೆ.
* ದಕ್ಷಿಣ ಕೊರಿಯಾ ರಾಷ್ಟ್ರವು 2022ರಲ್ಲಿ ಮತ್ತೊಮ್ಮೆ ಈ ರಾಕೆಟ್ ಉಡಾವಣೆ ಮಾಡಲಿದ್ದಾರೆ ಹಾಗೂ ಇನ್ನು ಅನೇಕ ಬಾರಿ ಪರೀಕ್ಷೆಗೆ ಒಳಪಡಿಸಲು ವಿಜ್ಞಾನಿಗಳು ಹಾಗೂ ಎಂಜಿನಿಯರ್‌ಗಳು ಚಿಂತನೆ ನಡೆಸಿದ್ದಾರೆ.

### ಜಪಾನ್'ನ ಕ್ಯುಶು ದ್ವೀಪದಲ್ಲಿ ಅಸೋ ಜ್ವಾಲಾಮುಖಿ ಸ್ಫೋಟ



* ಪ್ರಸ್ತುತ ಜಪಾನ್‌ನ ಮೌಂಟ್ ಅಸೋ ಜ್ವಾಲಾಮುಖಿ ಸ್ಫೋಟಗೊಂಡು ಸಾವಿರಾರು ಮೀ.ಗಳಷ್ಟು ಬೂದಿಯ ಆಕಾಶಕ್ಕೆ ಚಿಮ್ಮಿದೆ, ಆದರೆ ಇಲ್ಲಿ ಯಾವುದೇ ಪ್ರಾಣ ಹಾನಿಯಾಗಿಲ್ಲ ಎಂದು ತಿಳಿಸಿದ್ದಾರೆ.
* ಈ ಜ್ವಾಲಾಮುಖಿಯು 3,500 ಮೀಟರ್ ಎತ್ತರದವರೆಗೆ ಬೂದಿಯನ್ನು ಚಿಮ್ಮಿದೆ.
* ಈ ಹಿಂದೆ 2016 ರಲ್ಲಿ ಮೌಂಟ್ ಅಸೊ ಸ್ಫೋಟಗೊಂಡಿತು.
* ಮೌಂಟ್ ಅಸೋ ಇದೊಂದು ಜಪಾನ್'ನ ಅತಿದೊಡ್ಡ ಸಕ್ರಿಯ ಜ್ವಾಲಾಮುಖಿಯಾಗಿದೆ, ಅಷ್ಟೇ ಅಲ್ಲದೇ ಇದೊಂದು ಪ್ರಪಂಚದಾದ್ಯಂತದ ದೊಡ್ಡ ಜ್ವಾಲಾಮುಖಿಯಾಗಿದೆ, ಹಾಗೂ ಇದು ಕ್ಯುಶು ದ್ವೀಪದಲ್ಲಿದೆ, ಈ ಮೌಂಟ್ ಅಸೋ ಸಮುದ್ರ ಮಟ್ಟದಿಂದ 1,592 ಮೀಟರ್ ಎತ್ತರದಲ್ಲಿದೆ ಎಂದು ತಿಳಿಸಿದ್ದಾರೆ.
* ವಿಶ್ವದ ಸಕ್ರಿಯ ಜ್ವಾಲಾಮುಖಿ ದೇಶಗಳಲ್ಲಿ ಜಪಾನ್ ಕೂಡ ಒಂದು, ಹಾಗೂ ಇದು ಪೆಸಿಫಿಕ್ 'ರಿಂಗ್ ಆಫ್ ಫೈರ್'ನಲ್ಲಿದೆ, ಪ್ರಸ್ತುತ ಜಪಾನಿನಲ್ಲಿ ದೊಡ್ಡ ಪ್ರಮಾಣದ ಭೂಕಂಪಗಳು ಮತ್ತು ಜ್ವಾಲಾಮುಖಿ ಸ್ಫೋಟಗೊಂಡಿರುವ ದಾಖಲೇಗಳಿವೆ.
* ಈ ಹಿಂದೆ 2014 ರ ಸೆಪ್ಟೆಂಬರ್'ನಲ್ಲಿ ಮೌಂಟ್ ಒಂಟೇಕ್ ಅನಿರೀಕ್ಷಿತವಾಗಿ ಸ್ಫೋಟಗೊಂಡಿತು, ಇದರಲ್ಲಿ 63 ಜನರು ಪ್ರಾಣವನ್ನು ಕಳೆದುಕೊಂಡಿದ್ದಾರೆ.
* ಜಪಾನ ದೇಶದ 5 ಮುಖ್ಯ ದ್ವೀಪಗಳಲ್ಲಿ ಕ್ಯುಶು ದ್ವೀಪವು 3ನೇ ಅತಿದೊಡ್ಡ ದ್ವೀಪವಾಗಿದೆ.

## 23-10-2021

### ಬಾರ್ಬಡೋಸ್ ಅಧ್ಯಕ್ಷೆಯಾಗಿ ಸಾಂಡ್ರಾ ಮೇಸನ್ ಆಯ್ಕೆ



* ಬಾರ್ಬಡೋಸ್ ಕೆರಿಬಿಯನ್ ದ್ವೀಪವು ವಸಾಹತುಶಾಹಿ ಹಿಡಿತವನ್ನು ತಗೆದುಹಾಕುವ ನಿರ್ಣಾಯಕ ಮೊದಲ ಅಧ್ಯಕ್ಷರನ್ನು ಆಯ್ಕೆ ಮಾಡಿದೆ.
* ಬ್ರಿಟನ್ ರಾಣಿ ಎಲಿಜಬೆತ್ ಅವರ ಹಿಡಿತದಿಂದ ಹೊರತರಲು ಸಾಂಡ್ರಾ ಮೇಸನ್ ಅವರನ್ನು ದೇಶದ ಅಧ್ಯಕ್ಷರನ್ನಾಗಿ ಹೌಸ್ ಆಫ್ ಅಸೆಂಬ್ಲಿ ಮತ್ತು ಸೆನೆಟ್‌ನ ಜಂಟಿ ಅಧಿವೇಶನದಲ್ಲಿ 3 ನೇ 2 ರಷ್ಟು ಬಹುಮತದಿಂದ ಆಯ್ಕೆ ಮಾಡಲಾಗಿದೆ.
* ಬಾರ್ಬಡೋಸ್ ಈ ಹಿಂದೆ 1966 ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಂಡು ವಸಾಹತು ರಾಷ್ಟ್ರವಾಗಿದೆ, ಅಷ್ಟೇ ಅಲ್ಲದೇ ಬ್ರಿಟಿಷ್ ರಾಜಪ್ರಭುತ್ವದ ಜೊತೆ ದೀರ್ಘಕಾಲದಿಂದ ಸಂಬಂಧವನ್ನು ಹಿಂಡಿಕೊಂಡಿತ್ತು.
* ಬ್ರಿಟನ್‌ನಿಂದ ದೇಶ ಸ್ವಾತಂತ್ರ್ಯ ಪಡೆದ 55 ನೇ ಸ್ವಾತಂತ್ರ್ಯೋತ್ಸವದ ದಿನದಂದು, ಅಂದರೆ ನವೆಂಬರ್. 30 ರಂದು 72 ವರ್ಷದ ಮೇಸನ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ತಿಳಿಸಿದ್ದಾರೆ.

### ಉಯಿಘರ್ ಮುಸಲ್ಮಾನ ಸಮುದಾಯದ ಹಕ್ಕು ರಕ್ಷಣೆಗೆ 43 ದೇಶಗಳ ಒತ್ತಾಯ




* ಪ್ರಸ್ತುತ ಚೀನಾದ ಕ್ಸಿನ್‌ಜಿಯಾಂಗ್‌ನಲ್ಲಿರುವ ಉಯಿಘರ್ ಮುಸಲ್ಮಾನ ಸಮುದಾಯದ ಹಕ್ಕುಗಳನ್ನು ರಕ್ಷಿಸಬೇಕು ಎಂದು ಚೀನಾ ದೇಶಕ್ಕೆ 43 ದೇಶಗಳು ಕರೆ ನೀಡಿವೆ.
* ವಿಶ್ವಸಂಸ್ಥೆ ಮತ್ತು ಯೂರೋಪಿಯನ್ ಹಾಗೂ ಏಷ್ಯಾದ ಸದಸ್ಯ ರಾಷ್ಟ್ರಗಳು ಉಯಿಘರ್ ಮುಸ್ಲಿಂರ ಹಕ್ಕುಗಳನ್ನೂ ರಕ್ಷಿಸಬೇಕು ಎಂದು ಸಹಿ ಹಾಕಿವೆ, ಈ ಮಾಹಿತಿಯನ್ನು ವಿಶ್ವಸಂಸ್ಥೆಯು ಬಿಡುಗಡೆ ಮಾಡಿದೆ.
* ಚೀನಾ ದೇಶವು ಉಯಿಘರ್ ಮುಸ್ಲಿಂ ಸಮುದಾಯದ ಮಾನವ

ಹಕ್ಕುಗಳನ್ನು ಉಲ್ಲಂಘಿಸುತ್ತಿದೆ.

* ಚೀನಾ ದೇಶದ ಕ್ಸಿನ್‌ಜಿಯಾಂಗ್ ಪ್ರಾಂತ್ಯವನ್ನು ಪ್ರವೇಶಿಸಲು, ಹಾಗೂ ಅಲ್ಲಿನ ಅರ್ಥಪೂರ್ಣ ಮಾಹಿತಿಯನ್ನು ಪಡೆಯಲು ಅವಕಾಶ ಕಲ್ಪಿಸಬೇಕು ಎಂದು ವಿಶ್ವಸಂಸ್ಥೆಯ ಮಾನವಹಕ್ಕುಗಳ ವಿಭಾಗದ ಹೈಕಮಿಷನರ್ ತಿಳಿಸಿದ್ದಾರೆ.

* ಚೀನಾ ದೇಶವು ಈ ಆರೋಪಗಳನ್ನು ಮೊದಲಿನಿಂದಲೂ ನಿರಾಕರಿಸುತ್ತಿದೆ, ಪ್ರಸ್ತುತ ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಅತೀ ಹೆಚ್ಚು ಮುಸಲ್ಮಾನರು, ಹಾಗೂ ಟರ್ಕಿಕ್ ಜನರೇ ಹೆಚ್ಚಾಗಿದ್ದಾರೆ, ಸದ್ಯ ಲಭ್ಯ ವಿರುವ ಮಾಹಿತಿಯ ಪ್ರಕಾರ 10 ಲಕ್ಷಕ್ಕೂ ಹೆಚ್ಚು ಜನರನ್ನು ಇಂತಹ ಶಿಬಿರಗಳಲ್ಲಿ ಹಿಡಿದಿಡಲಾಗಿದೆ ಎಂದು ತಿಳಿದು ಬಂದಿದೆ.

## ಪ್ರಧಾನಿ ಮೋದಿ ಅಕ್ಟೋಬರ್ 29 ರಿಂದ 31 ರ ವರೆಗೆ ಜಿ20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ



* ಪ್ರಧಾನಿ ನರೇಂದ್ರ ಮೋದಿ ಅವರು ಇದೇ ಅಕ್ಟೋಬರ್. 29 ರಿಂದ 31 ರವರೆಗೆ ಇಟಲಿಗೆ ಪ್ರಯಾಣ ಬೆಳಸಲಿದ್ದಾರೆ, ಆ ಭೇಟಿಯ ಸಂಧರ್ಭದಲ್ಲಿ ಅಂದರೆ ಅಕ್ಟೋಬರ್ 30 ಮತ್ತು 31 ರಂದು ಜರುಗುವ ಜಿ20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

* ಈ ಜಿ20 ಶೃಂಗಸಭೆಯ ನಂತರ ಪ್ರಧಾನಿ ಮೋದಿ ಯುಕೆ ಹಾಗೂ ಸ್ಕಾಟ್ಲೆಂಡ್ ಗೆ ಪ್ರಯಾಣ ಬೆಳಸಲಿದ್ದಾರೆ, ನಂತರ ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ಜರುಗುವ ಕಾಪ್ 26 ಹವಾಮಾನ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

* ಪ್ರಸ್ತುತ ಬ್ರಿಟನ್ ದೇಶವು ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ಹಮ್ಮಿಕೊಳ್ಳಲಿರುವ ಕಾಪ್ 26 ಪಕ್ಷಗಳ ಸಮ್ಮೇಳನವು ಇದೇ ಅಕ್ಟೋಬರ್. 31 ರಿಂದ ನವೆಂಬರ್ 12 ರವರೆಗೆ ನಡೆಯಲಿದೆ, ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಲಿದ್ದಾರೆ ಎಂದು ಭಾರತ ಸರ್ಕಾರವು ತಿಳಿಸಿದೆ.

## 'ಅಭ್ಯಾಸ್' ಪ್ರಯೋಗಾರ್ಥ ಉಡಾವಣೆ ಯಶಸ್ವಿ



* ಒಡಿಶಾ ಕರಾವಳಿಯ ಚಂದೀಪುರದಲ್ಲಿ ಸ್ವದೇಶಿ ನಿರ್ಮಿತ ಹೈಸ್ಪೀಡ್ ಎಕ್ಸ್‌ಪೆಂಡೇಬಲ್ ಏರಿಯಲ್ ಟಾರ್ಗೆಟ್ 'ಅಭ್ಯಾಸ್'ನ ಪ್ರಯೋಗವು ಯಶಸ್ವಿಯಾಗಿ ಉಡಾವಣೆಯಾಗಿದೆ.

* ಈ 'ಅಭ್ಯಾಸ್'ನ ಪ್ರಯೋಗಾರ್ಥ ಹಾರಾಟವನ್ನು ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(DRDO) ನಡೆಸಿದೆ, ಅಷ್ಟೇ ಅಲ್ಲದೇ ಇದನ್ನು ಬೇರೆ ಬೇರೆ ವಿಧದ ಕ್ಷಿಪಣಿಗಳ ಮೌಲ್ಯಮಾಪನಕ್ಕಾಗಿ ವೈಮಾನಿಕ ಟಾರ್ಗೆಟ್ ಆಗಿ ಇದನ್ನು ಬಳಸಲಾಗುತ್ತದೆ ಎಂದು ತಿಳಿಸಿದ್ದಾರೆ.

* ಈ 'ಅಭ್ಯಾಸ್' ಪ್ರಯೋಗಾರ್ಥದ ಕಾರ್ಯಕ್ಷಮತೆಯನ್ನು ಟೆಲಿಮೆಟ್ರಿ ಮತ್ತು ರೇಡಾರ್, ಎಲೆಕ್ಟ್ರೋ ಆಪ್ಟಿಕಲ್ ಟ್ರ್ಯಾಕಿಂಗ್ ನಂತಹ ವಿವಿಧ ಸೆನ್ಸರ್‌ಗಳ ಮೂಲಕ ಟ್ರ್ಯಾಕ್ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಬಸವನಹುಳು ಹೊಸ ಪ್ರಭೇದ ಪತ್ತೆ ಹಚ್ಚಿದ ಬೆಂಗಳೂರಿನ ವಿಜ್ಞಾನಿಗಳು



* ಪ್ರಸ್ತುತ ನಿಪು ಕುಮಾರ್ ದಾಸ್ ಹಾಗೂ ಎನ್.ಎ. ಅರವಿಂದ್ ಎಂಬ ಬೆಂಗಳೂರಿನ ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಎಕಾಲಜಿ & ದ ಎನ್ವಿರಾನ್ಮೆಂಟ್ ಸಂಸ್ಥೆಯ ವಿಜ್ಞಾನಿಗಳು ಮೇಘಾಲಯದ ಈಸ್ಟ್ ಖಾಸಿ ಹಿಲ್ಸ್ ಜಿಲ್ಲೆಯ ಮಾಸ್ವಮ್ಮೈ ಎಂಬ ಹಳ್ಳಿಯಲ್ಲಿ ಬಸವನಹುಳುವಿನ ಹೊಸ ಪ್ರಬೇಧವನ್ನು ಪತ್ತೆ ಹಚ್ಚಿದ್ದಾರೆ.

* ಬಸವನಹುಳುವಿನ ಹೊಸ ಪ್ರಭೇದವು ಈ ಹಳ್ಳಿಗಳಲ್ಲಿನ ಸುಣ್ಣದ ಕಲ್ಲಿನ ಗುಹೆಯಲ್ಲಿ ಪತ್ತೆಯಾಗಿವೆ ಎಂದು ತಿಳಿಸಿದ್ದಾರೆ, ಹಾಗೂ ಈ ಹೊಸ ಪ್ರಭೇದಕ್ಕೆ ಜಿಯೋರಿಸ್ಸಾ ಮಾಸ್ವಮ್ಮೈನಿಸ್ ಎಂದು ನಾಮಕರಣ ಮಾಡಲಾಗಿದೆ, ಅಷ್ಟೇ ಅಲ್ಲದೇ 170 ವರ್ಷಗಳ ಹಿಂದೆ ಇದೇ ಜಾತಿಗೆ ಸೇರಿರುವ 'ಜಿಯೊರಿಸ್ಸಾ ಸರಿಟಾ' ಎಂಬ ಪ್ರಭೇದವು ಇದೇ ಪ್ರದೇಶದಲ್ಲಿ ಪತ್ತೆಯಾಗಿದ್ದವು ಎಂದು ವಿಜ್ಞಾನಿಗಳು ವರದಿ ಮಾಡಿದ್ದಾರೆ.

## 'ಬೂದುಪಟ್ಟಿ'ಯಲ್ಲಿ ಮುಂದುವರಿದ ಪಾಕಿಸ್ತಾನ(FATF)

Financial Action Task Force

* ಪ್ರಸ್ತುತ ಗ್ಲೋಬಲ್ ವಾಚ್ ಡಾಗ್ ಸಿದ್ದ ಪಡಿಸಿರುವ ಹಣಕಾಸು ಕ್ರಿಯಾ ಯೋಜನೆಯ (FATF) 27 ಅಂಶಗಳಲ್ಲಿ 6 ಅಂಶಗಳನ್ನು ಅನುಸರಿಸುವಲ್ಲಿ ವಿಫಲವಾದ ಕಾರಣದಿಂದಾಗಿ ಪಾಕಿಸ್ತಾನ ರಾಷ್ಟ್ರವನ್ನು 'ಬೂದು ಪಟ್ಟಿ'ಯಲ್ಲಿಯೇ ಮುಂದುವರಿಸಲು FATF ತೀರ್ಮಾನ ಕೈಗೊಂಡಿದೆ.

* ಇತ್ತೀಚಿಗೆ ಪ್ಯಾರಿಸ್‌ನಲ್ಲಿ ನಡೆದ FATFನ 4 ದಿನಗಳ ಸಾಮಾನ್ಯ ಸಭೆಯಲ್ಲಿ ಈ ನಿರ್ಣಯ ತಗೆದುಕೊಳ್ಳಲಾಗಿದೆ ಎಂದಿದ್ದಾರೆ.

* ಈ FATF ಭಯೋತ್ಪಾದಕ ಸಂಘಟನೆಗಳಿಗೆ ಹಣಕಾಸಿನ ಸಹಾಯವನ್ನು ಮಾಡುವದನ್ನು ತಡೆಯಲು ನೀಡುವುದಕ್ಕೆ ಶ್ರಮಿಸುತ್ತದೆ.

* ಪ್ರಸ್ತುತ ಪಾಕಿಸ್ತಾನ ದೇಶವನ್ನು ಮುಂದಿನ ವರ್ಷ ಏಪ್ರಿಲ್ ತಿಂಗಳಿನ ವರೆಗೆ 'ಬೂದು ಪಟ್ಟಿ'ಯಲ್ಲಿ ಮುಂದುವರಿಸಲು ತೀರ್ಮಾನಿಸಲಾಗಿದೆ

ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಟರ್ಕಿ, ಜೋರ್ಡಾನ್ ಹಾಗೂ ಮಾಲಿ ದೇಶಗಳನ್ನು 'ಬೂದು ಪಟ್ಟಿ'ಯಲ್ಲಿ ಸೇರಿಸಲು ನಿರ್ಧರಿಸಲಾಗಿದೆ ಎಂದು FATF ತಿಳಿಸಿದೆ.

## 'ಡೇಮ್ ಸಿಂಡಿ ಕಿರೊ' ನ್ಯೂಝಿಲ್ಯಾಂಡ್ ನ ಗವರ್ನರ್ ಜನರಲ್ ಆಗಿ ನೇಮಕ



* ಪ್ರಸ್ತುತ ಡೇಮ್ ಸಿಂಡಿ ಕಿರೊ ಅವರು ನ್ಯೂಝಿಲ್ಯಾಂಡ್ ನ ಗವರ್ನರ್ ಜನರಲ್ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ, ಈ ಸ್ಥಾನಕ್ಕೆ ನೇಮಕಗೊಂಡ ಮೊದಲ ಮಹಿಳೆಯಾಗಿ ಇವರಾಗಿದ್ದಾರೆ.
* ಡೇಮ್ ಸಿಂಡಿ ಕಿರೊ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ವಲಸಿಗರು ಮತ್ತು ತಾರತಮ್ಯಕ್ಕೆ ಒಳಗಾಗಿರುವ ಪ್ರಜೆಗಳಿಗೆ ನೆರವಾಗುವುದು ನನ್ನ ಆದ್ಯತೆಯಾಗಿದೆ ತಿಳಿಸಿದರು.
* ಹೊಸದಾಗಿ ಬರುವ ವಲಸಿಗರು ಮತ್ತು ಈ ಮೊದಲಿನ ನಿರಾಶ್ರಿತರನ್ನು ಸಂಪರ್ಕಿಸುವ ಕಾರ್ಯವನ್ನು ಕೈಗೊಳ್ಳುತೇನೆ, ಅಷ್ಟೇ ಅಲ್ಲದೇ ನ್ಯೂಝಿಲ್ಯಾಂಡ್ ದೇಶವನ್ನು ತಮ್ಮ ನಿವಾಸವನ್ನಾಗಿ ಮಾಡಿಕೊಂಡವರು ನೀಡಿರುವ ಅನೇಕ ವಿವಿಧ ಸಂಸ್ಕತಿ ಮತ್ತು ಧರ್ಮಗಳ ಆಚರಣೆಗೆ ಸಹಾಯ ಮಾಡಲಿದ್ದೇನೆ ಎಂದು ತಿಳಿಸಿದ್ದಾರೆ.
* ನ್ಯೂಝಿಲ್ಯಾಂಡ್ ಜನಸಂಖ್ಯೆಯ ಶೇ. 17 ಮವೋರಿ ಸಮುದಾಯ ಜನರು ಇನ್ನು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ, ಅಷ್ಟೇ ಅಲ್ಲದೇ ಈ ಸಮುದಾಯದ ಆರೋಗ್ಯ ಸಮಸ್ಯೆಗಳಿರುವ ಮಕ್ಕಳು ಸರ್ಕಾರದ ಆಶ್ರಯತಾಣದಲ್ಲಿ ನೆಲೆಸಿದ್ದಾರೆ ಎಂದು ತಿಳಿಸಿದ್ದಾರೆ.
* ಮವೋರಿ ಸಮುದಾಯ ಜನರು ಈ ಹಿಂದೆ 2019 ರಲ್ಲಿ ಭೂಮಿಯ ಹಕ್ಕು ಮತ್ತು ಸಾಮಾಜಿಕ ನ್ಯಾಯಕ್ಕೆ ಆಗ್ರಹಿಸಿ ಬೀದಿಗಿಳಿದಿದ್ದರು.

## ಪ್ರಧಾನಿ ಮೋದಿ ಅವರಿಂದ 'ವಿಶ್ರಾಮ ಸದನ' ಉದ್ಘಾಟಣೆ



* ಪ್ರಧಾನಿ ನರೇದ್ರ ಮೋದಿ ಅವರು ಇನ್ಫೊಸಿಸ್ ಸಂಸ್ಥೆಯ ವತಿಯಿಂದ ಕ್ಯಾನ್ಸರ್ ರೋಗಿಗಳಿಗಾಗಿ ನಿರ್ಮಿಸಲಾಗಿರುವ 806 ಹಾಸಿಗೆಗಳ 'ವಿಶ್ರಾಮ ಸದನ'ವನ್ನು ಉದ್ಘಾಟಿಸಿದರು.
* ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ (AIIMS) ಜಜ್ಜರ್ ಕ್ಯಾಂಪಸ್‌ನಲ್ಲಿರುವ ನ್ಯಾಷನಲ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ (NIC) 806 ಹಾಸಿಗೆಗಳ ವಿಶ್ರಮ್ ಸದನಕ್ಕೆ ಮೋದಿ ಅವರು ವರ್ಚುಲ್ ಸಭೆಯ ಮೂಲಕ ಚಾಲನೆ ನೀಡಿದರು.
* ಇನ್ಫೊಸಿಸ್ ಸಂಸ್ಥೆಯು ಸರಿ ಸುಮಾರು 93 ಕೋಟಿ ರೂ ವೆಚ್ಚದಲ್ಲಿ ವಿಶ್ರಮ ಸದನವನ್ನು ನಿರ್ಮಾಣ ಮಾಡಿದೆ, ಪ್ರಸ್ತುತ ಕ್ಯಾನ್ಸರ್ ರೋಗಿಗಳನ್ನು ನೋಡಿಕೊಳ್ಳುವವರು ಹೆಚ್ಚಾಗಿ ಆಸ್ಪತ್ರೆಯಲ್ಲಿ ದೀರ್ಘಕಾಲ ಉಳಿಯಬೇಕಾಗುತ್ತದೆ, ಅಂತವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಿರ್ಮಿಸಲಾಗಿದೆ ಎಂದಿದ್ದಾರೆ.

## ಯುನೈಟೆಡ್ ಸ್ಟೇಟ್ಸ್ ಹೈಪರ್ಸಾನಿಕ್ ಕ್ಷಿಪಣಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಪರೀಕ್ಷಿಸಿದೆ



* ಯುನೈಟೆಡ್ ಸ್ಟೇಟ್ಸ್ ಹೈಪರ್ಸಾನಿಕ್ ಕ್ಷಿಪಣಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಪರೀಕ್ಷಿಸಿದೆ.
* ಈ ಹೈಪರ್ಸಾನಿಕ್ ಕ್ಷಿಪಣಿ ತಂತ್ರಜ್ಞಾನವು ನೂತನ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಹೊಂದಿದೆ, ಈ ಕ್ಷಿಪಣಿ ತಂತ್ರಜ್ಞಾನವನ್ನು ಇದಕ್ಕೂ ಮೊದಲು ರಷ್ಯಾ ಮತ್ತು ಚೀನಾ ದೇಶಗಳು ನಿಯೋಜನೆ ಮಾಡಿವೆ.
* ಈ ಕ್ಷಿಪಣಿ ತಂತ್ರಜ್ಞಾನದ ಪರೀಕ್ಷೆಯನ್ನು ಯುನೈಟೆಡ್ ಸ್ಟೇಟ್ಸ್ ವರ್ಜೀನಿಯಾದ ವಾಲೊಪ್ಸ್ ದಲ್ಲಿನ ನಾಸಾ(NASA) ಕೇಂದ್ರದಲ್ಲಿ ಯಶಸ್ವಿಯಾಗಿ ನಡೆಸಲಾಯಿತು, ಈ ಕ್ಷಿಪಣಿನ್ನು ನೌಕಾಪಡೆ ವಿನ್ಯಾಸಗೊಳಿಸಿದೆ ಎಂದು ತಿಳಿಸಿದ್ದಾರೆ.
* ಚೀನಾ ದೇಶವು 2021 ರ ಆಗಸ್ಟ್ ನಲ್ಲಿ ಪರಮಾಣು ಸಾಮರ್ಥ್ಯದೊಂದಿಗೆ 'DF 17' ಎಂಬ ಹೈಪರ್ಸಾನಿಕ್ ಮಧ್ಯಮ ಶ್ರೇಣಿಯ ಕ್ಷಿಪಣಿಯ ಪರೀಕ್ಷೆಯನ್ನು ನಡೆಸಿದೆ, ಇದು ಸರಿ ಸುಮಾರು 2000 ಕಿ.ಮೀ. ಪರಮಾಣು ಸಿಡಿತಲೆಗಳನ್ನು ಹೊತ್ತು ಸಾಗಲಿದೆ ಎಂದು ತಿಳಿಸಿದ್ದಾರೆ.
* ರಷ್ಯಾ ದೇಶವು ಜಿರ್ಕಾನ್ ಎಂಬ ಹೈಪರ್ಸಾನಿಕ್ ಕ್ಷಿಪಣಿಯ ಪರೀಕ್ಷೆಯನ್ನು ನಡೆಸಿದೆ.

## DAY NRLM ಅಡಿಯಲ್ಲಿ 152 SAKSHAM ಕೇಂದ್ರಗಳು ಪ್ರಾರಂಭ




* ಪ್ರಸ್ತುತ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೀನದಯಾಳ್ ಅಂತ್ಯೋದಯ ಯೋಜನೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (DAY NRLM) ಅಡಿಯಲ್ಲಿ 152 ಸಾಕ್ಷಾಮ್ ಕೇಂದ್ರಗಳನ್ನು ಪ್ರಾರಂಭಿಸಿದೆ.
* 2021 ರ ಅಕ್ಟೋಬರ್ 4 ರಿಂದ 8 ರ ನಡುವೆ ಸರಿ ಸುಮಾರು 152 ಆರ್ಥಿಕ ಸಾಕ್ಷರತೆ ಮತ್ತು ಸೇವಾ ವಿತರಣಾ ಕೇಂದ್ರ (ಸಾಕ್ಷಾಮ್ ಕೇಂದ್ರ)ಗಳನ್ನೂ 13 ರಾಜ್ಯಗಳ 77 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ.

* ಈ ಕೇಂದ್ರಗಳು ಸ್ವ ಸಹಾಯ ಗುಂಪು ಗ್ರಾಮೀಣ ಪ್ರದೇಶಗಳ ಮೂಲಭೂತ ಆರ್ಥಿಕ ಅಗತ್ಯಗಳಿಗೆ ಅಂದರೆ ಸಾಲ, ಉಳಿತಾಯ, ಪಿಂಚಣಿ, ವಿಮೆ ಮುಂತಾದ ಹಣಕಾಸು ಸೇವೆಗಳಿಗೆ ಪರಿಹಾರ ಒದಗಿಸುವ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸಲಿವೆ.
* ಗ್ರಾಮೀಣಾಭಿವೃದ್ಧಿ ಸಚಿವಾಲಯವು ಈ ಸಾಕ್ಷಮ್ ಎಂಬ ಮೊಬೈಲ್ ಹಾಗೂ ವೆಬ್ ಆಧಾರಿತ ಅಪ್ಲಿಕೇಶನ್'ನ್ನು ಆರಂಭಿಸಿದೆ.

### ಐವಿಎಫ್ ತಂತ್ರಜ್ಞಾನದಿಂದ ಗರ್ಭ ಧರಿಸಿದ್ದ ಮೊದಲ ಬನ್ನಿ ತಳಿಯ ಎಮ್ಮೆ ಗಂಡು ಕರುವಿಗೆ ಜನ್ಮ ನೀಡಿದೆ

* ಹಾಲಿನ ಉತ್ಪಾದನೆ ಹೆಚ್ಚಿಸಲಿಕ್ಕೆ ಮತ್ತು ಗುಣಮಟ್ಟದ ತಳಿಯ ಎಮ್ಮೆಗಳ ಸಂತತಿಯನ್ನು ಉಳಿಸಿಕೊಂಡು ಹೋಗಲು ಈ ತಂತ್ರಜ್ಞಾನದ ಬಳಸಿಕೊಂಡು ಈಗ ಬನ್ನಿ ತಳಿಯ ಎಮ್ಮೆಯಿಂದ ಗಂಡು ಕರುವನ್ನು ಪಡೆಯಲಾಗಿದೆ.
* ಈ ತಳಿಯ ಎಮ್ಮೆಗಳು ಗುಜರಾತ್ ನ ಕುಚ್ ಪ್ರಾಂತದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.
* ಗುಜರಾತ್‌ನ ಸೋಮನಾಥ ಜಿಲ್ಲೆಯ ಧನೇಜ್‌ನಲ್ಲಿರುವ ವಿನಯ್ ಎಲ್ ವಾಲಾ ಎಂಬ ರೈತನ ಮನೆಯಲ್ಲಿ ಬನ್ನಿ ತಳಿಯ ಎಮ್ಮೆಯು ಗಂಡು ಕರುವಿಗೆ ಜನ್ಮವನ್ನು ನೀಡಿದೆ.

## 25-10-2021

### ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಆಚರಣೆ



* ಕರ್ನಾಟಕ ರಾಜ್ಯವು ಪ್ರತಿ ವರ್ಷವು ಅಕ್ಟೋಬರ್. 23 ರಂದು 'ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಆಚರಿಸುತ್ತದೆ.
* ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ 2021 ರಲ್ಲಿ 50 ಕೋಟಿ ರೂಪಾಯಿ ಮಂಜೂರು ಮಾಡಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು ತಿಳಿಸಿದ್ದಾರೆ.
* ಈ ಹಿಂದೆ 1778 ರ ಅಕ್ಟೋಬರ್. 23 ರಂದು ಕಿತ್ತೂರು ಚೆನ್ನಮ್ಮ ಅವರು ಜನಿಸಿದರು, ಇವಳು ಕಿತ್ತೂರಿನ ರಾಣಿಯಾಗಿದ್ದಳು, ಕಿತ್ತೂರು ಇದೊಂದು ಕರ್ನಾಟಕದಲ್ಲಿನ ರಾಜಪ್ರಭುತ್ವವಾಗಿತ್ತು.
* ಕಿತ್ತೂರು ರಾಜಪ್ರಭುತ್ವವು 1824 ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಸಶಸ್ತ್ರ ದಂಗೆಯನ್ನು ನಡೆಸಿತು, ಈ ಸಂಧರ್ಭದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರನ್ನು ಸೋಲಿಸಿದಳು, ಆದರೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ 2 ನೇ ಬಂಡಾಯದ ಸೆರೆವಾಸದಲ್ಲಿ ಮರಣ ಹೊಂದಿದಳು.
* ಕಿತ್ತೂರು ಪ್ರದೇಶವು ಕರ್ನಾಟಕದ ಬೆಳಗಾವಿ ಜಿಲ್ಲೆಯ ಒಂದು ತಾಲೂಕು ಪ್ರದೇಶವಾಗಿದೆ, ಈ ಮೊದಲು ಕಿತ್ತೂರು ಬೈಲಹೊಂಗಲ ತಾಲೂಕಿನ ಪ್ರದೇಶವಾಗಿತ್ತು, ಆದರೆ 2012 ರ ಅಕ್ಟೋಬರ್. 23 ರಂದು ಇದನ್ನು ಸ್ವತಂತ್ರ ತಾಲೂಕನ್ನಾಗಿ ಘೋಷಣೆ ಮಾಡಲಾಗಿತ್ತು, ಆಗ ಇದು ಕರ್ನಾಟಕ ರಾಜ್ಯದ 177 ನೇ ತಾಲೂಕಾಗಿ ಹೊರ ಹೊಮ್ಮಿತು.

### ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ಹೇಳಿದ ನೆದರ್ಲೆಂಡ್ ನ ಟೆನ್ ಡೆಶ್ಕೋಟ್



* ನೆದರ್ಲೆಂಡ್ ತಂಡದ ಆಲ್ ರೌಂಡರ್ ರಿಯಾನ್ ಟೆನ್ ಡೆಶ್ಕೋಟ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ತಿಳಿಸಿದ್ದಾರೆ.
* ಆಲ್ ರೌಂಡರ್ ರಿಯಾನ್ ಟೆನ್ ಡೆಶ್ಕೋಟ್ ಅವರು ಶ್ರೀಲಂಕಾ ವಿರುದ್ಧ ನಡೆದ ಪಂದ್ಯದ ಬಳಿಕ ಈ ನಿರ್ಧಾರವನ್ನು ತಿಳಿಸಿದ್ದಾರೆ.
* ನೆರರ್ಲೆಂಡ್ ತಂಡವು ಈ ಬಾರಿಯ ಟಿ20 ವಿಶ್ವಕಪ್ ನ ಸೂಪರ್ 12 ಹಂತ ತಲುಪುವಲ್ಲಿ ವಿಫಲವಾಗಿದೆ.
* ನೆರರ್ಲೆಂಡ್ ತಂಡದ ಆಲ್ ರೌಂಡರ್ ಆಟಗಾರ ರಿಯಾನ್ ಟೆನ್ ಡೆಶ್ಕೋಟ್ ಅವರು ನೆದರ್ಲೆಂಡ್ ತಂಡದ ಪರವಾಗಿ 33 ಏಕದಿನ, ಹಾಗೂ 24 ಟಿ20 ಪಂದ್ಯಗಳನ್ನೂ ಆಡಿದ್ದಾರೆ.

### ಮೊದಲ ಝೀಕಾ ವೈರಸ್ ಪ್ರಕರಣವು ಉತ್ತರ ಪ್ರದೇಶದ ಕಾನ್ಪುರದಲ್ಲಿ ಪತ್ತೆ




* ಪ್ರಸ್ತುತ ಉತ್ತರ ಪ್ರದೇಶ ರಾಜ್ಯದ ಕಾನ್ಪುರ ಜಿಲ್ಲೆಯಲ್ಲಿ ಮೊದಲ ಝೀಕಾ ವೈರಸ್ ಪ್ರಕರಣ ಪತ್ತೆಯಾಗಿದೆ ಎಂದು ಅಲ್ಲಿನ ಆರೋಗ್ಯ ಅಧಿಕಾರಿ ಮಾಹಿತಿ ನೀಡಿದ್ದಾರೆ.
* ಭಾರತೀಯ ವಾಯುಪಡೆಯ (IAF) ಅಧಿಕಾರಿಯಲ್ಲಿ ಈ ಝೀಕಾ ವೈರಸ್ ಪ್ರಕರಣವು ಪತ್ತೆಯಾಗಿದೆ.
* ಉತ್ತರ ಪ್ರದೇಶದ ಕಾನ್ಪುರ ಜಿಲ್ಲೆಯಲ್ಲಿ ವೈರಸ್ ಹರಡುವುದನ್ನು ಪರಿಶೀಲಿಸಲು ಹಲವಾರು ತಂಡಗಳನ್ನು ನಿಯೋಜಿಸಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.
* ಈ ಮೊದಲು ಝೀಕಾ ವೈರಸ್ ಪ್ರಕರಣವು ಕೇರಳ ರಾಜ್ಯದಲ್ಲಿ ಪತ್ತೆಯಾಗಿತ್ತು.

### ಉತ್ತರ ಪ್ರದೇಶ ಸರ್ಕಾರವು ಫೈಜಾಬಾದ್ ರೈಲ್ವೆ ನಿಲ್ದಾಣಕ್ಕೆ ಮರುನಾಮಕರಣ ಮಾಡಲು ನಿರ್ಧರಿಸಿದೆ



* ಪ್ರಸ್ತುತ ಉತ್ತರ ಪ್ರದೇಶ ಸರ್ಕಾರವು ಫೈಜಾಬಾದ್ ರೈಲ್ವೆ ನಿಲ್ದಾಣಕ್ಕೆ ಮರುನಾಮಕರಣ ಮಾಡಲು ತೀರ್ಮಾನಿಸಿದೆ, ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಟ್ವೀಟರ್ ಖಾತೆಯ ಮೂಲಕ ಮಾಹಿತಿ ನೀಡಿದ್ದಾರೆ.
* ಉತ್ತರ ಪ್ರದೇಶದ ಈ ಫೈಜಾಬಾದ್ ರೈಲ್ವೆ ನಿಲ್ದಾಣಕ್ಕೆ ಅಯೋಧ್ಯೆ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ ಎಂದು ಮರುನಾಮಕರಣ ಮಾಡಲು ಉತ್ತರ ಪ್ರದೇಶ ಸರ್ಕಾರದ ಮುಖ್ಯಮಂತ್ರಿ ಕಾರ್ಯಾಲಯ ಮಾಹಿತಿ ಬಹಿರಂಗ ಪಡಿಸಿದೆ.
* ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಈ ಮೊದಲು 2018 ರಲ್ಲಿ ಫೈಜಾಬಾದ್ ನ್ನು ಅಯೋಧ್ಯೆ ಎಂದು ಮರುನಾಮಕರಣ ಮಾಡಿದ್ದರು, ಹಾಗೂ ಅಲ್ಲಾಹಾಬಾದ್ ನ್ನು ಪ್ರಯಾಗ್ ರಾಜ್ ಎಂದು ಇದರ ಜೊತೆಗೆ ಮುಘಲ್ ಸರೈ ರೈಲ್ವೆ ನಿಲ್ದಾಣವನ್ನು ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಜಂಕ್ಷನ್ ಎಂದು ಮರುನಾಮಕರಣ ಮಾಡಿದ್ದರು.

## ಮಿಂತ್ರ (Myntra) CEO ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಅಮರ್ ನಗರಮ್




* ಮಿಂತ್ರ (Myntra) ಮುಖ್ಯ ಕಾರ್ಯನಿರ್ವಾಹಕ (CEO) ಅಧಿಕಾರಿ ಅಮರ್ ನಗರಮ್ ಅವರು ಇದೀಗ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ, ಇವರು 3 ವರ್ಷಗಳ ಕಾಲ ಫ್ಯಾಷನ್‌ಇ ಕಾಮರ್ಸ್ ಪ್ಲಾಟ್ ಫಾರ್ಮ್ ನ್ನು ಮುನ್ನಡೆಸಿದ್ದರು.
* ಪ್ರಸ್ತುತ CEO ಅಧಿಕಾರಿ ಅಮರ್ ನಗರಮ್ ಅವರು ಡಿಸೆಂಬರ್ ಅಂತ್ಯದವರೆಗೆ ಮಿಂತ್ರದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಸಂಸ್ಥೆ ಮಾಹಿತಿ ನೀಡಿದೆ.
* ಇದೀಗ ಅಮರ್ ಅವರು ತಮ್ಮ ಸ್ವಂತ ಉದ್ಯಮವನ್ನು ಮುಂದುವರಿಸಲು, ಈ ಫ್ಲಿಪ್‌ಕಾರ್ಟ್ ಸಮೂಹವನ್ನು ತೊರೆಯಲು ಸಿದ್ಧರಾಗಿದ್ದಾರೆ ಎಂದು ತಿಳಿದು ಬಂದಿದೆ, ಅಮರ್ ನಗರಮ್ ಅವರು ಸರಿ ಸುಮಾರು 10 ವರ್ಷಗಳಿಂದ ಈ ಗುಂಪಿನ ಭಾಗವಾಗಿ ಹಾಗೂ ಫ್ಲಿಪ್ ಕಾರ್ಟ್‌ನಲ್ಲಿನ ಬೇರೆ ಬೇರೆ ತಂಡಗಳನ್ನು ಮುನ್ನಡೆಸಿದ್ದಾರೆ.
* ಮುಂದಿನ ಮಿಂತ್ರ (Myntra) ಮುಖ್ಯ ಕಾರ್ಯನಿರ್ವಾಹಕ (CEO) ಅಧಿಕಾರಿಯನ್ನು ಶೀಘ್ರದಲ್ಲಿಯೇ ತಿಳಿಸಲಿದೆ ಎಂದು ತಿಳಿಸಿದ್ದಾರೆ.
* ಅಮರ್ ನಗರಮ್ ಅವರು 2019 ರಲ್ಲಿ ಮಿಂತ್ರಾ ಮತ್ತು ಜಬಾಂಗ್ ನ CEO ಆಗಿ ಅಧಿಕಾರ ವಹಿಸಿಕೊಂಡಿದ್ದರು, ಇದಕ್ಕೂ ಮುಂಚಿತವಾಗಿ ಫ್ಲಿಪ್ ಕಾರ್ಟ್‌ನಲ್ಲಿ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

## 'ಅಮಿತ್ ಶಾ'ರಿಂದ ಶ್ರೀನಗರ ಶಾರ್ಜಾ ಅಂತರಾಷ್ಟ್ರೀಯ ವಿಮಾನಯಾನ ಉದ್ಘಾಟಣೆ



* ಕೇಂದ್ರ ಗೃಹ ಸಚಿವ 'ಅಮಿತ್ ಶಾ' ಅವರು ಇತ್ತೀಚಿಗೆ ಜಮ್ಮು&ಕಾಶ್ಮೀರಕ್ಕೆ 3 ದಿನಗಳ ಪ್ರವಾಸವನ್ನು ಕೈಗೊಂಡಿದ್ದರು, ಈ ಸಂಧರ್ಭದಲ್ಲಿ ಶ್ರೀನಗರದ ಶೇಖ್ ಉಲ್ ಆಲಂ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶ್ರೀನಗರ ಶಾರ್ಜಾ ಅಂತರಾಷ್ಟ್ರೀಯ ವಿಮಾನಯಾನವನ್ನು ಉದ್ಘಾಟಿಸಿದರು.
* ಈ ಶ್ರೀನಗರ ಶಾರ್ಜಾ ಅಂತರಾಷ್ಟ್ರೀಯ ವಿಮಾನಯಾನವು, ಪ್ರವಾಸೋದ್ಯಮವನ್ನು ಉತ್ತೇಜಿಸಲಿದೆ, ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ ಹೆಚ್ಚಿನ ಹೂಡಿಕೆಯನ್ನು ತರಲು ಸಹಾಯ ಮಾಡಲಿದೆ ಎಂದು ತಿಳಿಸಿದರು.
* ಪ್ರಸ್ತುತ ವಾಡಿಯಾ ಗ್ರೂಪ್ ರನ್ ಏರ್ಲೈನ್ಸ್ ಗೋ ಫಸ್ಟ್, UAE ಯ ಶಾರ್ಜಾಗೆ ನೇರ ಪ್ರಯಾಣಿಕ ಸೇವೆಗಳನ್ನು ಶ್ರೀನಗರದಿಂದ ಪ್ರಾರಂಭಿಸಿತು, ಅಷ್ಟೇ ಅಲ್ಲದೇ ಜಮ್ಮು ಮತ್ತು ಕಾಶ್ಮೀರದ ಬೇಸಿಗೆ ರಾಜಧಾನಿಯಿಂದ ನೇರ ಅಂತರರಾಷ್ಟ್ರೀಯ ಸಂಪರ್ಕವನ್ನು ಕಲ್ಪಿಸಿದ ಮೊದಲ ದೇಶೀಯ ವಿಮಾನಯಾನ ಇದಾಗಿದೆ.
* ಈ ಹೊಸ ವಿಮಾನಯಾನ ಸೇವೆಯು ಶಾರ್ಜಾ ಶ್ರೀನಗರ, ಅಷ್ಟೇ ಅಲ್ಲದೇ ಚಂಡೀಗಢ, ದೆಹಲಿ, ಜಮ್ಮು, ಲೇಹ್ ಹಾಗೂ ಮುಂಬೈ ನಗರಗಳಿಗೆ ತಡೆರಹಿತ ಸಂಪರ್ಕವನ್ನು ಕಲ್ಪಿಸಲಿದೆ ಎಂದು ವಿಮಾನಯಾನ ಸಂಸ್ಥೆಯು ತಿಳಿಸಿದೆ.

## ಚೀನಾ ದೇಶವು ಹೊಸ ಭೂ ಗಡಿ ಕಾನೂನು ಅಂಗೀಕರಿಸಿದೆ



* ಚೀನಾ ದೇಶದ ಸಾರ್ವಭೌಮತ್ವ ಹಾಗೂ ಪ್ರಾದೇಶಿಕ ಸಮಗ್ರತೆ ಉಲ್ಲಂಘಣೆ ಮಾಡಲಾಗದು ಎಂದು ಪ್ರತಿಪಾದಿಸಿದ ದೇಶದ ರಾಷ್ಟ್ರೀಯ ಶಾಸಕಾಂಗವು ಭೂ ಗಡಿ ಪ್ರದೇಶಗಳ ರಕ್ಷಣೆ ಮತ್ತು ಶೋಷಣೆಯ ಬಗ್ಗೆ ಹೊಸ ಕಾನೂನನ್ನು ಅಂಗೀಕರಿಸಿದೆ.
* ಚೀನಾ ಅಂಗೀಕರಿಸಿದ ಈ ಹೊಸ ಕಾನೂನು ಭಾರತವು ಚೀನಾದೊಂದಿಗೆ ಹಂಚಿಕೊಂಡಿರುವ ಗಡಿಗಳ ಮೇಲೆ ಪರಿಣಾಮ ಬೀರಲಿದೆ ಎಂದು ಅಂದಾಜಿಸಲಾಗಿದೆ.
* ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್‌ನ (NPC) ಸ್ಥಾಯಿ ಸಮಿತಿಯ ಸದಸ್ಯರು ಶಾಸಕಾಂಗ ಅಧಿವೇಶನದ ಸಭೆಯಲ್ಲಿ ಈ ಕಾನೂನನ್ನು ಅನುಮೋದಿಸಿದ್ದಾರೆ ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಕ್ಸಿನ್ಹುವಾ ಸುದ್ದಿ ವಾಹಿನಿ ಮಾಹಿತಿ ನೀಡಿದೆ.
* ಈ ಹೊಸ ಕಾನೂನು ಮುಂಬರುವ ಜನೇವರಿ 1 ರಿಂದ ಜಾರಿಯಾಗಲಿದೆ, ಈ ಕಾನೂನು ದೇಶದ ಗಡಿಗಳಿಗೆ ಶಕ್ತಿ ತುಂಬಲಿದೆ, ಹಾಗೂ ಗಡಿ ಪ್ರದೇಶಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಿದೆ ಎಂದು ಚೀನಾ ತಿಳಿಸಿದೆ.
* ಇದೀಗ ಚೀನಾ ದೇಶವು ಇದೀಗ 12 ದೇಶಗಳೊಂದಿಗೆ ಇರುವಂತಹ

ಗಡಿ ವಿವಾದವನ್ನು ಬಗೆಹರಿಸಿಕೊಂಡಿದೆ, ಆದರೆ ಭಾರತ ಮತ್ತು ಭೂತಾನ್ ದೇಶಗಳ ಗಡಿ ಒಪ್ಪಂದಗಳನ್ನು ಅಂತಿಮಗೊಳಿಸಿಲ್ಲ ಎಂದು ತಿಳಿದುಬಂದಿದೆ.

## ನೇಪಾಳಕ್ಕೆ ಜಯನಗರ ಕುರ್ತಾ ರೈಲು ಸಂಪರ್ಕವನ್ನು ಹಸ್ತಾಂತರಿಸಿದ ಭಾರತ



* ಪ್ರಸ್ತುತ 34.9 ಕಿಮೀ ಉದ್ದದ ಗಡಿಯಾಚೆಗಿನ ರೈಲು ಸಂಪರ್ಕವನ್ನು ನೇಪಾಳ ಸರ್ಕಾರಕ್ಕೆ ಹಸ್ತಾಂತರಿಸಿದೆ ಭಾರತ, ಈ ರೈಲು ಸಂಪರ್ಕವು ಬಿಹಾರದ ಜಯನಗರ ಹಾಗೂ ನೇಪಾಳದ ಕುರ್ತಾಗೆ ಸಂಪರ್ಕವನ್ನು ಕಲ್ಪಿಸುತ್ತದೆ.
* ಈ ರೈಲು ಜಯನಗರ ಬಿಜಾಲ್‌ಪುರ ಬಾರ್ಡಿದಾಸ್ ಸಂಪರ್ಕದ ಭಾಗವಾಗಿದೆ, ಈ ರೈಲನ್ನು ಭಾರತ ಸರ್ಕಾರದ ಅನುದಾನ ಕಾರ್ಯಕ್ರಮದ ಅಡಿಯಲ್ಲಿ ನಿರ್ಮಾಣ ಮಾಡಲಾಗಿದೆ, ಈ ಯೋಜನೆಯು 619 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಂಡಿದೆ.
* ಈ ರೈಲು ಸಂಪರ್ಕದಿಂದ ಗಡಿಯಾಚೆಗಿನ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ, ಹಾಗೂ ಉಭಯ ದೇಶಗಳ ನಡುವಿನ ಜನರ ಚಟುವಟಿಕೆಗಳನ್ನು ಉತ್ತಮಗೊಳಿಸಲಿದೆ.

## ಕೇಂದ್ರ ಸರ್ಕಾರವು 7 ವರ್ಷಗಳಲ್ಲಿ 157 ವೈದ್ಯಕೀಯ ಕಾಲೇಜು ಸ್ಥಾಪನೆಗೆ ಒಪ್ಪಿಗೆ ನೀಡಿದೆ

Ministry of Health and Family Welfare
Government of India

* ಪ್ರಸ್ತುತ ಕೇಂದ್ರ ಸರ್ಕಾರವು 2014 ರ ಪ್ರಾರಂಭದಿಂದ ಹಿಡಿದು 157 ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಅನುಮತಿಯನ್ನು ನೀಡಿದೆ, ಈ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಯೋಜನೆಗಳಿಗೆ 17,691 ಕೋಟಿ ವೆಚ್ಚವನ್ನು ಭರಿಸಿದೆ ಎಂದು ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.
* ದೇಶದಲ್ಲಿ ಈ ಕಾಲೇಜುಗಳು ಪ್ರಾರಂಭವಾದಾಗ ಹೊಸದಾಗಿ 16 ಸಾವಿರ ವೈದ್ಯಕೀಯ ಸೀಟುಗಳು ಸೇರ್ಪಡೆಯಾಗಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.
* ಕೇಂದ್ರ ಸರ್ಕಾರದ ಈ ಯೋಜನೆ ಅಡಿಯಲ್ಲಿ ಇದೀಗ 64 ಕಾಲೇಜುಗಳು ಪ್ರಾರಂಭವಾಗಿವೆ, ಈ ಕಾಲೇಜುಗಳಿಂದ ಸದ್ಯ 6,500 ವೈದ್ಯಕೀಯ ಸೀಟುಗಳು ಲಭ್ಯವಾಗಿವೆ ಎಂದು ಸಚಿವಾಲಯವು ವರದಿ ಮಾಡಿದೆ.
* ಕೇಂದ್ರ ಸರ್ಕಾರವು ಇದೀಗ ದೇಶದಲ್ಲಿನ ಯಾವ ಜಿಲ್ಲೆಗಳಲ್ಲಿ ಸರ್ಕಾರಿ ಅಥವಾ ಖಾಸಗಿ ವೈದ್ಯಕೀಯ ಕಾಲೇಜುಗಳು ಇಲ್ಲವೋ ಈ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುತ್ತದೆ, ಅದರಲ್ಲಿ ಅತೀ ಹೆಚ್ಚಾಗಿ ಈಶಾನ್ಯ ರಾಜ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ, ಈ ಈಶಾನ್ಯ ರಾಜ್ಯಗಳಲ್ಲಿ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಕೇಂದ್ರ ಸರ್ಕಾರವು ಶೇ. 90 ರಷ್ಟು ಹಾಗೂ ರಾಜ್ಯ ಶೇ. 10 ರಷ್ಟು ಹಣಕಾಸು ನೀಡಲಿವೆ ಎಂದು ತಿಳಿಸಿದೆ.

## ಹೊಸ ಶಿಕ್ಷಣ ಕಾನೂನನ್ನು ಅಂಗೀಕರಿಸಿದ ಚೀನಾ



* ಚೀನಾ ದೇಶವು 2021 ರ ಅಕ್ಟೋಬರ್. 23 ರಂದು ಹೊಸ ಶಿಕ್ಷಣ ಕಾನೂನನ್ನು ಅಂಗೀಕರಿಸಿದೆ, ಮುಖ್ಯ ವಿಷಯಗಳಲ್ಲಿ ಹೋಮ್‌ವರ್ಕ್ ಮತ್ತು ಆಫ್ ಸೈಟ್ ಭೋದನೆಯ 'ಅವಳಿ ಒತ್ತಡಗಳನ್ನು' ಕಡಿಮೆಗೊಳಿಸುವ ಉದ್ದೇಶವನ್ನು ಹೊಂದಿದೆ.
* ಆನ್‌ಲೈನ್ ಆಟಗಳಿಗೆ ಯುವಕರ ಚಟವನ್ನು ಎದುರಿಸುವುದು, ಆಧ್ಯಾತ್ಮಿಕ ಅಫೀಮಿನ ಒಂದು ರೂಪವೆಂದು ಗುರುತಿಸಲಾಗಿದೆ.
* ಪ್ರಸ್ತುತ ಚೀನಾ 2021 ರ ಅಕ್ಟೋಬರ್. 18 ರಂದು ತಮ್ಮ ಚಿಕ್ಕ ಮಕ್ಕಳು, ಕೆಟ್ಟ ನಡವಳಿಕೆ ಅಥವಾ ಅಪರಾಧಗಳನ್ನು ತೋರಿದರೆ ಪೋಷಕರನ್ನು ಮಕ್ಕಳನ್ನು ಶಿಕ್ಷಿಸಲು ಈ ಶಾಸನವನ್ನು ಗುರುತಿಸಲಾಗುತ್ತದೆ ಎಂದು ಚೀನಾ ಸಂಸತ್ತು ತಿಳಿಸಿದೆ.
* ಈ ಹೊಸ ಕಾನೂನನ್ನು ಅಂಗೀಕರಿಸಿದ್ದರಿಂದ ಇದೀಗ ಸ್ಥಳೀಯ ಸರ್ಕಾರಗಳ ಜವಾಬ್ದಾರಿ ಹೆಚ್ಚಾಗಿದೆ, ಹಾಗೂ ಈ ಕಾನೂನು ಮಕ್ಕಳಲ್ಲಿ ಒತ್ತಡವನ್ನು ಕಡಿಮೆ ಮಾಡಲು ಹಾಗೂ ಅಂತರ್ಜಾಲದ ಅತಿಯಾದ ಬಳಕೆಯನ್ನು ತಪ್ಪಿಸಲು ಸಹಾಯಕಾರಿಯಾಗಲಿದೆ, ಅಷ್ಟೇ ಅಲ್ಲದೇ ಈ ಹೊಸ ಕಾನೂನು ಮನೆಕೆಲಸವನ್ನು ಕಡಿಮೆಗೊಳಿಸಿ ವಾರಾಂತ್ಯ ಮತ್ತು ರಜಾದಿನಗಳಲ್ಲಿ ಹಲವು ಪ್ರಮುಖ ವಿಷಯಗಳಿಗೆ ಶಾಲೆಯ ನಂತರ ಬೋಧನೆಯನ್ನು ನಿಷೇಧಿಸಲು ಸಹಾಯಕಾರಿ ಯಾಗಲಿದೆ ಎಂದಿದ್ದಾರೆ.
* ಚೀನಾ ದೇಶದಲ್ಲಿ ಶಿಕ್ಷಣವನ್ನು ಪ್ರಾಥಮಿಕವಾಗಿ ಸರ್ಕಾರಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಿಂದ ನಿರ್ವಹಿಸಲಾಗುತ್ತದೆ, ಚೀನಾದ ಈ ಕಾನೂನಿನ ಪ್ರಕಾರ, ದೇಶದ ಎಲ್ಲಾ ನಾಗರಿಕರು ಕನಿಷ್ಟ '9' ವರ್ಷಗಳವರೆಗೆ 'ಒಂಬತ್ತು ವರ್ಷದ ಕಡ್ಡಾಯ ಶಿಕ್ಷಣ' ಎಂದು ಕರೆಯುವ ಶಾಲೆಗೆ ಹಾಜರಾಗಬೇಕು, ಈ ಕಡ್ಡಾಯ ಶಿಕ್ಷಣಕ್ಕೆ ಸರ್ಕಾರವು ಹಣ ಭರಿಸಲಿದೆ ಎಂದು ತಿಳಿಸಿದ್ದಾರೆ.

## ಪ್ರಧಾನ ಮಂತ್ರಿ ಆತ್ಮನಿರ್ಭರ್ ಸ್ವಸ್ತ್ ಭಾರತ್ ಯೋಜನೆಗೆ ಪ್ರಧಾನಮಂತ್ರಿ ಮೋದಿ ಚಾಲನೆ




* ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ ಕ್ಷೇತ್ರವಾದ ಉತ್ತರ ಪ್ರದೇಶದ ವಾರಣಾಸಿಯಲ್ಲಿ ಪ್ರಧಾನಮಂತ್ರಿ ಆತ್ಮನಿರ್ಭರ್ ಸ್ವಸ್ಥ

ಭಾರತ್ ಯೋಜನೆಗೆ ಚಾಲನೆ ನೀಡಿದರು.

* ದೇಶದ ಜನರಿಗಾಗಿ ಪ್ರಾರಂಭಿಸಲಾದ ಈ ಯೋಜನೆಯಡಿ ಆರೋಗ್ಯ ಕ್ಷೇತ್ರಕ್ಕಾಗಿಯೇ 64 ಸಾವಿರ ಕೋಟಿ ರೂಪಾಯಿ ಮೀಸಲಿಡಲಾಗಿದೆ.

* ಸಮಾಜದ ಹಿಂದುಳಿದ ವರ್ಗಗಳಿಗೆ ಪರಿಣಾಮಕಾರಿ ಚಿಕಿತ್ಸೆಯನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

* ಪಿಎಂಎಎಸ್ ಬಿವೈನ ಉದ್ದೇಶ ದೇಶಾದ್ಯಂತ ಆರೋಗ್ಯ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ ಭಾರತದ ಅತಿದೊಡ್ಡ ಯೋಜನೆ ಇದಾಗಿದೆ, ಎಲ್ಲಾ ಜಿಲ್ಲೆಗಳಲ್ಲಿ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತದೆ ಎಂದು ತಿಳಿಸಲಾಗಿದೆ.

## ಉತ್ತರ ಪ್ರದೇಶದಲ್ಲಿ 9 ವೈದ್ಯಕೀಯ ಕಾಲೇಜುಗಳನ್ನು ಉದ್ಘಾಟಿಸಿದ ಪ್ರಧಾನಿ ಮೋದಿ




* ಇತ್ತೀಚಿಗೆ ಪ್ರಧಾನಿ ಮೋದಿಯವರು ಉತ್ತರ ಪ್ರದೇಶದಲ್ಲಿನ 9 ಹೊಸ ವೈದ್ಯಕೀಯ ಕಾಲೇಜುಗಳನ್ನು ಉದ್ಘಾಟಿಸಿದರು, ಈ ಮೂಲಕ 2,500 ಹಾಸಿಗೆಗಳ ಆಸ್ಪತ್ರೆ ಗಳು ಆರಂಭವಾಗಲಿದ್ದು, ಜೊತೆಗೆ 5000 ಮಂದಿ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಗೆ ವೃತ್ತಿಪರ ತರಬೇತಿ ಸಿಗುಲಿದೆ ಎಂದು ಅವರು ತಿಳಿಸಿದರು.

* ಉತ್ತರಪ್ರದೇಶದಲ್ಲಿ ಕೊರೊನಾ ಸಂದರ್ಭದಲ್ಲಿಯೂ ಸಾಕಷ್ಟು ಸಾಧನೆಗಳಾಗಿದ್ದು, ಉತ್ತರ ಪ್ರದೇಶದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೊರೊನಾ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಅಲ್ಲದೆ ಲಸಿಕೆ ನೀಡಿವಿಕೆಯಲ್ಲಿ ಭಾರತದ ಮಹತ್ವದ ಮೈಲುಗಲ್ಲು ಸಾಧಿಸಲು ಉತ್ತರಪ್ರದೇಶದ ಕೊಡುಗೆ ಬಹುದೊಡ್ಡ ಕಾಣಿಕೆ. ಹೊಸ ತಲೆಮಾರಿನ ವೈದ್ಯರು ಸಾಕಷ್ಟು ಪ್ರಮಾಣದಲ್ಲಿ ಈಗ ವೃತ್ತಿ ರಂಗ ಪ್ರವೇಶ ಮಾಡಿರುವುದರಿಂದ ದೇಶದ ಜನರ ಆರೋಗ್ಯ ಸುಧಾರಿಸುತ್ತದೆ ಎಂದು ತಿಳಿಸಿದ ಮೋ ದಿ ಮಾತೃಭಾಷೆಯಲ್ಲಿ ಶಿಕ್ಷಣ ಸಿಗುವಂತೆ ಆಗಬೇಕು ಎನ್ನುವುದು ನಮ್ಮ ಸರ್ಕಾರದ ನೀತಿ ಎಂದು ಈ ಸಂದರ್ಭದಲ್ಲಿ ಹೇಳಿದರು.

## ಪ್ರತಿಷ್ಠಿತ 'ದಾದಾಸಾಹೇಬ್ ಪಾಲ್ಕೆ ಪ್ರಶಸ್ತಿ' ಪಡೆದ ರಜನಿಕಾಂತ್




* ಇತ್ತೀಚಿಗೆ ದೆಹಲಿಯಲ್ಲಿ 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿತ್ತು.

* ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಪರಾಷ್ಟ್ರಪತಿ ವೆಂಕಯ್ಯನಾಯ್ದು ಅವರಿಂದ ನಟ ರಜನಿಕಾಂತ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

* ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ 'ಸೂಪರ್ ಸ್ಟಾರ್ ರಜನಿಕಾಂತ್' ಅವರು ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವವಾದ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಯನ್ನು ಸ್ವೀಕರಿಸಲು ನನಗೆ ತುಂಬಾ ಸಂತೋಷವಾಗಿದೆ ಎಂದು ತಿಳಿಸಿದರು.

# 26-10-2021

## ಉಚಿತ ಶಿಕ್ಷಣ ಯೋಜನೆಯನ್ನು ಘೋಷಿಸಿದ ಹರಿಯಾಣ ರಾಜ್ಯ



* ಪ್ರಸ್ತುತ ಹರಿಯಾಣ ರಾಜ್ಯದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಇದೀಗ ರಾಜ್ಯದಲ್ಲಿ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಇದೀಗ ರಾಜ್ಯದಲ್ಲಿ ಉಚಿತ ಶಿಕ್ಷಣ ಯೋಜನೆಯನ್ನು ಘೋಷಣೆ ಮಾಡಿದ್ದಾರೆ.

* ಪ್ರಸ್ತುತ ಹರಿಯಾಣ ರಾಜ್ಯದಲ್ಲಿನ ಕುಟುಂಬಗಳ ವಾರ್ಷಿಕ ಆದಾಯವು 1.80 ಲಕ್ಷ ರೂ. ಗಿಂತ ಕಡಿಮೆಯಾಗಿದ್ದಾರೆ, ಈ ಕುಟುಂಬಗಳಿಗಾಗಿ ಈ ಯೋಜನೆಯನ್ನು ಘೋಷಣೆ ಮಾಡಿದ್ದಾರೆ.

* ಈ ಯೋಜನೆಯನ್ನು ಹರ್ಯಾಣದ 'ಸೂಪರ್ 100 ಕಾರ್ಯಕ್ರಮ' ಅಡಿಯಲ್ಲಿ ಘೋಷಣೆ ಮಾಡಿದ್ದಾರೆ.

* ಹೊಸ ಶಿಕ್ಷಣ ನೀತಿ NEP 2020 ರ ಪ್ರಕಾರ, ಹರಿಯಾಣ ರಾಜ್ಯವು ಸಂಸ್ಥೆಗಳನ್ನು ಸ್ಥಾಪನೆ ಮಾಡುತ್ತಿದೆ, ಈ ಸಂಸ್ಥೆಗಳು ಸ್ನಾತಕೋತ್ತರ ಹಂತದವರೆಗಿನ ಶಿಕ್ಷಣವನ್ನು ನೀಡುತ್ತವೆ ಎಂದು ತಿಳಿಸಿದ್ದಾರೆ, ಪ್ರಾರಂಭದಲ್ಲಿ ಈ ಯೋಜನೆಯನ್ನು 4 ವಿಶ್ವವಿದ್ಯಾಲಯಗಳಲ್ಲಿ ಆರಂಭಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

* ಹರಿಯಾಣ ರಾಜ್ಯ ಸರ್ಕಾರವು ಆನ್‌ಲೈನ್ ಶಿಕ್ಷಕರ ವರ್ಗಾವಣೆ ನೀತಿಯನ್ನು NEP 2020 ಅಡಿಯಲ್ಲಿ ಪ್ರಾರಂಭಿಸಿದೆ, ಇದರಿಂದಾಗಿ ಶೇ. 90 ರಷ್ಟು ಶಿಕ್ಷಕರು ತೃಪ್ತರಾಗಿದ್ದಾರೆ ಎಂದು ತಿಳಿದು ಬಂದಿದೆ.

* ರಾಷ್ಟ್ರೀಯ ಶಿಕ್ಷಣ ನೀತಿ (NEP) 2020: ಶಿಕ್ಷಣ ಸಚಿವಾಲಯವು 21 ನೇ ಶತಮಾನದ ಶಿಕ್ಷಣದ ಅಗತ್ಯಗಳನ್ನು ಪೂರೈಸಲು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಗುರಿಯನ್ನು ಘೋಷಣೆ ಮಾಡಿದೆ.

## 14 ವರ್ಷಗಳ ನಂತರ ಬೆಂಕಿಪೊಟ್ಟಣದ ಬೆಲೆ ಏರಿಕೆ



* ಇದೇ ಡಿಸೆಂಬರ್. 1ರಿಂದ ಅನ್ವಯ ಆಗುವಂತೆ ಬೆಂಕಿಪೊಟ್ಟಣದ ಬೆಲೆಯು 2 ರೂ.ಗೆ ಏರಿಕೆಯಾಗಲಿದೆ, ಸದ್ಯ ಬೆಂಕಿಪೊಟ್ಟಣದ ಬೆಲೆ 1 ರೂಪಾಯಿ ಇದೆ.

* ಪ್ರಸ್ತುತ ಬೆಂಕಿಕಡ್ಡಿ ಉತ್ಪಾದನೆಯ ವೆಚ್ಚವು ಹೆಚ್ಚಾಗಿರುವ

ಹಿನ್ನಲೆಯಿಂದಾಗಿ ಬೆಂಕಿಪೊಟ್ಟಣ ಉತ್ಪಾದನಾ ಕಂಪನಿಗಳು ಬೆಲೆ ಏರಿಕೆಗೆ ಸಿದ್ದವಾಗಿವೆ.

* ಇದಕ್ಕೂ ಮೊದಲು 2007 ರಲ್ಲಿ ಬೆಂಕಿಪೊಟ್ಟಣದ ಬೆಲೆಯನ್ನು 50 ಪೈಸೆಯಿಂದ 1 ರೂ.ಗೆ ಏರಿಕೆ ಮಾಡಲಾಗಿತ್ತು.

* ಈ ಮೊದಲು 1 ರೂ. ಬೆಲೆಯ ಬೆಂಕಿಪೊಟ್ಟಣದಲ್ಲಿ 36 ಬೆಂಕಿಕಡ್ಡಿಗಳು ಲಭ್ಯವಿದ್ದವು, ಇದೀಗ 2 ರೂ. ಬೆಲೆಯ ಬೆಂಕಿ ಪೊಟ್ಟಣದಲ್ಲಿ 50 ಬೆಂಕಿಕಡ್ಡಿಗಳು ಲಭ್ಯವಾಗಲಿವೆ ಎಂದು ಬೆಂಕಿಪೊಟ್ಟಣ ಉತ್ಪಾದನಾ ಕಂಪನಿಗಳು ತಿಳಿಸಿವೆ.

## ಹಾಫ್ ಮ್ಯಾರಥಾನ್ ನ ಮಹಿಳಾ ವಿಭಾಗದಲ್ಲಿ ವಿಶ್ವದಾಖಲೆ ಬರೆದ ಲೆಟೆಸೆನ್‌ಬೆಟ್ ಗಿಡಿ




* ಪ್ರಪ್ರಥಮ ಬಾರಿ ಹಾಫ್ ಮ್ಯಾರಥಾನ್ ನಲ್ಲಿ ಭಾಗಿಯಾದ ಇಥಿಯೋಪಿಯಾದ ಲೆಟೆಸೆನ್‌ಬೆಟ್ ಗಿಡಿ ಮಹಿಳಾ ವಿಭಾಗದ ವಿಶ್ವದಾಖಲೆಯನ್ನು ಬರೆದು ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

* ಇಥಿಯೋಪಿಯಾದ ಲೆಟೆಸೆನ್‌ಬೆಟ್ ಗಿಡಿ ಅವರು ವೆಲೆನ್ಸಿಯಾ ಚಾಂಪಿಯನ್‌ಷಿಪ್‌ನಲ್ಲಿ 1 ಘಂಟೆ 2 ನಿಮಿಷ 52 ಸೆಕೆಂಡುಗಳಲ್ಲಿ ಗುರಿಯನ್ನು ತಲುಪಿದ್ದಾರೆ.

* ಈ ಹಿಂದೆ ಇದೇ ವರ್ಷದ ಏಪ್ರಿಲ್‌ನಲ್ಲಿ ಕೆನ್ಯಾದ ರೂಥ್ ಚೆಪನ್‌ಗೆಟಿಚ್ ಅವರು ದಾಖಲೆಯನ್ನು ನಿರ್ಮಿಸಿದ್ದರು.

* ಪ್ರಸ್ತುತ ಕೆನ್ಯಾದ ರೂಥ್ ಚೆಪನ್‌ಗೆಟಿಚ್ ಅವರು 5000 ಮೀ. ಹಾಗೂ 10,000 ಮೀ. ಓಟದಲ್ಲಿ ವಿಶ್ವ ದಾಖಲೆಯನ್ನು ಹೊಂದಿದ್ದಾರೆ.

## 'ವಿಕ್ರಾಂತ್' ಯುದ್ಧನೌಕೆಯ ಪ್ರಯೋಗಾರ್ಥ ಸಮುದ್ರ ಸಂಚಾರ ಆರಂಭ



* ಸ್ವದೇಶಿ ನಿರ್ಮಿತ ಮೊದಲ ವಿಮಾನವಾಹಕ ಯುದ್ಧನೌಕೆಯು ವಿಕ್ರಾಂತ್ ಸಮುದ್ರದಲ್ಲಿ ತನ್ನ 2 ನೇ ಪ್ರಯೋಗಾರ್ಥ ಸಮುದ್ರ ಸಂಚಾರವನ್ನು ಪ್ರಾರಂಭಿಸಿದೆ.

* ಈ ವಿಮಾನವಾಹಕ ಯುದ್ಧನೌಕೆಯು ವಿಕ್ರಾಂತ್ ದೇಶದ ಅತಿದೊಡ್ಡ ಯುದ್ಧನೌಕೆ ಇದಾಗಿದೆ, ಮುಂಬರುವ ಆಗಸ್ಟ್ ತಿಂಗಳಿನ ಸಮಯಕ್ಕೆ ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲಿದೆ, ಇದು 40,000 ಟನ್ ತೂಕದ ವಿಮಾನವಾಹಕ ಯುದ್ಧನೌಕೆಯಾಗಿದೆ, ಈ ಮೊದಲು ವಿಕ್ರಾಂತ್ ಯುದ್ಧನೌಕೆಯು ಈ ಹಿಂದೆಆಗಸ್ಟ್‌ನಲ್ಲಿ 5 ದಿನಗಳ ಕಾಲ ತನ್ನ ಮೊದಲ ಪ್ರಯೋಗಾರ್ಥ ಸಮುದ್ರ ಸಂಚಾರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

* ಈ ವಿಕ್ರಾಂತ್ ಯುದ್ಧನೌಕೆಯು ಕೇರಳದ ಕೊಚ್ಚಿಯಿಂದ ತನ್ನ ಪ್ರಯಾಣ ಬೆಳೆಸಿದೆ ಎಂದು ನೌಕಾಪಡೆಯ ಅಧಿಕಾರಿ ಮಾಹಿತಿ ನೀಡಿದ್ದಾರೆ.

## ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಗೆ ಹಾಸನದ ಮಹಿಳೆ



* ಪ್ರಸ್ತುತ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಗೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಬೆಟ್ಟಸಾತೇನಹಳ್ಳಿ ಗ್ರಾಮದ ಎಂ.ಬಿ.ಪ್ರೀತಿ ಷಣ್ಮುಖ ಅವರು ಆಯ್ಕೆಯಾಗಿದ್ದಾರೆ.

* ಎಂ.ಬಿ.ಪ್ರೀತಿ ಷಣ್ಮುಖ ಅವರು ಸುಮಾರು 8 ವರ್ಷಗಳಿಂದ ಅವರು ಭಾರತೀಯ ಸೇನೆಯಲ್ಲಿ ಕಮಾಂಡೆಂಟ್ ಆಗಿ ದೇಶ ಸೇವೆ ಮಾಡುತ್ತಿದ್ದಾರೆ.

* ಈ ಎಂ.ಬಿ.ಪ್ರೀತಿ ಷಣ್ಮುಖ ಅವರು ಸೇನೆ ನಡೆಸುವ ರೈಫಲ್ ಶೂಟಿಂಗ್ ಆಯ್ಕೆ ಪರೀಕ್ಷೆಯಲ್ಲಿ ಅತ್ಯುತ್ತಮ ಪ್ರದರ್ಶನ ಪ್ರದರ್ಶಿಸಿ ಶಾಂತಿಪಾಲನಾ ಪಡೆಯಲ್ಲಿ ಕಾರ್ಯನಿರ್ವಹಿಸಲು ಅರ್ಹತೆಯನ್ನು ಪಡೆದುಕೊಂಡಿದ್ದಾರೆ.

## ಭಾರತ ಶ್ರೀಲಂಕಾ ನೌಕಾಪಡೆಗಳ ಜಂಟಿ ಸಮರಾಭ್ಯಾಸ



* ಪ್ರಸ್ತುತ ದ್ವಿಪಕ್ಷೀಯ ರಕ್ಷಣಾ ಒಪ್ಪಂದದಿಂದಾಗಿ ಭಾರತದ 6 ಹಡಗುಗಳು ಶ್ರೀಲಂಕಾ ದೇಶಕ್ಕೆ ತಲುಪಿವೆ, ಉಭಯ ದೇಶಗಳ ನೌಕಾಪಡೆಗಳು ಜಂಟಿ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳಲಿವೆ.

* ಭಾರತ ಶ್ರೀಲಂಕಾ ನೌಕಾಪಡೆಗಳ ಜಂಟಿ ಸಮರಾಭ್ಯಾಸವು 4 ದಿನಗಳವರೆಗೆ ನಡೆಯಲಿದೆ, ಇದರಿಂದಾಗಿ ಉಭಯ ದೇಶಗಳ ರಕ್ಷಣಾ ಸಹಕಾರ ಇನ್ನು ಉತ್ತಮಗೊಳ್ಳಲಿದೆ ಎಂದು ಭಾರತೀಯ ವಿದೇಶಾಂಗ ಆಯುಕ್ತರು ತಮ್ಮ ಅಭಿಪ್ರಾಯವನ್ನು ಹೊರಹಾಕಿದ್ದಾರೆ.

* ಈ ನೌಕಾಪಡೆಯ ಜಂಟಿ ಸಮರಾಭ್ಯಾಸದಿಂದ ಉಭಯ ದೇಶಗಳ ಸೌಹಾರ್ದ ಸಂಬಂಧವು ಇನ್ನಷ್ಟು ಬಲಿಷ್ಠವಾಗಲಿದೆ, ಹಾಗೂ ತರಬೇತಿ ಪಡೆದಿರುವ ಯುವ ಅಧಿಕಾರಿಗಳನ್ನು ಗಡಿ ಭಾಗಕ್ಕೆ ನಿಯೋಜನೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಅಫ್ಘಾನಿಸ್ತಾನದಲ್ಲಿ ತೀವ್ರ ಆಹಾರ ಸಮಸ್ಯೆ ಎಂದ ವಿಶ್ವಸಂಸ್ಥೆ




* ಪ್ರಸ್ತುತ ಅಫ್ಘಾನಿಸ್ತಾನ ದೇಶದಲ್ಲಿ ಇದೇ ಚಳಿಗಾಲದ ಸಮಯಕ್ಕೆ ಈ ದೇಶದಲ್ಲಿ 2.2 ಕೋಟಿಗೂ ಅಧಿಕ ಜನರು ತೀವ್ರ ಆಹಾರ ಸಮಸ್ಯೆ ಎದುರಿಸಲಿದ್ದಾರೆ ಎಂದು ವಿಶ್ವಸಂಸ್ಥೆಯ ಆಹಾರ ಕಾರ್ಯಕ್ರಮದ ಕಾರ್ಯನಿರ್ವಾಹಕ ನಿರ್ದೇಶಕ ಡೇವಿಡ್ ಬೀಸ್ಲೆ ಅವರು ಮಾಹಿತಿಯನ್ನು ಬಹಿರಂಗ ಪಡಿಸಿದ್ದಾರೆ.

* ಸದ್ಯ ಯೆಮೆನ್ ಅಥವಾ ಸಿರಿಯಾ ದೇಶವು ಎದುರಿಸುತ್ತಿರುವ ಮಾನವೀಯ ಬಿಕ್ಕಟ್ಟಿಗಿಂತ ದೊಡ್ಡ ಬಿಕ್ಕಟ್ಟು ಅಫ್ಘಾನಿಸ್ತಾನ ದೇಶದಲ್ಲಿ ಎದುರಾಗಿದೆ, ಪ್ರಸ್ತುತ ಕಾಂಗೋದಲ್ಲಿ ಉಂಟಾಗಿರುವ ಆಹಾರ ಭದ್ರತೆಯ ಬಿಕ್ಕಟ್ಟಿಗಿಂತಲೂ ಅಫ್ಘಾನಿಸ್ತಾನ ದೇಶದಲ್ಲಿ ಭೀಕರ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಅಫ್ಘಾನಿಸ್ತಾನದಲ್ಲಿ ಎದುರಾಗುತ್ತಿರುವ ಆಹಾರ ಕೊರತೆ ಬಗ್ಗೆ ತುರ್ತು ಕ್ರಮ ಕೈಗೊಳ್ಳದಿದ್ದರೆ, ಆ ದೇಶದಲ್ಲಿನ ಮಕ್ಕಳು ಹಾಗೂ ಲಕ್ಷಾಂತರ ಪ್ರಜೆಗಳು ಹಸಿವಿನಿಂದ ಸಾಯುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆಯ ಆಹಾರ ಕಾರ್ಯಕ್ರಮದ ಕಾರ್ಯನಿರ್ವಾಹಕ ನಿರ್ದೇಶಕ ಡೇವಿಡ್ ಬೀಸ್ಲೆ ಅವರು ದುಬೈನಲ್ಲಿ ರಾಯಿಟರ್ಸ್ ಸುದ್ದಿ ವಾಹಿನಿಯೊಂದಿಗೆ ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

* ಅಫ್ಘಾನಿಸ್ತಾನ ಒಟ್ಟಾರೆ 3.9 ಕೋಟಿ ಜನಸಂಖ್ಯೆಯನ್ನು ಹೊಂದಿದೆ, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಅಂದರೆ 2.2 ಕೋಟಿಗಳಷ್ಟು ಜನರು ತೀವ್ರ ಆಹಾರ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

## 'ಪ್ರಧಾನಿ ಮೋದಿ'ಯಿಂದ ಆರೋಗ್ಯ ಕ್ಷೇತ್ರದ ಮೂಲಸೌಲಭ್ಯ ಬೃಹತ್ ಯೋಜನೆಗೆ ಚಾಲನೆ



* ಪ್ರಧಾನಿ ಮೋದಿ ಅವರು 'ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲ ಸೌಕರ್ಯ ಮಿಷನ್'ಗೆ ಚಾಲನೆ ನೀಡಿದ್ದಾರೆ, ಪ್ರಸ್ತುತ ಇದು ದೇಶದಲ್ಲಿ ಬೃಹತ್ ಪ್ರಮಾಣದ ಆರೋಗ್ಯ ಮೂಲಸೌಲಭ್ಯ ಒದಗಿಸುವ ಅತೀ ದೊಡ್ಡ ಯೋಜನೆಯಾಗಿದೆ ಎಂದು ತಿಳಿಸಿದರು.

* ಪ್ರಸ್ತುತ ಚಾಲನೆಯಲ್ಲಿರುವ ರಾಷ್ಟ್ರೀಯ ಆರೋಗ್ಯ ಮಿಷನ್ 'ಗೆ ಇದು ಹೆಚ್ಚುವರಿಯಾಗಿ ಅನುಷ್ಠಾನಗೊಳ್ಳುತ್ತಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ನಗರ ಹಾಗೂ ಗ್ರಾಮೀಣ ಭಾಗದಲ್ಲಿನ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ವಿಭಾಗದಲ್ಲಿ ಪ್ರಮುಖ ಆರೈಕೆ, ಹಾಗೂ ಪ್ರಾಥಮಿಕ ಆರೈಕೆಯ ಸೌಲಭ್ಯಗಳ ಮಧ್ಯೆ ಇರುವ ವ್ಯತ್ಯಾಸವನ್ನು ಕಡಿಮಾಡಲು ಈ ಯೋಜನೆಯು ಸಹಾಯ ಮಾಡಲಿದೆ ಎಂದಿದ್ದಾರೆ.

* ಈ ಯೋಜನೆಯು 10 ಪ್ರಮುಖ ರಾಜ್ಯಗಳಲ್ಲಿನ 17,788 ಗ್ರಾಮೀಣ ಆರೋಗ್ಯ ಮತ್ತು ಕಲ್ಯಾಣ ಕೇಂದ್ರಗಳಿಗೆ ಸಹಾಯ ನೀಡಲಿದೆ, ಹಾಗೂ ಉಳಿದಿರುವ ಎಲ್ಲ ರಾಜ್ಯಗಳಲ್ಲಿನ 11,024 ನಗರಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳನ್ನು ಪ್ರಾರಂಭಿಸಲು ಸಹಾಯ ಮಾಡಲಿದೆ.

* ಪ್ರಸ್ತುತ 5 ಲಕ್ಷ ಜನಸಂಖ್ಯೆಗಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ದೇಶದ ಎಲ್ಲಾ ಜಿಲ್ಲೆಗಳಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ಯೋಜನೆಯು ಪ್ರತ್ಯೇಕ ವಿಭಾಗಗಳ ಮೂಲಕ ಪ್ರಮುಖ ಆರೈಕೆ ಸೌಲಭ್ಯಗಳು ಲಭ್ಯವಾಗಲಿವೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳನ್ನು ಸ್ಥಾಪನೆ ಮಾಡಲಾಗುತ್ತದೆ.

## ನಟಿ ಕಂಗನಾಗೆ 4ನೇ ರಾಷ್ಟ್ರೀಯ ಪ್ರಶಸ್ತಿ



* ಅತ್ಯುತ್ತಮ ನಟಿ ಎಂಬ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಬಾಲಿವುಡ್ ನಟಿ ಕಂಗನಾ ರಣಾವತ್ ಅವರು ಪಡೆದುಕೊಂಡಿದ್ದಾರೆ, ಇದು ಇವರಿಗೆ ಲಭಿಸಿರುವ 4ನೇ ರಾಷ್ಟ್ರೀಯ ಪ್ರಶಸ್ತಿಯಾಗಿದೆ.

* ಈ ಅತ್ಯುತ್ತಮ ನಟಿ ಎಂಬ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ 'ಮಣಿಕರ್ಣಿಕಾ' ಚಿತ್ರದಲ್ಲಿ 'ಕ್ವೀನ್ ಆಫ್ ಝಾನ್ಸಿ' ಹಾಗೂ 'ಪಂಗಾ' ಚಿತ್ರಗಳಲ್ಲಿನ ನಟಿಸಿರುವ ನಟನೆಗೆ ಈ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ, ಈ ಪ್ರಶಸ್ತಿಯನ್ನು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಪ್ರದಾನ ಮಾಡಿದರು.

* ಈ ಮೊದಲು ಇವರು ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ, ಅಷ್ಟೇ ಅಲ್ಲದೇ 'ಕ್ವೀನ್', 'ತನು ವೆಡ್ಸ್ ಮನು ರಿಟರ್ನ್ಸ್' ಗಾಗಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

## ವಿಶ್ವಸಂಸ್ಥೆಯ ದಿನ




* ವಿಶ್ವಸಂಸ್ಥೆಯ ದಿನವನ್ನು 1948 ರಿಂದ ಪ್ರತಿ ವರ್ಷವು ಅಕ್ಟೋಬರ್. 24 ರಂದು ಆಚರಣೆ ಮಾಡಲಾಗುತ್ತದೆ.

* ಈ ವಿಶ್ವಸಂಸ್ಥೆಯ ದಿನವು 1945 ರಲ್ಲಿ ಯುಎನ್ ಚಾರ್ಟರ್ ಜಾರಿಗೆ ಬಂದ ವಾರ್ಷಿಕೋತ್ಸವವನ್ನು ತೋರಿಸುತ್ತದೆ.

* ಯುಎನ್ ಚಾರ್ಟರ್ ಇದೊಂದು ವಿಶ್ವಸಂಸ್ಥೆಯ ಸ್ಥಾಪಕ ದಾಖಲೆಯಾಗಿದೆ, ಇದು ಜಾಗತಿಕ ಸಮಾನತೆ ಮತ್ತು ಶಾಂತಿಯುತೆಗಾಗಿ ಕಾರ್ಯ ನಿರ್ವಹಿಸುತ್ತದೆ, ವಿಶ್ವಸಂಸ್ಥೆಯನ್ನು ಅಧಿಕೃತವಾಗಿ 1945 ರಲ್ಲಿ ಸ್ಥಾಪನೆ ಮಾಡಲಾಗಿದೆ.

* 1948 ರಿಂದ ಅಕ್ಟೋಬರ್ 24 ವಿಶ್ವಸಂಸ್ಥೆಯ ದಿನವನ್ನು ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯ ಶಿಫಾರಸ್ಸಿನ ಮೇರೆಗೆ ಸದಸ್ಯ ರಾಷ್ಟ್ರಗಳು ಈ ದಿನವನ್ನು ಸಾರ್ವಜನಿಕ ರಜಾದಿನವಾಗಿ

ಆಚರಿಸುತ್ತವೆ.

* ಯುಎನ್ ಚಾರ್ಟರ್ ನ್ನು ಚೀನಾ, ಸೋವಿಯತ್ ಯೂನಿಯನ್, ಫ್ರಾನ್ಸ್, ಯುನೈಟೆಡ್ ಸ್ಟೇಟ್ಸ್ ಮತ್ತು ಯುನೈಟೆಡ್ ಕಿಂಗ್‌ಡಮ್ ಮತ್ತು ಇತರ ಸಹಿ ಮಾಡಿದ ರಾಷ್ಟ್ರಗಳು ಅನುಮೋದಿಸಿದ ನಂತರ ಅಂದರೆ 1945 ರ ಅಕ್ಟೋಬರ್. 24 ರಂದು ವಿಶ್ವಸಂಸ್ಥೆಯನ್ನು ಅಧಿಕೃತವಾಗಿ ಸ್ಥಾಪನೆ ಮಾಡಲಾಗಿದೆ.

* ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರು ಈ 'ವಿಶ್ವಸಂಸ್ಥೆ' ಎಂಬ ಹೆಸರನ್ನು ರಚಿಸಿದ್ದಾರೆ.

* ಪ್ರಸ್ತುತ ವಿಶ್ವಸಂಸ್ಥೆಯಲ್ಲಿ 193 ಸದಸ್ಯ ರಾಷ್ಟ್ರಗಳಿವೆ ಮತ್ತು ಅವುಗಳಲ್ಲಿ ಪ್ರತಿ ರಾಷ್ಟ್ರವು UN ಜನರಲ್ ಅಸೆಂಬ್ಲಿಯ ಸದಸ್ಯ ರಾಷ್ಟ್ರಗಳಾಗಿವೆ.

## 27-10-2021

### ಕೇರಳ ರಾಜ್ಯವು ಅತ್ಯಂತ ಸುಸ್ಥಿರ ಸಾರಿಗೆ ವ್ಯವಸ್ಥೆಯನ್ನು ಹೊಂದಿರುವ ನಗರ ಪ್ರಶಸ್ತಿಯನ್ನು ಪಡೆದಿದೆ



* ಪ್ರಸ್ತುತ ಕೇರಳ ರಾಜ್ಯವು 'ಅತ್ಯಂತ ಸುಸ್ಥಿರ ಸಾರಿಗೆ ವ್ಯವಸ್ಥೆಯನ್ನು ಹೊಂದಿರುವ ನಗರ ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದು ರಾಜ್ಯದ ಸಾರಿಗೆ ಸಚಿವ ಆಯಂಟನಿ ರಾಜು ಅವರು ಹೇಳಿದ್ದಾರೆ.

* ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ ಸಿಂಗ್ ಪುರಿ ಅವರು ಈ ಪ್ರಶಸ್ತಿಯನ್ನು ಇದೇ ಅಕ್ಟೋಬರ್. 29ರಂದು ದೆಹಲಿಯಲ್ಲಿ ಪ್ರದಾನ ಮಾಡಲಿದ್ದಾರೆ.

* ಕೇರಳ ಕೊಚ್ಚಿ ನಗರದಲ್ಲಿ ಸಾರಿಗೆ ಸೌಲಭ್ಯಗಳನ್ನು ವೃದ್ಧಿಸಲು ಜಾರಿಗೆ ತರಲಾಗಿರುವ ಕೊಚ್ಚಿ ಮೆಟ್ರೊ,ವಾಟರ್ ಮೆಟ್ರೊ ಹಾಗೂ ಇ ಮೊಬಿಲಿಟಿ ತರಹದ ಯೋಜನೆಗಳನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ, ಪ್ರಸ್ತುತ ಕೊಚ್ಚಿ ಓಪನ್ ಮೊಬಿಲಿಟಿ ನೆಟ್‌ವರ್ಕ್‌ನ ರಚನೆಯೂ ಪ್ರಶಸ್ತಿಯನ್ನು ಪಡೆಯಲು ಸಹಾಯವಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ದೇಶದ ಬೇರೆ ಬೇರೆ ರಾಜ್ಯಗಳು ಹಾಗೂ ಕೇಂದ್ರ ಆಡಳಿತ ಪ್ರದೇಶಗಳಲ್ಲಿನ ಸಾರಿಗೆ ಸೌಲಭ್ಯಗಳನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

### ಐಪಿಎಲ್(IPL)ಗೆ ಲಖನೌ, ಅಹಮದಾಬಾದ್ ಫ್ರಾಂಚೈಸಿ ಸೇರ್ಪಡೆ




* ಇತ್ತೀಚಿಗೆ ಐಪಿಎಲ್(IPL)ಗೆ 2 ನೂತನ ಫ್ರಾಂಚೈಸಿಗಳು ಸೇರ್ಪಡೆಯಾಗಿವೆ, ಅವುಗಳು: ಲಖನೌ ಹಾಗೂ ಅಹಮದಾಬಾದ್ ಫ್ರಾಂಚೈಸಿಗಳು.

* ಪ್ರಸ್ತುತ ಲಖನೌ ಫ್ರಾಂಚೈಸಿಯನ್ನು ಕೋಲ್ಕತ್ತ ಮೂಲದ ಉದ್ಯಮಿ ಸಂಜೀವ್ ಗೋಯೆಂಕಾ ಅವರ ಆರ್‌ಪಿ ಎಸ್‌ಜಿ ಗ್ರೂಪ್ 7,090 ಕೋಟಿ ರೂ.ಗೆ ಬಿಡ್ಡ ಪಡೆದುಕೊಂಡಿದೆ.

* ಅಂತರರಾಷ್ಟ್ರೀಯ ಈಕ್ವಿಟಿ ಹೂಡಿಕೆ ಸಂಸ್ಥೆ ಸಿವಿಸಿ ಕ್ಯಾಪಿಟಲ್ 5,625 ಕೋಟಿ ರೂ.ಗೆ ಅಹಮದಾಬಾದ್ ಫ್ರಾಂಚೈಸಿಯ ಬಿಡ್ ನ್ನು ಪಡೆದುಕೊಂಡಿದೆ.

* ಬಿಸಿಸಿಐ(BCCI) ಈ ಫ್ರಾಂಚೈಸಿಗಳ ಮೂಲಕ ಒಟ್ಟಾರೆ 10,000 ಕೋಟಿ ರೂ. ಸಂಗ್ರಹಿಸುವ ನಿರೀಕ್ಷೆಯನ್ನು ಹೊಂದಿತ್ತು, ಆದರೆ ಇದೀಗ ಈ ಫ್ರಾಂಚೈಸಿಗಳಿಂದ 12,715 ಕೋಟಿ ರೂ. ಸಂಗ್ರಹವಾಗಿದೆ.

* IPL 2022 ರಲ್ಲಿ ಈ ಎರಡು ಫ್ರಾಂಚೈಸಿಗಳು ಪಾಲ್ಗೊಳ್ಳಲಿವೆ.

### ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಪಡೆದ ಕನ್ನಡದ 'ಅಕ್ಷಿ' ಚಿತ್ರ




* ಪ್ರಸ್ತುತ 67 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಕನ್ನಡ ಭಾಷೆಯ ಮನೋಜ್ ಕುಮಾರ್ ನಿರ್ದೇಶಕದ 'ಅಕ್ಷಿ' ಚಲನ ಚಿತ್ರವು ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ.

* ಅಷ್ಟೇ ಅಲ್ಲದೇ 'ಅವನೇ ಶ್ರೀಮನ್ನಾರಾಯಣ' ಚಿತ್ರದಲ್ಲಿನ ಸಾಹಸ ನಿರ್ದೇಶನಕ್ಕಾಗಿ ವಿಕ್ರಮ್ ಮೋರ್ ಅವರಿಗೆ ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿ ಲಭಿಸಿದೆ, ಇವರು ಸತತ 2 ನೇ ಬಾರಿಗೆ ರಾಷ್ಟ್ರಪ್ರಶಸ್ತಿ ಪಡೆದಕೊಂಡಿದ್ದಾರೆ, ಈ ಬಾರಿ ರಾಷ್ಟ್ರೀಯ ಪ್ರಶಸ್ತಿಗಳನ್ನೂ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಪ್ರಧಾನ ಮಾಡಿದರು.

### ಮಾಜಿ ಅಧ್ಯಕ್ಷ ರೋಹ್ ಟೇ ವೂ ನಿಧನ



* ಪ್ರಸ್ತುತ ದಕ್ಷಿಣ ಕೊರಿಯಾ ದೇಶದ ಮಾಜಿ ಅಧ್ಯಕ್ಷ ರೋಹ್ ಟೇ ವೂ ಅವರು ಅನಾರೋಗ್ಯದ ಕಾರಣದಿಂದಾಗಿ ತಮ್ಮ 88 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಮಾಜಿ ಅಧ್ಯಕ್ಷ ರೋಹ್ ಟೇ ವೂ ಅವರು 1979 ರ ಮಿಲಿಟರಿ ದಂಗೆಯನ್ನು ಬೆಂಬಲಿಸಿದ್ದರು, ಅಷ್ಟೇ ಅಲ್ಲದೇ ಇವರು ಸೇನಾ ವಿಭಾಗವನ್ನು ಮುಂದಾಳತ್ವವನ್ನು ವಹಿಸಿಕೊಂಡಿದ್ದರು.

* ಈ ಹಿಂದೆ 1987 ರಲ್ಲಿ ದಕ್ಷಿಣ ಕೊರಿಯಾ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಪರ ದೊಡ್ಡ ಪ್ರಮಾಣದ ದಂಗೆಗಳು ನಡೆದವು, ಈ ಹಿನ್ನಲೆಯಿಂದಾಗಿರೋಹ್ ಮತ್ತು ಚುನ್ ಅವರು ಅಧ್ಯಕ್ಷೀಯ ಸ್ಥಾನದ ಚುನಾವಣೆ ಪಾಲ್ಗೊಂಡರು, ಈ ಚುನಾವಣೆಯಲ್ಲಿ ರೋಹ್ ಅಧ್ಯಕ್ಷರಾಗಿ ಆಯ್ಕೆಯಾಗಿ ಅಧಿಕಾರವನ್ನು ವಹಿಸಿಕೊಂಡರು.

## ರಾಜ್ಯ ಸರ್ಕಾರದ ಆದೇಶದ ಮೇರೆಗೆ 'ಅನುಗ್ರಹ' ಯೋಜನೆ ಮುಂದುವರಿಕೆ



* ಕರ್ನಾಟಕ ರಾಜ್ಯ ಸರ್ಕಾರದ ಆದೇಶದ ಮೇರೆಗೆ 'ಅನುಗ್ರಹ' ಯೋಜನೆ ಮುಂದುವರೆದಿದೆ, ಈ ಯೋಜನೆ ಅಡಿಯಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರುಗಳಿಗೆ ಪರಿಹಾರ ನೀಡುವ ಯೋಜನೆ ಇದಾಗಿದೆ, ಇದೀಗ ಈ ಯೋಜನೆಯನ್ನು ಮುಂದುವರಿಸಲು ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ ಎಂದು ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಅವರು ಹೇಳಿದ್ದಾರೆ.

* ಈ 'ಅನುಗ್ರಹ' ಯೋಜನೆ ಅಡಿಯಲ್ಲಿ ಆಕಸ್ಮಿಕವಾಗಿ ಮೃತಪಟ ಕುರಿಗಳಿಗೆ 5 ಸಾವಿರ ರೂ. ಮತ್ತು ಕುರಿ ಮರಿಗಳಿಗೆ 2,500 ರೂ. ಹಾಗೂ ದನಗಳಿಗೆ 10 ಸಾವಿರ ರೂ. ಒದಗಿಸಲು ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

## ವರ್ಷಕ್ಕೆ ಎರಡು ಬಾರಿ ಸಿಇಟಿ




* ಪ್ರಸ್ತುತ ಶಿಕ್ಷಕರ ನೇಮಕಾತಿಗಾಗಿ ನಡೆಯುವ ಸಿಇಟಿ ಪರೀಕ್ಷೆಯಲ್ಲಿ ಅಗತ್ಯವಿರುವಷ್ಟು ಸಂಖ್ಯೆಯ ಶಿಕ್ಷಕರು ಪಾಸಾಗುತ್ತಿಲ್ಲ. ಈ ಕಾರಣದಿಂದಾಗಿ ವರ್ಷಕ್ಕೆ ಎರಡು ಬಾರಿ ಸಿಇಟಿ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಮಾಹಿತಿ ನೀಡಿದ್ದಾರೆ.

* ಈ ಹಿಂದೆ ಸಿಇಟಿ ಪರೀಕ್ಷೆ ನಡೆಸಿದಾಗ ಕೇವಲ 3 ಸಾವಿರ ಶಿಕ್ಷಕರು ಮಾತ್ರ ಈ ಪರೀಕ್ಷೆಯಲ್ಲಿ ಉತೀರ್ಣರಾಗಿದ್ದರು, ಆದರೆ ಆ ಸಮಯದಲ್ಲಿ ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಶಿಕ್ಷಕರ ಅಗತ್ಯವಿತ್ತು ಎಂದು ತಿಳಿಸಿದ್ದರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಈ ವಿಷಯವನ್ನು ಪರಿಗಣಿಸಿ ಇನ್ನು ಮುಂದೆ ವರ್ಷದಲ್ಲಿ ಎರಡು ಬಾರಿ ಸಿಇಟಿ ಪರೀಕ್ಷೆ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

* ಇದೀಗ ರಾಜ್ಯದಲ್ಲಿ ಸುಮಾರು 5 ಸಾವಿರ ಶಿಕ್ಷಕರ ನೇಮಕಾತಿ ನಡೆಯಲಿದೆ, ಈ ಎಲ್ಲ ಹುದ್ದೆಗಳಿಗೆ ಬೇಕಾಗಿರುವ ಶಿಕ್ಷಕರು ಉತ್ತೀರ್ಣರಾಗುವರೆಗೂ ಸಿಇಟಿ ಪರೀಕ್ಷೆಯನ್ನು ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

* ಅಷ್ಟೇ ಅಲ್ಲದೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು(NEP) ಬರುವ ವರ್ಷದಿಂದಲೇ ಜಾರಿಗೊಳಿಸಲು ಚಿಂತನೆಯನ್ನು ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## '4' ವರ್ಷದೊಳಗಿನ ಮಕ್ಕಳನ್ನು ಮೋಟಾರ್ ಸೈಕಲ್ ನಲ್ಲಿ ಕರೆದೊಯ್ಯಲು ಹೊಸ ಸುರಕ್ಷತಾ ಮಾರ್ಗಸೂಚಿ ಬಿಡುಗಡೆ



* ಪ್ರಸ್ತುತ 4 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಮೋಟಾರ್ ಸೈಕಲ್‌ನಲ್ಲಿ ಕರೆದೊಯ್ಯಲು ಹೊಸ ಸುರಕ್ಷತಾ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ.

* ಈ ಹೊಸ ಸುರಕ್ಷತಾ ಮಾರ್ಗಸೂಚಿಯು ಮೋಟಾರ್ ಸೈಕಲ್‌ನ ಹಿಂದಿನ ಸೀಟಿನಲ್ಲಿ ಕುಳಿತು ಪ್ರಯಾಣಿಸುವ 9 ತಿಂಗಳಿಂದ 4 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಕ್ರ್ಯಾಶ್ ಹೆಲ್ಮೆಟ್ ಧರಿಸಿರಬೇಕು ಎಂದು ತಿಳಿಸಿದೆ, ಅಷ್ಟೇ ಅಲ್ಲದೇ ಆ ಸಂಧರ್ಭದಲ್ಲಿ ಮೋಟಾರ್ ಸೈಕಲ್‌ನ ವೇಗವು ಗಂಟೆಗೆ 40 ಕಿ.ಮೀ.ಗಿಂತ ಜಾಸ್ತಿ ಇರಬಾರದು ಎಂದು ತಿಳಿಸಿದೆ.

## ಪಶ್ಚಿಮ ಬಂಗಾಳ ಸರ್ಕಾರವು ರಾಜ್ಯದಲ್ಲಿ ಒಂದು ವರ್ಷದವರೆಗೆ ಗುಟ್ಕಾ ಪಾನ್ ಮಸಾಲವನ್ನು ತಯಾರಿಕೆ, ಮಾರಾಟ ಮಾಡುವುದನ್ನು ನಿಷೇಧಿಸಿದೆ




* ಪ್ರಸ್ತುತ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇದೀಗ ಒಂದು ವರ್ಷದವರೆಗೆ ಗುಟ್ಕಾ ಪಾನ್ ಮಸಾಲವನ್ನು ತಯಾರಿಕೆ, ಮಾರಾಟ ಮಾಡುವುದನ್ನು ನಿಷೇಧಿಸಿದೆ.

* ಕೋವಿಡ್ 19 ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಿಂದಾಗಿ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರವು ಈ ಆದೇಶ ಹೊರಡಿಸಿದೆ.

* ಈ ಒಂದು ವರ್ಷದವರೆಗೆ ಗುಟ್ಕಾ ಪಾನ್ ಮಸಾಲವನ್ನು ತಯಾರಿಕೆ, ಮಾರಾಟ ಮಾಡುವುದನ್ನು ನಿಷೇಧಿಸಿದ ಆದೇಶವು ಇದೇ 2021 ರ ನವೆಂಬರ್. 7 ರಿಂದ ಜಾರಿಗೆ ಬರಲಿದೆ ಎಂದು ಪಶ್ಚಿಮ ಬಂಗಾಳ ಸರ್ಕಾರ ತಿಳಿಸಿದೆ.

* ಪಶ್ಚಿಮ ಬಂಗಾಳ ರಾಜ್ಯ ಆರೋಗ್ಯ ಇಲಾಖೆಯ ಆಹಾರ ಸುರಕ್ಷತಾ ಆಯೋಗವು ಗುಟ್ಕಾ ಮತ್ತು ತಂಬಾಕು ಉತ್ಪನ್ನಗಳ ಉತ್ಪಾದನೆ, ಹಾಗೂ ಮಾರಾಟ ಮಾಡಲು ನಿಷೇಧವನ್ನು ಹೇರಿದೆ.

* ಗುಟ್ಕಾ ಹಾಗೂ ಪಾನ್ ಮಸಾಲ ಉತ್ಪನ್ನಗಳ ತಯಾರಿಕೆಯಲ್ಲಿ ತಂಬಾಕು

ಹಾಗೂ ನಿಕೋಟಿನ್ ಪದಾರ್ಥಗಳ ಬಳಕೆಯನ್ನು ಅತೀ ಹೆಚ್ಚಾಗಿ ಕಂಡು ಬರುತ್ತಿದೆ, ಈ ಹಿನ್ನಲೆಯಿಂದಾಗಿ ಜನರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು, ದೇಶಾದ್ಯಂತ ಕೆಲ ರಾಜ್ಯಗಳು ನಿಕೋಟಿನ್ ಹೊಂದಿರುವ ಉತ್ಪನ್ನಗಳನ್ನು ನಿಷೇಧಿಸಿವೆ.

* ಈ ಹಿಂದೆ 2013 ರಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರವು ಒಂದು ವರ್ಷದ ಅವಧಿಗೆ ಪಾನ್ ಮಸಾಲ, ಗುಟ್ಕಾ, ಖೈನಿಗೆ ನಿಷೇದ ಹೇರಿತ್ತು.

## ಭಾರತ ಸ್ವೀಡನ್ ದೇಶಗಳಿಂದ 8 ನೇ ಆವಿಷ್ಕಾರ ದಿನವನ್ನು ಆಚರಣೆ



* ಪ್ರಸ್ತುತ ಭಾರತ ಹಾಗೂ ಸ್ವೀಡನ್ ದೇಶಗಳು ಅಕ್ಟೋಬರ್. 26 ರಂದು 8 ನೇ ಆವಿಷ್ಕಾರ ದಿನವನ್ನು ಆಚರಣೆ ಮಾಡಿದವು, ಅಷ್ಟೇ ಅಲ್ಲದೇ ಇದೇ ಸಂಧರ್ಭದಲ್ಲಿ ವರ್ಚುಲ್ ಸಭೆಯ ಮೂಲಕ ಈ ರಾಷ್ಟ್ರಗಳು ಹವಾಮಾನ ಬದಲಾವಣೆಯ ಹಾಗೂ ಹಸಿರು ಪರಿವರ್ತನೆಯನ್ನು ತರಲು ಅಗತ್ಯವಿರುವ ಪರಿಹಾರಗಳ ಮಾಹಿತಿಯನ್ನು ಚರ್ಚಿಸಿದರು.

* ಉಭಯ ದೇಶಗಳು ಈ ಅಧಿವೇಶನದಲ್ಲಿ ಹವಾಮಾನ ಸ್ನೇಹಿ ಪರಿಹಾರಗಳನ್ನು ಒದಗಿಸುವ ನಿಟ್ಟಿನಲ್ಲಿ ಡಿಜಿಟಲ್ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯನ್ನು ಅಳವಡಿಕೆ ಮಾಡುವ ವಿಚಾರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡಿದ್ದಾರೆ.

* ಎರಡು ದೇಶಗಳು ಈ ಆನ್‌ಲೈನ್ ಈವೆಂಟ್'ನ್ನು 'ಭಾರತ ಸ್ವೀಡನ್‌ನ ಹಸಿರು ಪರಿವರ್ತನೆಯನ್ನು ವೇಗಗೊಳಿಸುವುದು' ಎಂಬ ವಿಷಯದ ಅಡಿಯಲ್ಲಿ ನಿಯೋಜಿಸಲಾಗಿದೆ.

* ಈ ಹಿಂದೆ 1947 ರಲ್ಲಿ ಯುನೈಟೆಡ್ ಕಿಂಗ್‌ಡಮ್‌ನಿಂದ ಭಾರತದ ಸ್ವಾತಂತ್ರ್ಯವನ್ನು ಗುರುತಿಸಿದ ದೇಶಗಳಲ್ಲಿ ಸ್ವೀಡನ್ ದೇಶವು ಒಂದಾಗಿದೆ, ಈ ಎರಡು ದೇಶಗಳು 1949 ರಲ್ಲಿ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪನೆ ಮಾಡಿಕೊಂಡವು.

* ಪ್ರಸ್ತುತ ಭಾರತ ದೇಶವು ಸ್ಟಾಕ್‌ಹೋಮ್‌ನಲ್ಲಿ ರಾಯಭಾರ ಕಚೇರಿಯನ್ನು ನಿರ್ಮಿಸಿದೆ, ಹಾಗೂ ಸ್ವೀಡನ್ ದೇಶವು ನವದೆಹಲಿಯಲ್ಲಿ ರಾಯಭಾರ ಕಚೇರಿಯನ್ನು ಸ್ಥಾಪಿಸಿದೆ.

## ರಾಷ್ಟ್ರೀಯ ಮೂಲಸೌಕರ್ಯ ನಿಧಿಯನ್ನು ಆರಂಭಿಸಿದ ಸೌದಿ ಅರೇಬಿಯಾ



* ಪ್ರಸ್ತುತ ಸೌದಿ ಅರೇಬಿಯಾ ಮುಂಬರುವ ದಶಕದಲ್ಲಿ ಯೋಜನೆಗಳಲ್ಲಿ ಸುಮಾರು 200 ಬಿಲಿಯನ್ ರಿಯಾಲ್‌ಗಳನ್ನು ಹೂಡಿಕೆ ಮಾಡುವ ಸಲುವಾಗಿ 'ರಾಷ್ಟ್ರೀಯ ಮೂಲಸೌಕರ್ಯ ನಿಧಿ'ಯನ್ನು ಆರಂಭಿಸಿದೆ.

* ಸೌದಿ ಅರೇಬಿಯಾ ಆರಂಭಿಸಿರುವ ಈ ರಾಷ್ಟ್ರೀಯ ಮೂಲಸೌಕರ್ಯ ನಿಧಿಯು ನೀರು, ಸಾರಿಗೆ, ಇಂಧನ, ಶಿಕ್ಷಣ, ಆರೋಗ್ಯ, ಡಿಜಿಟಲ್ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಲಿದೆ, ಹಾಗೂ ಈ ನಿಧಿಯು ಖಾಸಗೀಕರಣವಾಗಿರುವ ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸಿನ ಸಹಾಯವನ್ನು ನೀಡಲಿದೆ ಹಾಗೂ ಹೂಡಿಕೆಗಳಿಗೆ ಅವಕಾಶಗಳನ್ನು ಒದಗಿಸಲಿದೆ, ಜೊತೆಗೆ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಲು ಸಹಾಯ ಮಾಡಲಿದೆ ಎಂದು ತಿಳಿಸಿದ್ದಾರೆ.

* ರಾಷ್ಟ್ರೀಯ ಮೂಲಸೌಕರ್ಯ ನಿಧಿಯನ್ನು ರಾಷ್ಟ್ರೀಯ ಅಭಿವೃದ್ಧಿ ನಿಧಿ (NDF) ಆರಂಭಿಸಿದೆ, 11 ಅಭಿವೃದ್ಧಿ ನಿಧಿಗಳು ಹಾಗೂ ಬ್ಯಾಂಕ್ ಗಳನ್ನು ಸೇರಿರುವ ವ್ಯವಸ್ಥೆಯನ್ನು NDF ಈ ನಿಧಿಯನ್ನು ನಿರ್ವಹಣೆ ಮಾಡಲಿದೆ.

* ಈ ಹಿಂದೆ 2017 ರಲ್ಲಿ ಸೌದಿ ಅರೇಬಿಯಾ ಅಭಿವೃದ್ಧಿ ನಿಧಿಗಳು ಹಾಗೂ ಬ್ಯಾಂಕ್‌ಗಳ ಕಾರ್ಯಕ್ಷಮತೆಯನ್ನು ವೃದ್ಧಿಸಲು ಈ ನಿಧಿಯನ್ನು ಸ್ಥಾಪನೆ ಮಾಡಲಾಗಿದೆ.

## ಜಿಯೊ ಫೋನ್ ಗಾಗಿ ಜಿಯೊ ಮತ್ತು ಗೂಗಲ್ ನಿಂದ 'ಪ್ರಗತಿ' ನೂತನ ಮೊಬೈಲ್ ಆಪರೇಟಿಂಗ್ ಸಿಸ್ಟಂ ಅಭಿವೃದ್ಧಿ




* ಭಾರತದ ಪ್ರಮುಖ ಟೆಲಿಕಾಂ ಸಂಸ್ಥೆಯಾಗಿರುವ ರಿಲಯನ್ಸ್ ಕಮ್ಯುನಿಕೇಷನ್ಸ್ ನ ಜಿಯೊ ಹಾಗೂ ಗೂಗಲ್ ಸಂಸ್ಥೆಗಳು ಜಂಟಿಯಾಗಿ ನೂತನ ಮೊಬೈಲ್ ಆಪರೇಟಿಂಗ್ ಸಿಸ್ಟಂ ಅನ್ನು ಅಭಿವೃದ್ಧಿಪಡಿಸುತ್ತಿವೆ, ಹಾಗೂ ಇದಕ್ಕೆ "ಪ್ರಗತಿ" ಎಂದು ಹೆಸರಿಸಲಾಗಿದೆ.

* ಈ ಹೊಸ ಜಿಯೊ ಫೋನ್ ದೀಪಾವಳಿ ವೇಳೆಗೆ ಮಾರುಕಟ್ಟೆಗೆ ಬರಲು ಸಜ್ಜಾಗುತ್ತಿದೆ ಎಂದು ಭಾರತೀಯ ಮೂಲದ ಗೂಗಲ್ ಸಿಇಒ ಸುಂದರ್ ಪಿಚೈ ತಿಳಿಸಿದ್ದಾರೆ.

* ನೂತನವಾಗಿ ಬಿಡುಗಡೆಯಾಗಲಿರುವ ಜಿಯೊ ಫೋನ್ ನೆಕ್ಸ್ಟ್ ಮೊಬೈಲ್ ಫೋನಿನಲ್ಲಿ ಒಟ್ಟು 10 ಪ್ರಾದೇಶಿಕ ಭಾಷೆಗಳ ಭಾಷಾಂತರ ಸವಲತ್ತು ಕಾರ್ಯವನ್ನು ಅಳವಡಿಸಲಾಗಿದೆ. ಇದರ ಸಹಾಯದಿಂದ ಭಾರತದ ಪ್ರಾದೇಶಿಕ ಭಾಷೆಯ ಜನರು ಸುಲಭವಾಗಿ ಮೊಬೈಲ್ ಅನ್ನು ಬಳಸಲು ಸಹಾಯವಾಗುವುದು ಎಂದು ಅವರು ತಿಳಿಸಿದ್ದಾರೆ.

## ಗುಡ್ ನ್ಯೂಸ್: ದೇಶದ ಮೊದಲ 'ಸ್ಕಿಲ್ ಇಂಪ್ಯಾಕ್ಟ್ ಬಾಂಡ್' ಪ್ರಾರಂಭ: 50,000 ಯುವಜನತೆಗೆ ಅನುಕೂಲ



* ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (NSDC) 'ಸ್ಕಿಲ್ ಇಂಪ್ಯಾಕ್ಟ್ ಬಾಂಡ್' ಒಂದನ್ನು ಬಿಡುಗಡೆ ಮಾಡಿದೆ.
* ಇದನ್ನು ಜಾಗತಿಕ ಪಾಲುದಾರರ ಸಹಯೋಗದೊಂದಿಗೆ ಭಾರತದಲ್ಲಿ ಕೌಶಲ್ಯಕ್ಕಾಗಿ ಮೊದಲ ಬಾರಿಗೆ ಅತಿದೊಡ್ಡ ಪ್ರಮಾಣದಲ್ಲಿ ಸ್ಥಾಪಿಸಲಾಗುತ್ತಿದೆ
* 'ಸ್ಕಿಲ್ ಇಂಪ್ಯಾಕ್ಟ್ ಬಾಂಡ್' ಒಕ್ಕೂಟವು 14.4 ಮಿಲಿಯನ್ ಡಾಲರ್ ನಿಧಿಯನ್ನು ಸಂಗ್ರಹಿಸಿದೆ, ಇದರಿಂದ ನಾಲ್ಕು ವರ್ಷಗಳಲ್ಲಿ ಭಾರತದಲ್ಲಿ 50,000 ಯುವಕರಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ.
* ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಶೇಕಡ 60 ರಷ್ಟು ಸೌಲಭ್ಯ ನೀಡುವ ಗುರಿಯನ್ನು ಇಟ್ಟುಕೊಂಡಿದೆ ಇದರಿಂದ ವಿಶೇಷವಾಗಿ ಮಹಿಳೆಯರ ಜೀವನದಲ್ಲಿ ಪರಿವರ್ತನೆಯ ಪ್ರಭಾವವನ್ನು ಬೀರುವ ಸಾಮರ್ಥ್ಯವನ್ನು ಹೊಂದಿದೆ ಎಂದು NSDC ಅಧ್ಯಕ್ಷ ಎ.ಎಂ. ನಾಯಕ್ ಹೇಳಿದರು.

# 28-10-2021

## ಗೃಹ ಸಾಲ(Home Loan) ನೀಡಲು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಮತ್ತು HDFC ಬ್ಯಾಂಕ್ ಜೊತೆಯಾಗಿವೆ



* ಪ್ರಸ್ತುತ ಸುಮಾರು 4.7 ಕೋಟಿ ಗ್ರಾಹಕರಿಗೆ ಗೃಹ ಸಾಲವನ್ನು ನೀಡಲು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (IPPB) ಮತ್ತು HDFC ಬ್ಯಾಂಕ್ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿವೆ.
* ಇದೀಗ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್, ದೇಶಾದ್ಯಂತದ ಸುಮಾರು 650 ಶಾಖೆಗಳು ಹಾಗೂ 1,36,000 ಕ್ಕೂ ಅಧಿಕ ಬ್ಯಾಂಕಿಂಗ್ ಪೋಸ್ಟ್ ಆಫೀಸ್‌ಗಳ ನೆಟ್ವರ್ಕ್'ನ್ನು ನಿಯಂತ್ರಿಸುತ್ತಿದೆ, ಅಷ್ಟೇ ಅಲ್ಲದೇ ಭಾರತದಲ್ಲಿನ ಗ್ರಾಹಕರಿಗೆ HDFC'ಯ ಗೃಹ ಸಾಲ ಸಿಗುವಂತೆ ಮಾಡುವ ಗುರಿಯನ್ನು ಹೊಂದಿದೆ.
* ಪ್ರಸ್ತುತ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಸುಮಾರು 1,90,000 ಬ್ಯಾಂಕಿಂಗ್ ಸೇವೆಯನ್ನು ಒದಗಿಸುತ್ತಿದೆ, ಅದು ಪೋಸ್ಟ್‌ಮೆನ್ ಮತ್ತು ಗ್ರಾಮೀಣ ಡಾಕ್ ಸೇವಕರ ಮೂಲಕ ವಸತಿ ಸಾಲವನ್ನು ನೀಡಲಾಗುತ್ತದೆ ಎಂದು ತಿಳಿಸಿದೆ.
* ಈ HDFC ಮತ್ತು IPPB'ನ ಪಾಲುದಾರಿಕೆಯು ಡಿಜಿಟಲ್ ಆಗಿ ಸಕ್ರಿಯಗೊಳಿಸಲಾದ ಏಜೆಂಟ್ ಬ್ಯಾಂಕಿಂಗ್ ಚಾನೆಲ್ ಮೂಲಕ ವಸತಿ ಸಾಲಗಳನ್ನು ಲಭ್ಯವಾಗುವಂತೆ ಮಾಡುವ ಗುರಿಯನ್ನು ಹೊಂದಿದೆ.
* ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (IPPB): ಇದೊಂದು ಭಾರತೀಯ ಅಂಚೆಯ ವಿಶೇಷ ವಿಭಾಗವಾಗಿದೆ, ಇದು ಅಂಚೆ ಇಲಾಖೆಯ ಅಧಿಕಾರ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಿಸುತ್ತದೆ.
* ಪ್ರಸ್ತುತ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್'ನ್ನು 2018 ರಲ್ಲಿ ಆರಂಭಿಸಲಾಗಿದೆ.

## ಆಡಿಯೋವಿಶುವಲ್‌ಹೆರಿಟೇಜ್(Audiovisual Heritage)ನ ವಿಶ್ವ ದಿನ




* ಪ್ರತಿ ವರ್ಷವು ಅಕ್ಟೋಬರ್. 27 ರಂದು ಆಡಿಯೋವಿಶುವಲ್ ಹೆರಿಟೇಜ್'ಗಾಗಿ ವಿಶ್ವ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಪ್ರಸ್ತುತ ಜನರಲ್ಲಿ ಸಾಮಾನ್ಯ ಅರಿವು ಮೂಡಿಸುವ ನಿಟ್ಟಿನಲ್ಲಿ ಶ್ರವ್ಯ ದೃಶ್ಯ ಪರಂಪರೆ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಈ ದಿನವು ಭವಿಷ್ಯದ ಪೀಳಿಗೆಗೆ ಮೌಲ್ಯಯುತವಾದ ಶ್ರವ್ಯ ದೃಶ್ಯ ಸಂಪನ್ಮೂಲಗಳನ್ನು ಸಂರಕ್ಷಿಸಲು ಮತ್ತು ಪ್ರಪಂಚದಾದ್ಯಂತ ಜನರನ್ನು ಸಕ್ರಿಯಗೊಳಿಸುತ್ತದೆ.
* 2021 ರ ಆಡಿಯೋ ವಿಶುವಲ್ ಹೆರಿಟೇಜ್ ದಿನವನ್ನು 'ನಿಮ್ಮ ಕಿಟಕಿ ಜಗತ್ತಿಗೆ' ಎಂಬ ವಿಷಯದ ಅಡಿಯಲ್ಲಿ ಆಚರಣೆ ಮಾಡಲಾಗಿದೆ.
* ಪ್ರಸ್ತುತ ಆಡಿಯೋ ವಿಶುವಲ್ ಹೆರಿಟೇಜ್ ದಿನವನ್ನು ಚಲಿಸುವ ಚಿತ್ರಗಳನ್ನು ರಕ್ಷಿಸಲು ಮತ್ತು ಸಂರಕ್ಷಿಸಲು 1980 ರಲ್ಲಿ ಶಿಫಾರಸ್ಸು ಮಾಡಲಾಗಿದೆ.
* 2005 ರ ಅಕ್ಟೋಬರ್. 27 ರಂದು ಯುನೆಸ್ಕೋ ಆಡಿಯೋ ವಿಶುವಲ್ ಹೆರಿಟೇಜ್ ದಿನವನ್ನು ಘೋಷಣೆ ಮಾಡಿದೆ.

## 'ಉಚಿತ ತೀರ್ಥ ಯಾತ್ರೆ' ಯೋಜನೆಗೆ ಅಯೋಧ್ಯೆ ಯಾತ್ರೆಯನ್ನು ಸೇರ್ಪಡೆ ಮಾಡಿದ ದೆಹಲಿ ಸರ್ಕಾರ



* ಪ್ರಸ್ತುತ ದೆಹಲಿ ಸರ್ಕಾರವು ಹಿರಿಯ ನಾಗರಿಕರಿಗಾಗಿ 'ಉಚಿತ ತೀರ್ಥಯಾತ್ರೆ' ಯೋಜನೆ ರೂಪಿಸಿದೆ, ಇದೀಗ ಆ ಯೋಜನೆಗೆ ಅಯೋಧ್ಯೆ ಯಾತ್ರೆಯನ್ನು ಕೂಡ ಸೇರಿಸಲು ದೆಹಲಿ ಸರ್ಕಾರದ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.
* ಇದೀಗ ಹಿರಿಯ ನಾಗರಿಕರಿಗಾಗಿ ದೆಹಲಿ ಸರ್ಕಾರವು 'ಮುಖ್ಯಮಂತ್ರಿ ತೀರ್ಥ ಯಾತ್ರಾ ಯೋಜನೆ'ಯನ್ನು ಆರಂಭಿಸಿದೆ, ಹಿರಿಯ ನಾಗರಿಕರು ಈ ಯೋಜನೆಯ ಅಡಿಯಲ್ಲಿ ಪುರಿ ಜಗನ್ನಾಥ, ರಾಮೇಶ್ವರಂ, ಶಿರಡಿ, ಮಥುರಾ, ಹರಿದ್ವಾರ, ತಿರುಪತಿ ಹೀಗೆ ಹಲವು ಬೇರೆ ಬೇರೆ ಯಾತ್ರಾ ಸ್ಥಳಗಳಿಗೆ ಪ್ರಯಾಣ ಬೆಳಸುವ ಪ್ರವಾಸದ ವೆಚ್ಚವನ್ನು ಸರ್ಕಾರ ಭರಿಸಲಿದೆ.
* ಪ್ರಸ್ತುತ ಇದೀಗ 35 ಸಾವಿರ ಹಿರಿಯ ನಾಗರಿಕರು ದೆಹಲಿ ಸರ್ಕಾರದ ಈ ಯೋಜನೆ ಅಡಿಯಲ್ಲಿ ಉಚಿತ ಯಾತ್ರೆಯನ್ನು ಪೂರ್ಣಗೊಳಿಸಿದ್ದಾರೆ, ಇತ್ತೀಚಿಗೆ ಈ ಯೋಜನೆಯು ಕೋವಿಡ್ 19 ಹಿನ್ನಲೆಯಿಂದಾಗಿ ಸ್ಥಗಿತವಾಗಿತ್ತು, ಇದೀಗ ದೆಹಲಿ ಸರ್ಕಾರವು ಈ

ಯೋಜನೆನ್ನು ಆರಂಭಕ್ಕೆ ಸೂಚನೆಯನ್ನು ನೀಡಿದೆ.

## 2021ನೇ ಸಾಲಿನ 'ಖೇಲ್ ರತ್ನ ಪ್ರಶಸ್ತಿ'ಗೆ 11 ಕ್ರೀಡಾಪಟುಗಳು ನಾಮನಿರ್ದೇಶನ



* ಪ್ರಸ್ತುತ 2021'ರ ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ, ಹಾಗೂ ಬೆಳ್ಳಿ ಪದಕ ವಿಜೇತ ಕುಸ್ತಿಪಟು ರವಿ ದಹಿಯಾ ಸೇರಿ ಒಟ್ಟು 11 ಕ್ರೀಡಾಪಟುಗಳನ್ನು 2021ನೇ ಸಾಲಿನ ಖೇಲ್ ರತ್ನ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ ಎಂದು ತಿಳಿದು ಬಂದಿದೆ.
* ಖೇಲ್ ರತ್ನ ಪ್ರಶಸ್ತಿಗೆ 5 ಪ್ಯಾರಾ ಅಥ್ಲೀಟ್'ಗಳು ನಾಮನಿರ್ದೇಶನವಾಗಿದ್ದಾರೆ, ಅಷ್ಟೇ ಅಲ್ಲದೇ ಅರ್ಜುನ ಪ್ರಶಸ್ತಿಗೆ 35 ಕ್ರೀಡಾಪಟುಗಳು ನಾಮನಿರ್ದೇಶನವಾಗಿದ್ದಾರೆ ಎಂದು ತಿಳಿದು ಬಂದಿದೆ.
* ಖೇಲ್ ರತ್ನ ಪ್ರಶಸ್ತಿಯನ್ನು ಅಧಿಕೃತವಾಗಿ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ಎಂದು ಕರೆಯಲಾಗುತ್ತದೆ, ಇದನ್ನು ಈ ಮೊದಲು ಕ್ರೀಡೆ ಮತ್ತು ಆಟಗಳಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಎಂದು ಕರೆಯಲಾಗುತ್ತಿತ್ತು, ಪ್ರಸ್ತುತ ಈ ಪ್ರಶಸ್ತಿಯು ಭಾರತದ ಅತ್ಯುನ್ನತ ಕ್ರೀಡಾ ಗೌರವವಾಗಿದೆ.
* ಈ ಪ್ರಶಸ್ತಿಯುನ್ನು ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ವಾರ್ಷಿಕವಾಗಿ ನೀಡಲಾಗುತ್ತದೆ.
* ಖೇಲ್ ರತ್ನ ಪ್ರಶಸ್ತಿ ಅಥವಾ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು 1992 ಸ್ಥಾಪನೆ ಮಾಡಿದ್ದಾರೆ.

## ಸಲಿಂಗಕಾಮಿ ಮಹಿಳೆಯರ ಕರ್ವಾಚೌತ್ ಜಾಹೀರಾತು ಹಿಂಪಡೆದ ಡಾಬರ್




* ಪ್ರಸ್ತುತ ಉತ್ತರ ಭಾರತೀಯರ ಕರ್ವಾಚೌತ್ ಹಬ್ಬ ಕುರಿತಾದ ಸ್ವದೇಶಿ ದಿನಬಳಕೆಯ ಉತ್ಪನ್ನ ತಯಾರಕ ಸಂಸ್ಥೆ ಡಾಬರ್ ಜಾಹೀರಾತನ್ನು ಪ್ರಕಟಿಸಿತ್ತು, ಇದೀಗ ಈ ವಿವಾದಾತ್ಮಕ ಜಾಹೀರಾತನ್ನು ಹಿಂದಕ್ಕೆ ಪಡೆದುಕೊಂಡಿದೆ, ಅಷ್ಟೇ ಅಲ್ಲದೇ ಕ್ಷಮೆ ಯಾಚಿಸಿದೆ.

* ಡಾಬರ್'ನ ಈ ಜಾಹೀರಾತಿನಲ್ಲಿ ಇಬ್ಬರು ಸಲಿಂಗಕಾಮಿ ಮಹಿಳೆಯರು ಕರ್ವಾಚೌತ್ ಹಬ್ಬ ಆಚರಣೆಯಲ್ಲಿ ಪಾಲ್ಗೊಂಡಿರುವದನ್ನು ತೋರಿಸಲಾಗಿತ್ತು.

* ಪ್ರಸ್ತುತ ವಿವಾಹಿತ ಮಹಿಳೆ ವೈವಾಹಿಕ ಬಾಂಧವ್ಯ ಮತ್ತು ಗಂಡನ ಶ್ರೇಯೋಭಿವೃದ್ಧಿಗಾಗಿ ಉತ್ತರಭಾರತದಲ್ಲಿ ಈ ಕರ್ವಾ ಚೌತ್ ಆಚರಣೆ ಮಾಡುತ್ತಾರೆ.

## ದೇಶದಲ್ಲಿ 1.5 ಲಕ್ಷ 'ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ'ಗಳು ಪ್ರಾರಂಭ




* ಪ್ರಸ್ತುತ ಕೇಂದ್ರ ಸರ್ಕಾರವು ಕ್ಯಾನ್ಸರ್, ಮಧುಮೇಹದಂತಹ ಗಂಭೀರ ಕಾಯಿಲೆಗಳ ಚಿಕಿತ್ಸೆಯನ್ನ ಇನ್ಮುಂದೆ ಬ್ಲಾಕ್ ಮಟ್ಟದ ಆಸ್ಪತ್ರೆಗಳಲ್ಲಿಯೂ ಮಾಡಲಾಗುತ್ತದೆ ಎಂದು ತಿಳಿಸಿದೆ, ಈ ಚಿಕಿತ್ಸೆಗಳಿಗಾಗಿ ಸುಮಾರು 1.5 ಲಕ್ಷ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳನ್ನ ಸ್ಥಾಪಿಸಲು ಕೇಂದ್ರವು ನಿರ್ಧರಿಸಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ತಿಳಿಸಿದ್ದಾರೆ.
* ಕೇಂದ್ರ ಸರ್ಕಾರದ ಈ ಕೇಂದ್ರಗಳ ಅಡಿಯಲ್ಲಿ ಇದೀಗ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕ್ಯಾನ್ಸರ್, ಮಧುಮೇಹದಂತಹ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಇದೀಗ ದೇಶದಲ್ಲಿ ಒಟ್ಟಾರೆ 79,415 ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದ್ದಾರೆ.

## ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್



* ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಶ್ರೀಹರಿ ನಟರಾಜ್ ಹಾಗೂ ದೆಹಲಿಯ ಕುಶಾಗ್ರ ರಾವತ್ ಅವರು ದಾಖಲೆಯನ್ನು ಬರೆದಿದ್ದಾರೆ.
* ಪ್ರಸ್ತುತ ಶ್ರೀಹರಿ ನಟರಾಜ್ ಅವರು ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್‌ನ್ನು ಕೇವಲ 55.10 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲ ಸ್ಥಾನ ಪಡೆದಿದ್ದಾರೆ, ಮತ್ತೆ ಎರಡನೇ ಸ್ಥಾನವನ್ನು ಕರ್ನಾಟಕದ ಆದ ಶಿವ ಎಸ್ ರವರು ಪಡೆದುಕೊಂಡಿದ್ದಾರೆ.
* ಪ್ರಸ್ತುತ ಗೋವಾದ ಕ್ಷೇವಿಯರ್ ಮೈಕೆಲ್ ಡಿ'ಸೋಜಾ ಅವರು ಈ ವಿಭಾಗದ ಮೂರನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.
* ದೆಹಲಿಯ ಕುಶಾಗ್ರ ರಾವತ್ ಅವರು ಪುರುಷರ 400 ಮೀ. ಫ್ರೀಸ್ಟೈಲ್‌ನ್ನು ಕೇವಲ 3 ನಿಮಿಷ 53.68 ಸೆಕೆಂಡುಗಳಲ್ಲಿ ಗುರಿ ತಲುಪಿ ಮೊದಲ ಸ್ಥಾನವನ್ನು ಪಡೆದುಕೊಂಡರು, ಹಾಗೂ ಇದೇ ವಿಭಾಗದಲ್ಲಿ ಕಾರ್ನಾಟಕ ರಾಜ್ಯದ ಅನೀಶ್ ಗೌಡ ಹಾಗೂ ಶಾನ್ ಗಂಗೂಲಿ ಅವರು 2 ಮತ್ತು 3 ಸ್ಥಾನವನ್ನು ಪಡೆದುಕೊಂಡರು.
* ಮಹಿಳೆಯರ 400 ಮೀ.ಫ್ರೀಸ್ಟೈಲ್‌ನಲ್ಲಿ ಅಸ್ಸಾಂನ ಶಿವಾಂಗಿ ಶರ್ಮಾ ಅವರು ಮೊದಲ ಸ್ಥಾನ ಪಡೆದುಕೊಂಡಿದ್ದಾರೆ, ಹಾಗೂ ಇದೇ ವಿಭಾಗದಲ್ಲಿ ಮಹಾರಾಷ್ಟ್ರದ ಅನ್ಯಾ ವಾಲ ಅವರು 2ನೇ ಸ್ಥಾನ, ದೆಹಲಿಯ ಪ್ರಾಚಿ ಟೋಕಸ್ ಅವರು 3ನೇ ಸ್ಥಾನ ಪಡೆದುಕೊಂಡಿದ್ದಾರೆ.

## ಕರ್ನಾಟಕದ ಹುಬ್ಬಳ್ಳಿ ವಿಮಾನ ನಿಲ್ದಾಣ ಸೇರಿ ಒಟ್ಟು 13 ವಿಮಾನ ನಿಲ್ದಾಣಗಳ ಖಾಸಗೀಕರಣ




* ಪ್ರಸ್ತುತ ಕರ್ನಾಟಕ ರಾಜ್ಯದ ಹುಬ್ಬಳ್ಳಿ ವಿಮಾನ ನಿಲ್ದಾಣ ಸೇರಿ ದೇಶದಲ್ಲಿನ 13 ವಿಮಾನ ನಿಲ್ದಾಣಗಳನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆ ಮುಂದಿನ ಮಾರ್ಚ್ ತಿಂಗಳಿನ ಸಮಯಕ್ಕೆ ಪೂರ್ಣಗೊಳಿಸಲು ಕೇಂದ್ರ ಸರ್ಕಾರವು ತೀರ್ಮಾನಿಸಿದೆ.

* ಪ್ರಸ್ತುತ ವಿಮಾನಯಾನ ಸಚಿವಾಲಯಕ್ಕೆ ಖಾಸಗಿ ಮತ್ತು ಸಾರ್ವಜನಿಕ ವಲಯದ ಸಹಭಾಗಿತ್ವದ ಆಧಾರದಲ್ಲಿ ನಿರ್ವಹಣೆ ಮಾಡಲು ಒಟ್ಟಾರೆ 13 ವಿಮಾನ ನಿಲ್ದಾಣಗಳ ಮಾಹಿತಿಯನ್ನು ನೀಡಲಾಗಿದೆ, ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (AAI)ದ ಅಧ್ಯಕ್ಷ ಸಂಜೀವ್ ಕುಮಾರ್ ಮಾಹಿತಿ ನೀಡಿದ್ದಾರೆ.

* ಇದೀಗ ಕೇಂದ್ರ ಸರ್ಕಾರವು ವಿಮಾನ ನಿಲ್ದಾಣಗಳ ಆದಾಯವನ್ನು ಪರಿಗಣಿಸಿ ಹರಾಜು ಪ್ರಕ್ರಿಯೆ ಮಾಡಲಿದೆ, ಖಾಸಗಿ ವಲಯದವರಿಗೆ ಸುಮಾರು 50 ವರ್ಷಗಳ ಅವಧಿಗೆ ಈ ವಿಮಾನ ನಿಲ್ದಾಣಗಳ ನಿರ್ವಹಣೆಯ ಹೊಣೆಯನ್ನು ವಹಿಸಲಾಗುತ್ತದೆ ಎಂದು ತಿಳಿದು ಬಂದಿದೆ.

## ಭಾರತೀಯ ಮೂಲದ ನಾಯಕ ಕೆನಡಾದ ಹೊಸ ರಕ್ಷಣಾ ಸಚಿವರಾಗುತ್ತಾರೆ



* ಇತ್ತೀಚಿಗೆ ಕೆನಡಾ ದೇಶದ ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡೊ ಅವರು ತಮ್ಮ ಕ್ಯಾಬಿನೆಟ್'ನ್ನು ಪುನ್ಹ ರಚಿಸಿದರು, ಅದರಲ್ಲಿ ಭಾರತೀಯ ಮೂಲದ ಅನಿತಾ ಆನಂದ್ ಅವರು ಕೆನಡಾದ ರಕ್ಷಣಾ ಸಚಿವರಾಗಿ ನೇಮಕವಾಗಿದ್ದಾರೆ.

* ಪ್ರಸ್ತುತ ಸಾರ್ವಜನಿಕ ಹಾಗೂ ರಾಜಕೀಯ ನಾಯಕರು ಕೆನಡಾ ದೇಶದ ಮಿಲಿಟರಿಯ ಮೇಲೆ ತನ್ನ ಸಂಸ್ಕೃತಿಯನ್ನು ಬದಲಾವಣೆ ಮಾಡಲು ಹಾಗೂ ಲೈಂಗಿಕ ದುರುಪಯೋಗದ ಆರೋಪಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ವ್ಯವಸ್ಥೆಯನ್ನು ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

* ಈ ಮೊದಲು ಭಾರತೀಯ ಮೂಲದ ಹರ್ಜಿತ್ ಸಜ್ಜನ್ ಅವರು ದೀರ್ಘಾವಧಿಯ ರಕ್ಷಣಾ ಸಚಿವರಾಗಿದ್ದರು, ಇದೀಗ ಅನಿತಾ ಆನಂದ್ ಅವರು ಕೆನಡಾದ ರಕ್ಷಣಾ ಸಚಿವರಾಗಿದ್ದಾರೆ.

## ಭಾರತ ಕಿರ್ಗಿಸ್ತಾನ್ ನಡುವೆ ಮೊದಲ ಕಾರ್ಯತಂತ್ರದ ಮಾತುಕತೆ



* ಪ್ರಸ್ತುತ ನವದೆಹಲಿಯಲ್ಲಿ ಭಾರತ ಮತ್ತು ಕಿರ್ಗಿಸ್ತಾನ್ ದೇಶಗಳು ಮೊದಲ ಕಾರ್ಯತಂತ್ರದ ಮಾತುಕತೆಯನ್ನು ನಡೆಸಿದವು.

* ಉಭಯ ದೇಶಗಳು ಭದ್ರತೆ ಮತ್ತು ರಕ್ಷಣಾ ಸಹಕಾರವನ್ನು ಹೆಚ್ಚಿಸಲು ಶೃಂಗಸಭೆಯಲ್ಲಿ ಪರಸ್ಪರ ಒಪ್ಪಿಗೆಯನ್ನು ನೀಡಿವೆ.

* ಸದ್ಯ ಅಫ್ಘಾನಿಸ್ತಾನದಲ್ಲಿ ಇರುವಂತಹ ಪರಿಸ್ಥಿತಿಯಿಂದ ಭಾರತ ಹಾಗೂ ಕಿರ್ಗಿಸ್ತಾನ್ ದೇಶಗಳು ಬೆದರಿಕೆಎದುರಿಸುತ್ತಿವೆ ಎಂದು ತಿಳಿದು ಬಂದಿದೆ.

* ಭಾರತ ಹಾಗೂ ಕಿರ್ಗಿಸ್ತಾನ್ ದೇಶಗಳು ಭಯೋತ್ಪಾದನೆ ನಿಗ್ರಹ, ಮಾದಕ ದ್ರವ್ಯ ನಿಯಂತ್ರಣದ ವಿರುದ್ಧ ಹೋರಾಟ ಹಾಗೂ ರಕ್ಷಣಾ ವ್ಯವಸ್ಥೆಗೆ ಸಂಬಂಧ ಪಟ್ಟಿರುವ ದ್ವಿಪಕ್ಷೀಯ ಭದ್ರತಾ ಸಹಕಾರವನ್ನು ಹೆಚ್ಚಿಸುವ ಕ್ರಮಗಳನ್ನು ಪರಸ್ಪರ ಚರ್ಚಿಸಿದರು.

* ಕಿರ್ಗಿಸ್ತಾನ್ 1991 ರ ಆಗಸ್ಟ್. 31 ರಂದು ಸ್ವಾತಂತ್ರ್ಯವನ್ನು ಪಡೆದುಕೊಂಡಿತು, ಇದಾದ ನಂತರ ಭಾರತವು 1992 ರಲ್ಲಿ ಕಿರ್ಗಿಸ್ತಾನ್ ದೇಶದ ಜೊತೆ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪನೆ ಮಾಡಿತು, ಮತ್ತೇ 1994 ರಲ್ಲಿ ಭಾರತವು ರೆಸಿಡೆಂಟ್ ಮಿಷನ್'ನ್ನು ಸ್ಥಾಪನೆ ಮಾಡಿತು.

# 29-10-2021

## ಭಾರತೀಯ ರೈಲ್ವೇ ಜೊತೆ ಟ್ರೂ ಕಾಲರ್ ಐಡಿ ಒಪ್ಪಂದ

IRCTC truecaller

* ಮೊಬೈಲ್ ಕರೆ ಮಾಡುವ ಸಂಧರ್ಭದಲ್ಲಿ ಗುರುತು ಪತ್ತೆ ಹಚ್ಚುವ ಟ್ರೂ ಕಾಲರ್ ಆಪ್ ಇದೀಗ ಭಾರತೀಯ ರೈಲ್ವೇ ಜೊತೆ ಒಪ್ಪಂದ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದೆ.

* ಇದೀಗ ಟ್ರೂ ಕಾಲರ್ IRCTC ಜಾಲತಾಣದಿಂದ ರೈಲ್ವೇ ಟಿಕೆಟ್ ಬುಕ್ ಮಾಡಿದ ಸಂದರ್ಭದಲ್ಲಿ ಬುಕಿಂಗ್ ಸಂದೇಶಗಳ ಅಧಿಕೃತ ಮಾಹಿತಿಯನ್ನು ಟ್ರೂಕಾಲರ್ ಖಚಿತಪಡಿಸಲಿದೆ, ಇದರಿಂದ ವಂಚನೆಗಳನ್ನು ತಡೆಗಟ್ಟಬಹುದು ಎಂದು ಭಾರತೀಯ ರೈಲ್ವೇ ತಿಳಿಸಿದೆ.

* ಟ್ರೂ ಕಾಲರ್ ರೈಲ್ವೇ ಸಹಾಯವಾಣಿ 139 ಜೊತೆ ಮಾತನಾಡುವಾಗ ಭಾರತೀಯ ರೈಲ್ವೇ ಅಧಿಕೃತ ಲೋಗೋವನ್ನು ತೋರಿಸಲಿದೆ.

* ಭಾರತೀಯ ರೈಲ್ವೇ 2007ರಲ್ಲಿ 139 ಸಹಾಯವಾಣಿಯನ್ನು ಭಾರತ್ ಬಿಪಿಒ ಸಹಯೋಗದಲ್ಲಿ ಆರಂಭಿಸಿದೆ. ಇದೀಗ ಪ್ರತಿದಿನವು ಸರಿ ಸುಮಾರು 2 ಲಕ್ಷ ರೈಲ್ವೇ ಗ್ರಾಹಕರು ಈ ಸಹಾಯವಾಣಿಯ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಭಾರತೀಯ ರೈಲ್ವೇ ತಿಳಿಸಿದೆ.

## '2022 ಆಸಿಯಾನ್ ಭಾರತ ಸ್ನೇಹ ವರ್ಷ'



* ಪ್ರಧಾನಿ ನರೇಂದ್ರ ಮೋದಿ ಅವರು ಆಸಿಯಾನ್ ಕೂಟ ರಾಷ್ಟ್ರಗಳ ಏಕತೆ ಹಾಗೂ ಕೇಂದ್ರೀಯತೆಯು ಭಾರತಕ್ಕೆ ಯಾವಾಗಲೂ ಪ್ರಮುಖ ಆದ್ಯತೆಯಾಗಿದೆ ಎಂದು ತಿಳಿಸಿದ್ದಾರೆ.
* 2022ರ ವರ್ಷವನ್ನು 'ಆಸಿಯಾನ್ ಭಾರತ ಸ್ನೇಹ ವರ್ಷ' ಎಂದು ಆಚರಣೆ ಮಾಡಲಾಗುತ್ತದೆ ಎಂದು ಮೋದಿ ಅವರು ತಿಳಿಸಿದ್ದಾರೆ.
* ಪ್ರಧಾನಿ ಮೋದಿ ಇತ್ತೀಚಿಗೆ ಭಾರತ ಆಸಿಯಾನ್ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದರು, ಈ ಸಭೆಯಲ್ಲಿ ಭಾರತದ ಇಂಡೊ ಪೆಸಿಫಿಕ್ ಸಾಗರಗಳ ಯೋಜನೆಯು, ಇಂಡೊ ಪೆಸಿಫಿಕ್ ಪ್ರದೇಶದಲ್ಲಿ ಆಸಿಯಾನ್ ಕೂಟದ ಅಭಿಪ್ರಾಯಗಳಿಗೆ ಪರಸ್ಪರ ಸಹಕಾರವನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* 2022ರ ಆಸಿಯಾನ್ ಭಾರತ ಸ್ನೇಹವು 30 ವರ್ಷಗಳನ್ನು ಪೂರೈಸಲಿದೆ, ಈ ಹಿನ್ನಲೆಯಿಂದಾಗಿ ಭಾರತೀಯರಿಗೆ 'ಆಸಿಯಾನ್ ಭಾರತದ ಸ್ನೇಹ ವರ್ಷ' ಎಂದು ಆಚರಿಸಲು ಖುಷಿಯಾಗುತ್ತಿದೆ ಎಂದು ತಿಳಿಸಿದರು.
* ಪ್ರಸ್ತುತ ಭಾರತ, ಅಮೆರಿಕ, ಚೀನಾ, ಜಪಾನ್ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಹಲವು ಇತರ ದೇಶಗಳು ಈ ಆಸಿಯಾನ್ ಅಂತರರಾಷ್ಟ್ರೀಯ ಕೂಟದ ಪಾಲುದಾರರಾಗಿದ್ದಾರೆ.

## ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಇ ಬೈಕ್ ಮೂಲಕ ಅಂಚೆ ವಿತರಣೆ



* ಸಿಲಿಕಾನ್ ಸಿಟಿ ಬೆಂಗಳೂರು ದೇಶದಲ್ಲೇ ಮೊದಲ ಬಾರಿಗೆ ಅಂಚೆ ಕಚೇರಿಯಲ್ಲಿ ಇ ಬೈಕ್‌ಗಳ ಮೂಲಕ ಪೋಸ್ಟ್'ಗಳನ್ನು ವಿತರಣೆ ಮಾಡಿದೆ.
* ಪ್ರಸ್ತುತ ಕರ್ನಾಟಕ ರಾಜ್ಯದ ಬೆಂಗಳೂರಿನ ಜೆ.ಪಿ ನಗರದ ಉಪ ಅಂಚೆ ಕಚೇರಿ ಸಿಬ್ಬಂದಿಗಳಿಗೆ ಎಲೆಕ್ಟ್ರಿಕ್ ಬೈಕ್ ನೀಡಲಾಗಿದೆ, ಅಲ್ಲಿರುವ ಪೋಸ್ಟ್ ಮ್ಯಾನ್‌ಗಳು ಇ ಬೈಕ್‌ಗಳ ಮೂಲಕ ಪೋಸ್ಟ್ ಗಳನ್ನು ಡೆಲಿವರಿ ಮಾಡಲಿದ್ದಾರೆ ಎಂದು ತಿಳಿದು ಬಂದಿದೆ.
* ಬೆಂಗಳೂರಿನ ಜೆ.ಪಿ ನಗರದ ಉಪ ಅಂಚೆ ಕಚೇರಿಯಲ್ಲಿ 15 ಪೋಸ್ಟ್ ಮೆನ್ ಹಾಗೂ ಪೋಸ್ಟ್ ವುಮೆನ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ, ಇದೀಗ ಇವರುಗಳು ಇ ಬೈಕ್‌ಗಳ ಮೂಲಕವೇ ಪೋಸ್ಟ್ ಗಳನ್ನು ವಿತರಣೆ ಮಾಡುತ್ತಿದ್ದಾರೆ.
* ಅಂಚೆ ದಿನಾಚರಣೆಯ ವಾರದ ಪ್ರಯುಕ್ತ ಅಂದರೆ ಅಕ್ಟೋಬರ್. 14ರಂದು ಇ ಪೋಸ್ಟ್'ನ್ನು ಆರಂಭಿಸಿದ್ದೇವೆ ಎಂದು ಬೆಂಗಳೂರು ವಲಯದ ಜನರಲ್ ಪೋಸ್ಟ್ ಮಾಸ್ಟರ್ ಎಲ್.ಕೆ ಡ್ಯಾಶ್ ಅವರು ತಿಳಿಸಿದ್ದಾರೆ.

## ನಾಗರಿಕ ವಿಮಾನಯಾನ ಸಚಿವರಿಂದ ಕೃಷಿ ಉಡಾನ್ 2.0 ಅನ್ನು ಬಿಡುಗಡೆ




* ಇದೇ ಅಕ್ಟೋಬರ್. 27 ರಂದು 'ಕೃಷಿ ಉಡಾನ್ 2.0 ಯೋಜನೆಯನ್ನು ನಾಗರಿಕ ವಿಮಾನಯಾನ ಸಚಿವಾಲಯವು ಆರಂಭಿಸಿದೆ.
* ಈ ಕೃಷಿ ಉಡಾನ್ 2.0 ಯೋಜನೆ ಅಡಿಯಲ್ಲಿ, ಗುಡ್ಡಗಾಡು, ಬುಡಕಟ್ಟು ಮತ್ತು ಈಶಾನ್ಯ ಪ್ರದೇಶಗಳ ವಿಮಾನ ನಿಲ್ದಾಣಗಳಲ್ಲಿ ಮೂಲಸೌಕರ್ಯಗಳನ್ನು ನಿರ್ಮಾಣ ಮಾಡಲಾಗುತ್ತದೆ, ಇದರಿಂದಾಗಿ ಕೃಷಿ ಉತ್ಪನ್ನಗಳನ್ನು ಸಾಗಿಸಲು ರೈತರಿಗೆ ಸಹಾಯವಾಗಲಿದೆ ಎಂದು ತಿಳಿಸಿದ್ದಾರೆ.
* ಕೇಂದ್ರ ಸರ್ಕಾರವು ಕೃಷಿ ಉಡಾನ್ ಯೋಜನೆಯನ್ನು 2020 ರ ಸೆಪ್ಟೆಂಬರ್'ನಲ್ಲಿ ಆರಂಭಿಸಿದೆ.
* ಕೇಂದ್ರ ಸರ್ಕಾರವು ಈ ಕೃಷಿ ಉಡಾನ್ 2.0 ಅಡಿಯಲ್ಲಿ ಆಯ್ದ ವಿಮಾನ ನಿಲ್ದಾಣಗಳಲ್ಲಿನ ವಿಮಾನ ನಿಲ್ದಾಣದ ಶುಲ್ಕವನ್ನು ಸಂಪೂರ್ಣ ಮನ್ನಾ ಮಾಡಲು ಚಿಂತನೆ ನಡೆಸಿದೆ.
* 2022 ರ ವೇಳೆಗೆ ಈ ಯೋಜನೆಯಡಿಯಲ್ಲಿ ಅಗರ್ತಲಾ, ದಿಬ್ರುಗಢ, ಶ್ರೀನಗರ, ಹುಬ್ಬಳ್ಳಿ, ದಿಮಾಪುರ್, ಜೋರ್ಹತ್, ಇಂಫಾಲ್, ಸಿಲ್ಚಾರ್, ಲಿಲಾಬರಿ, ಲಕ್ನೋ, ತಿರುಪತಿ, ತೇಜ್‌ಪುರ್, ತಿರುಪತಿ ಮತ್ತು ಟುಟಿಕೋರಿನ್'ನಲ್ಲಿರುವ ವಿಮಾನ ನಿಲ್ದಾಣಗಳಲ್ಲಿ ಕಾರ್ಗೋ ಟರ್ಮಿನಲ್‌ಗಳನ್ನು ಸ್ಥಾಪನೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಕೃಷಿ ಉಡಾನ್ 2.0 ಯೋಜನೆಯಡಿಲ್ಲಿ ಕೃಷಿ ಉತ್ಪನ್ನಗಳ ಸಾಗಣೆಗೆ ಸಂಬಂಧಿಸಿದಂತೆ ಮಧ್ಯಸ್ಥಗಾರರಿಗೆ ಮಾಹಿತಿ ನೀಡಲು ನೆರವಾಗುವ ನಿಟ್ಟಿನಲ್ಲಿ ಇ ಕುಶಾಲ್ ಆನ್‌ಲೈನ್ ವೇದಿಕೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

## 'X' ಲಿಂಗ ಮಾರ್ಕರ್‌ನೊಂದಿಗೆ ಯುಎಸ್ ಪಾಸ್ ಪೋರ್ಟ್ ನೀಡುತ್ತಿದೆ




* ಯುನೈಟೆಡ್ ಸ್ಟೇಟ್ಸ್ ಮೊದಲ ಪಾಸ್‌ಪೋರ್ಟ್'ನ್ನು 'X' ಲಿಂಗ ಮಾರ್ಕರ್‌ನೊಂದಿಗೆ ನೀಡಿದೆ, ಪ್ರಸ್ತುತ ಇದು ಪುರುಷ ಅಥವಾ ಮಹಿಳೆ ಎಂದು ಪರಿಗಣಿಸಲಾಗದ ಜನರ ಹಕ್ಕುಗಳನ್ನು ಗುರುತಿಸುವಲ್ಲಿ ಹೊಸ ಮೈಲಿಗಲ್ಲನ್ನು ಎತ್ತಿತೋರಿದೆ.
* ಫೋರ್ಟ್ ಕಾಲಿನ್ಸ್'ನ ಇಂಟರ್‌ಸೆಕ್ಸ್ ಕಾರ್ಯಕರ್ತ ಡಾನಾ ಝ್ಯುಮ್ ಅವರ ಹೋರಾಟದ ನಂತರ ಈ ಕ್ರಮವನ್ನು ಕೈಗೊಳ್ಳಲಗಿದೆ ಎಂದು ತಿಳಿಸಿದ್ದಾರೆ.
* ಝ್ಯುಮ್ ಅವರು ಗಂಡು ಅಥವಾ ಹೆಣ್ಣು ಎಂಬ ಆಯ್ಕೆ ಮಾಡುವ ಮೂಲಕ ಝ್ಯುಮ್ ಲಿಂಗದ ಬಗ್ಗೆ ಸುಳ್ಳು ಹೇಳುವ ಅಗತ್ಯವಿಲ್ಲದ ಪಾಸ್ ಪೋರ್ಟ್ ಪಡೆಯಲು 2015 ರಿಂದ US ಸ್ಟೇಟ್ ಡಿಪಾರ್ಟ್‌ಮೆಂಟ್ ನೊಂದಿಗೆ ಕಾನೂನುಬದ್ಧವಾಗಿ ಹೋರಾಟ ನಡೆಸುತಿದ್ದರು.
* ಯುಎಸ್'ನಲ್ಲಿ, 'ಸಲಿಂಗಕಾಮಿ, ದ್ವಿಲಿಂಗಿ ಮತ್ತು ಟ್ರಾನ್ಸ್ಜೆಂಡರ್

(LGBT) ಹಕ್ಕುಗಳು ವಿಕಸನಗೊಂಡಿವೆ. ಯುನೈಟೆಡ್ ಸ್ಟೇಟ್ಸ್'ನ ಎಲ್ಲಾ 50 ರಾಜ್ಯಗಳು 1962 ರವರೆಗೆ ಸಲಿಂಗ ಲೈಂಗಿಕ ಚಟುವಟಿಕೆಯನ್ನು ಅಪರಾಧ ಎಂದು ಪರಿಗಣಿಸಿದ್ದವು, ಆದರೆ 2003 ರಲ್ಲಿ ಯುಎಸ್ ಸಲಿಂಗ ಲೈಂಗಿಕ ಚಟುವಟಿಕೆಯ ವಿರುದ್ಧ ಉಳಿದಿರುವ ಎಲ್ಲಾ ಕಾನೂನುಗಳನ್ನು ತಗೆದುಹಾಕಿತು, ಅಷ್ಟೇ ಅಲ್ಲದೇ 2015 ರ ಹೊತ್ತಿಗೆ ಇವರು ಯುಎಸ್'ನ 50 ರಾಜ್ಯಗಳಲ್ಲಿ ಮದುವೆಯಾಗುವ ಹಕ್ಕನ್ನು ಪಡೆದುಕೊಂಡರು.

## ಚೀನಾ ಟೆಲಿಕಾಂ ಸಂಸ್ಥೆಗೆ ಅಮೆರಿಕ ಮಾರುಕಟ್ಟೆಯಿಂದ ತೆರಳುವಂತೆ ಸೂಚನೆ




* ಚೀನಾದ ಟೆಲಿಕಾಂ ಸಂಸ್ಥೆಯನ್ನು ಅಮೇರಿಕ ತನ್ನ ಮಾರುಕಟ್ಟೆಯಿಂದ ಉಚ್ಛಾಟಿಸಲಾಗಿದೆ ಎಂದು ತಿಳಿಸಿದೆ.
* ಪ್ರಸ್ತುತ ಚೀನಾ ದೇಶದೊಂದಿಗಿನ ಉದ್ವಿಗ್ನತೆ ಹಾಗೂ ಅಮೇರಿಕ ದೇಶವು ತನ್ನ ಭದ್ರತೆಗೆ ಬೆದರಿಕೆ ಉಂಟಾಗಿರುವ ಹಿನ್ನಲೆಯಿಂದಾಗಿ ಈ ನಿರ್ಣಯವನ್ನು ಕೈಗೊಂಡಿದೆ ಎನ್ನಲಾಗಿದೆ.
* ಇದೀಗ ಅಮೇರಿಕಾದಲ್ಲಿ ಟೆಲಿಕಾಂ ಸೇವೆ ನೀಡುತ್ತಿರುವ ಚೀನಾ ಟೆಲಿಕಾಂ ಕಾರ್ಪೊರೇಶನ್ ಸಂಸ್ಥೆಯು ಅಂತರ್‌ರಾಜ್ಯ ಮತ್ತು ಅಂತರಾಷ್ಟ್ರೀಯ ಟೆಲಿಕಾಂ ಸೇವೆಯನ್ನು 60 ದಿನದೊಳಗೆ ಸ್ಥಗಿತಗೊಳಿಸುವಂತೆ ಫೆಡರಲ್ ಸಂವಹನ ಆಯೋಗವು ಆದೇಶವನ್ನು ಹೊರಡಿಸಿದೆ.
* ಚೀನಾ ದೇಶದ ಟೆಲಿಕಾಂ ಸಂಸ್ಥೆಯಿಂದ ಅಮೇರಿಕದ ಮಾಹಿತಿ ಹಾಗೂ ಸಂಪರ್ಕ ಜಾಲಕ್ಕೆ ತೊಂದರೆಯಾಗುವ ನಿಟ್ಟಿನಲ್ಲಿ ಅಮೇರಿಕ ಈ ಕ್ರಮವನ್ನು ಕೈಗೊಂಡಿದೆ ಎನ್ನಲಾಗಿದೆ.
* ಪ್ರಸ್ತುತ ಅಮೇರಿಕದಲ್ಲಿ ಟೆಲಿಕಾಂ ಸೇವೆಯನ್ನು ನೀಡುತ್ತಿರುವ ಚೀನಾ ಸರ್ಕಾರದ ನಿಯಂತ್ರಣದಲ್ಲಿರುವ 'ಚೀನಾ ಟೆಲಿಕಾಂ ಅಮೆರಿಕಾಸ್' ಸಂಸ್ಥೆಯಿಂದ ರಾಷ್ಟ್ರೀಯ ಭದ್ರತೆಗೆ ಅಪಾಯ ಎದುರಾಗಿದೆ ಎಂದು FCC ಹೇಳಿಕೆಯನ್ನು ನೀಡಿದೆ.

## 'ಅಗ್ನಿ 5' ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಗೊಳಿಸಿದ ಭಾರತೀಯ ಸೇನೆ



* ಇತ್ತೀಚಿಗೆ ಭಾರತೀಯ ಸೇನೆಯು ಬ್ಯಾಲಿಸ್ಟಿಕ್ ಅಗ್ನಿ 5 ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ ಇದರಿಂದಾಗಿ ಭಾರತೀಯ ಸೇನೆಗೆ ಇನ್ನಷ್ಟು ಶಕ್ತಿ ಸಿಕ್ಕಿದಂತಾಗಿದೆ.
* ಈ ಅಗ್ನಿ 5 ಕ್ಷಿಪಣಿಯು ನಿಖರವಾಗಿ 5,000 ಕಿ.ಮೀ ವ್ಯಾಪ್ತಿಯ ಗುರಿಗಳನ್ನು ಹೊಡೆದ ಉರಿಳಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಭಾರತೀತ ಸೇನೆ ತಿಳಿಸಿದೆ.
* ಪ್ರಸ್ತುತ ಚೀನಾ ದೇಶದೊಂದಿಗಿನ ದೀರ್ಘಕಾಲದ ಗಡಿ ಬಿಕ್ಕಟ್ಟಿನ ನಡುವೆ ಪೂರ್ವ ಲಡಾಖ್‌ನಲ್ಲಿ ಈ ಕ್ಷಿಪಣಿಯ ಯಶಸ್ವಿ ಪರೀಕ್ಷಾರ್ಥ ಪ್ರಯೋಗವನ್ನು ನಡೆಸಲಾಗಿದೆ.
* ಅಗ್ನಿ ಕ್ಷಿಪಣೆಯ ಮಾಹಿತಿ: ಈ ಹಿಂದೆ 2012ರ ಏಪ್ರಿಲ್ 19ರಂದು ಭಾರತ ಅಗ್ನಿ 1 ಕ್ಷಿಪಣಿ ಪ್ರಯೋಗವನ್ನು ಮಾಡಿತ್ತು, ಇದು ಸುಮಾರು 700 ಕಿ. ಮೀ. ಸಾಗುವ ಸಾಮರ್ಥ್ಯವನ್ನು ಹೊಂದಿತ್ತು, ಮತ್ತೇ 2013ರ ಸೆಪ್ಟೆಂಬರ್ 15ರಂದು ಅಗ್ನಿ 2 ಪರೀಕ್ಷೆಯನ್ನು ನಡೆಸಲಾಯಿತು ಇದು ಸುಮಾರು 2000 ಕಿ. ಮೀ. ಸಾಗುವ ಸಾಮರ್ಥ್ಯವನ್ನು ಹೊಂದಿತ್ತು.
* ಮತ್ತೇ 2015ರ ಜನವರಿ 31ರಂದು ಅಗ್ನಿ 3 ಕ್ಷಿಪಣಿ ಪ್ರಯೋಗ ನಡೆಸಲಾಗಿತ್ತು, ಇದು 3,500 ಕಿ. ಮೀ. ಸಾಗುವ ಸಾಮರ್ಥ್ಯವನ್ನು ಹೊಂದಿತ್ತು, ಅದೇ ವರ್ಷ 2015ರ ನವೆಂಬರ್ 9ರಂದು ಅಗ್ನಿ 4 ಕ್ಷಿಪಣಿ ಪ್ರಯೋಗವನ್ನು ನಡೆಸಲಾಯಿತು ಇದು ಸುಮಾರು 4000 ಕಿ. ಮೀ. ಸಾಗುವ ಸಾಮರ್ಥ್ಯವನ್ನು ಹೊಂದಿತ್ತು.
* ಇದೀಗ ಭಾರತೀಯ ಸೇನೆಯು ಅಗ್ನಿ 5 ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ, ಇದು ಸುಮಾರು 5000ಕಿ. ಮೀ. ಸಾಗುವ ಸಾಮರ್ಥ್ಯವನ್ನು ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕೇಂದ್ರ ಸರ್ಕಾರದಿಂದ ಲಸಿಕೆ ನೀಡಲು 'ಹರ್ ಘರ್ ದಸ್ತಕ್' ಆಂದೋಲನ




* ಇದೀಗ ಕೇಂದ್ರ ಸರ್ಕಾರವು ದೇಶದಲ್ಲಿನ ಪ್ರತಿ ಪ್ರಜೆಗೂ ಕೋವಿಡ್ 19 ಲಸಿಕೆ ನೀಡುವ ನಿಟ್ಟಿನಲ್ಲಿ ಮುಂಬರುವ ತಿಂಗಳಿನಿಂದ 'ಹರ್ ಘರ್ ದಸ್ತಕ್' ಆಂದೋಲನ ಪ್ರಾರಂಭಿಸಲಾಗುತ್ತದೆ ಕೇಂದ್ರ ಆರೋಗ್ಯ ಸಚಿವ ಮನಸುಖ ಮಾಂಡವಿಯಾ ಅವರು ಮಾಹಿತಿ ನೀಡಿದ್ದಾರೆ.
* ಈ 'ಹರ್ ಘರ್ ದಸ್ತಕ್' ಆಂದೋಲನ ಅಡಿಯಲ್ಲಿ ಇಲ್ಲಿಯವರೆಗೆ ಮೊದಲನೇ ಡೋಸ್ ಲಸಿಕೆಯನ್ನು ಪಡೆಯದವರ ಮನೆ ಬಾಗಿಲಿಗೇ ತೆರಳಿ ಲಸಿಕೆ ನೀಡಲಾಗುತ್ತದೆ.
* ಪ್ರಸ್ತುತ ದೇಶದಲ್ಲಿ ಇದೀಗ ಶೇ. 77 ಜನರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ, ಹಾಗೂ ಶೇ. 32 ಜನರು 2ನೇ ಡೋಸ್ ಲಸಿಕೆಯನ್ನುಪಡೆದುಕೊಂಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ ಮಾಂಡವಿಯಾ ಅವರು ಹೇಳಿಕೆ ನೀಡಿದ್ದಾರೆ.


## ಸರ್ಕಾರವು ಭವಿಷ್ಯದ ಶಿಕ್ಷಕರಿಗಾಗಿ 4 ವರ್ಷಗಳ BEd ಕೋರ್ಸ್ ಆರಂಭಿಸಿದೆ



* ಪ್ರಸ್ತುತ ಸರ್ಕಾರವು ಹೊಸ ಶಿಕ್ಷಣ ನೀತಿಯ ಅನುಸಾರವಾಗಿ 4 ವರ್ಷಗಳ ಸಮಗ್ರ ಶಿಕ್ಷಕರ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಿದೆ, ಇದೀಗ ಬಿಎಡ್ ಕೋರ್ಸ್'ನ್ನು ಸಂಯೋಜಿಸಲಾಗುತ್ತದೆ, ಹಾಗು ಇದು 4 ವರ್ಷಗಳ ಅವಧಿಯ ಕೋರ್ಸ್‌ಆಗಿರಲಿದೆ.
* ಪ್ರಸ್ತುತ ಶಿಕ್ಷಣ ನೀತಿಯು ಪ್ರಾದೇಶಿಕ ಭಾಷೆಯಲ್ಲಿ ಬೋಧನೆ, ಶಾಲಾ ಮಕ್ಕಳಿಗೆ ಕೋಡಿಂಗ್ ಕಲಿಕೆ ಪರಿಚಯಿಸಲಿದೆ, ಇದಕ್ಕೆ ಅನುಗುಣವಾಗಿ ಶಿಕ್ಷಕರನ್ನು ಸಿದ್ಧಪಡಿಸುತ್ತವೆ ಮತ್ತು ಹೊಸ

ಪಠ್ಯಕ್ರಮವನ್ನು ಹೊಂದಿರುತ್ತವೆ ಎಂದು ಮಾಜಿ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಅವರು ಈ ಹಿಂದೆ ಘೋಷಣೆ ಮಾಡಿದ್ದರು.
* ಸರ್ಕಾರವು 4 ವರ್ಷಗಳ ಸಮಗ್ರ ಬಿಎಡ್ ಕೋರ್ಸ್'ನ್ನು 2030 ರ ಅವಧಿಗೆ ಬೋಧನೆಗೆ ಅಗತ್ಯವಿರುವ ಕನಿಷ್ಠಪದವಿಯನ್ನಾಗಿ ಮಾಡುವ ಗುರಿಯನ್ನು ಹೊಂದಿದೆ, ಅಷ್ಟೇ ಅಲ್ಲದೇ ಈ 4 ವರ್ಷಗಳ ಐಟಿಇಪಿ ಯ ಆರಂಭವು 2022 23 ರ ಶೈಕ್ಷಣಿಕ ವರ್ಷದಿಂದ ಚಾಲ್ತಿಯಲ್ಲಿರಲಿದೆ.

## ಭಾರತ ದೇಶವು ರಷ್ಯಾ ಮಿಲಿಟರಿ ಅವಲಂಬನೆಯನ್ನು ಕಡಿಮೆ ಮಾಡಲು ಕ್ರಮ



* ಪ್ರಸ್ತುತ ಭಾರತ ದೇಶವು ರಷ್ಯಾ ಮೇಲಿನ ಮಿಲಿಟರಿ ಅವಲಂಬನೆಯನ್ನು ಕಡಿಮೆ ಮಾಡಲು ಕ್ರಮವನ್ನು ಕೈಗೊಂಡಿದೆ.
* ಭಾರತ ದೇಶವು ಅಮೇರಿಕಾ ರಾಷ್ಟ್ರದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ, ಈ ಹಿಂದೆ 2016ರಲ್ಲಿ ಅಮೆರಿಕ ಭಾರತವನ್ನು ಪ್ರಮುಖ ರಕ್ಷಣಾ ಪಾಲುದಾರ ದೇಶ ಎಂದು ಒಪ್ಪಿಕೊಂಡಿತ್ತು.
* ರಷ್ಯಾದ ಎಸ್. 400 ಕ್ಷಿಪಣಿ ಖರೀದಿ ವಿಚಾರ ನಮ್ಮ ಬೆಳೆಯುತ್ತಿರುವ ಸಂಬಂಧಕ್ಕೆ ದೊಡ್ಡ ಬೆದರಿಕೆಯಾಗಿದೆ ಎಂದು ಅಮೇರಿಕಾ ತಿಳಿಸಿದೆ.
* ಭಾರತವು ಭವಿಷ್ಯದಲ್ಲಿ ರಷ್ಯಾ ಮಿಲಿಟರಿ ಉಪಕರಣಗಳ ಬದಲಿಗೆ ಅಮೆರಿಕಾ ನಿರ್ಮಿತ ಉಪಕರಣಗಳ ಖರೀದಿಗೆ ಮಾಡಲಿದೆ ಎಂದು ಅಮೇರಿಕ ತಿಳಿಸಿದೆ.

## ಭಾರತದ ಸೇನೆಗೆ ರಷ್ಯಾ ಶಸ್ತ್ರಾಸ್ತ್ರಗಳೇ ಶಕ್ತಿ ಎಂದ ಅಮೆರಿಕ ಸಂಸ್ಥೆ



* ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ಸಲಕರಣೆಗಳ ಮೇಲೆ ಭಾರತದ ಅವಲಂಬನೆಯಲ್ಲಿ ಗಣನೀಯವಾಗಿ ಇಳಿಕೆ ಕಂಡು ಬಂದಿದ್ದರೂ ಸಹ ರಷ್ಯಾದ ಉಪಕರಣಗಳಿಲ್ಲದೆ ಭಾರತೀಯ ಸೇನೆಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ ಎಂದು ಅಮೆರಿಕದ ಸಂಸ್ಥೆ ಹೇಳಿದೆ.
* ರಷ್ಯಾದೊಂದಿಗೆ ಭಾರತವು ಹೆಚ್ಚಿನ ಒಡನಾಟವನ್ನು ಸಹಿಸದ ಅಮೆರಿಕ ಕೆಂಗಣ್ಣಿನಿಂದ ನೋಡುತ್ತಿದ್ದು ಈ ರೀತಿಯಾದ ಹೇಳಿಕೆಯನ್ನು ನೀಡುತ್ತಿದೆ.
* ಭಾರತ ಪ್ರಸ್ತುತ ಸ್ವಾವಲಂಬಿಯಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದರೂ ಸಹ ರಷ್ಯಾದೊಂದಿಗೆ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡು ಹಲವು ಭಾರೀ ಪ್ರಮಾಣದ ಉಪಕರಣಗಳನ್ನು ಖರೀದಿಸಿವೆ.
* 2015 ರ ನಂತರ ಆಮದು ಮಾಡಿಕೊಳ್ಳುವಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆ ಆಗಿದ್ದರೂ ಸಹ ರಷ್ಯಾ ಕೂಡ ಆಕರ್ಷಕ ದರದಲ್ಲಿ ಸುಧಾರಿತ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ಸರಬರಾಜು ಮಾಡುವುದನ್ನು ಮುಂದುವರೆಸಿದೆ.

## ಟಿಕೆಟ್ ಬುಕಿಂಗ್ ಮಾಡಲು IRCTC ಯೊಂದಿಗೆ ಒಪ್ಪಂದ ಮಾಡಿಕೊಂಡ 'ಫ್ಲೈಬಿಗ್'



* ಭಾರತೀಯ ವಿಮಾನಯಾನ ಕ್ಷೇತ್ರದಲ್ಲಿ ಹೆಸರಾದ ಫ್ಲೈಬಿಗ್ ತಾನು ಕೊಡಮಾಡುವ ವೈಮಾನಿಕ ಸೇವೆಗೆ ತನ್ನ ಪ್ರಯಾಣಿಕರಿಗೆ ಟಿಕೆಟ್‌ಗಳನ್ನು ಒದಗಿಸುವ ದೃಷ್ಟಿಯಿಂದ IRCTC ಜೊತೆಗೆ ಒಪ್ಪಂದ ಮಾಡಿಕೊಂಡಿದೆ.
* 'ನಿಮ್ಮ ದೇಶವನ್ನು ನೋಡಿ' ಅಭಿಯಾನದಡಿ ದೇಶದ ಈಶಾನ್ಯ ಪ್ರದೇಶದ ಜೀವವೈವಿಧ್ಯ ಹಾಗೂ ಸಂಸ್ಕೃತಿಯನ್ನು ಪ್ರಮೋಟ್ ಮಾಡುವುದು ಈ ಒಪ್ಪಂದದ ಉದ್ದೇಶವಾಗಿದೆ, ಇದೇ ವೇಳೆ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಈಶಾನ್ಯ ಪ್ರದೇಶದಲ್ಲಿ Contact ಹಾಗೂ Connectivity ಗೆ ಬಲ ನೀಡುವ ಉದ್ದೇಶವನ್ನೂ ಸಹ ಈ ಒಪ್ಪಂದ ಹೊಂದಿದೆ.
* ಭಾರತ ಸರ್ಕಾರದ ಪ್ರಾದೇಶಿಕ ವಿಮಾನಯಾನ ಸಂಪರ್ಕ ಯೋಜನೆಯಾದ 'ಉಡಾನ್'ನ ಅಡಿ ಫ್ಲೈಬಿಗ್ ತನ್ನ ಚಟುವಟಿಕೆಗಳನ್ನು ಜನವರಿ 2021 ರಿಂದ ಆರಂಭಿಸಿದೆ.
* ಈ ಫ್ಲೈಬಿಗ್ ಅನ್ನು ದೇಶದ ಈಶಾನ್ಯದ ಪ್ರಮುಖ ಕೇಂದ್ರಗಳಾದ ಗೌಹಾಟಿ, ಶಿಲ್ಲಾಂಗ್, ಡಿಬ್ರೂಘಡ, ಅಗರ್ತಲಾಗಳಿಗೆ ವಿಮಾನಯಾನ ಸಂಪರ್ಕ ತಲುಪಿಸುವ ಉದ್ದೇಶದಿಂದ ಜಾರಿಗೆ ತರಲಾಗಿದೆ.

# 30-10-2021

## ಜಾಲತಾಣ ಫೇಸ್ಬುಕ್ ಹೆಸರು 'ಮೆಟಾ' (Meta) ಎಂದು ಮರು ನಾಮಕರಣ




* ಪ್ರಸ್ತುತ ಫೇಸ್‌ಬುಕ್ ತನ್ನ ಮೂಲ ಕಂಪನಿಯ ಹೆಸರನ್ನು 'ಮೆಟಾ' ಎಂದು ಬದಲಾಯಿಸಿದೆ, ಎಂದು ಡೆವಲಪರ್‌ಗಳ ವಾರ್ಷಿಕ ಸಮ್ಮೇಳನದಲ್ಲಿ ಈ ವಿಷಯವನ್ನು ಫೇಸ್‌ಬುಕ್‌ನ ಮುಖ್ಯಸ್ಥ ಮಾರ್ಕ್ ಜುಕರ್‌ಬರ್ಗ್ ಅವರು ಘೋಷಣೆ ಮಾಡಿದ್ದಾರೆ.
* ಫೇಸ್‌ಬುಕ್‌ನ ಮಾಜಿ ಸಿವಿಕ್ ಇಂಟೆಗ್ರಿಟಿ ಮುಖ್ಯಸ್ಥ ಸಮಿದ್ ಚಕ್ರವರ್ತಿ ಅವರು ಈ 'ಮೆಟಾ' (Meta) ಹೆಸರನ್ನು ಸೂಚಿಸಿದ್ದಾರೆ, ಅಷ್ಟೇ ಅಲ್ಲದೇ ಫೇಸ್‌ಬುಕ್ ಅಡಿಯಲ್ಲಿನ ಜಾಲತಾಣಗಳು, ಕಾರ್ಪೋರೇಟ್ ವ್ಯವಹಾರಗಳು ಇದೀಗ 'ಮೆಟಾ'ದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಫೇಸ್ಬುಕ್'ನ ಅಪ್ಲಿಕೇಶನ್ ಹಾಗೂ ಬ್ರ್ಯಾಂಡ್‌ಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸಿಇಒ ಮಾರ್ಕ್ ಜುಕರ್‌ಬರ್ಗ್ ಅವರು ತಿಳಿಸಿದ್ದಾರೆ.

## ಮಹಿಳೆಯರ ಸ್ಪರ್ಧೆಯಿಂದ NDA 'ನಲ್ಲಿ ಲಿಂಗ ತಾರತಮ್ಯ ನಿವಾರಣೆ



* ರಾಷ್ಟ್ರೀಯ ರಕ್ಷಣಾ ಅಕಾಡೆಮಿ (NDA)ಗೆ ಮಹಿಳೆಯರ ಸೇರ್ಪಡೆಗೆ ಅವಕಾಶವನ್ನು ನೀಡಲಾಗಿದೆ, ಸದ್ಯ ಸಶಸ್ತ್ರ ಸೇನಾಪಡೆಗಳಲ್ಲಿ ಇರುವ ಲಿಂಗ ತಾರತಮ್ಯ ನಿವಾರಣೆಗೆ ಇದೊಂದು ಉತ್ತಮ ಹೆಜ್ಜೆಯಾಗಲಿದೆ ಎಂದು ಭೂಸೇನಾ ಮುಖ್ಯಸ್ಥ ಜ.ಎಂ.ಎಂ.ನರವಣೆ ತಿಳಿಸಿದ್ದಾರೆ.
* ಭೂಸೇನಾ ಮುಖ್ಯಸ್ಥ ಜ.ಎಂ.ಎಂ.ನರವಣೆ ಅವರು ಇತ್ತೀಚಿಗೆ ಪುಣೆಯಲ್ಲಿನ ಅಕಾಡೆಮಿಯ ಕ್ಯಾಂಪಸ್‌ನಲ್ಲಿ 141ನೇ ಬ್ಯಾಚ್‌ನ ಕೆಡೆಟ್‌ಗಳನ್ನು ಉದ್ದೇಶಿಸಿ ಈ ವಿಷಯದ ಬಗ್ಗೆ ಚರ್ಚಿಸಿದರು.
* ಈ ಹಿಂದೆ ರಕ್ಷಣಾ ಸಚಿವಾಲಯವು NDAಯಲ್ಲಿ ಮಹಿಳೆಯರನ್ನು ಸೇರ್ಪಡೆ ಮಾಡಿಕೊಳ್ಳುವವಿಷಯದಬಗ್ಗೆಸುಪ್ರೀಂಕೋರ್ಟ್‌ಗೆತಿಳಿಸಿತ್ತು.

## RBIಗವರ್ನರ್‌ಶಕ್ತಿಕಾಂತದಾಸ್‌ಅವರಅಧಿಕಾರಅವಧಿವಿಸ್ತರಣೆ



* ಪ್ರಸ್ತುತ ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್ (RBI)ನ ಗವರ್ನರ್ ಆಗಿರುವ ಶಕ್ತಿಕಾಂತ ದಾಸ್ ಅವರ ಅಧಿಕಾರ ಅವಧಿಯನ್ನು ಮುಂದಿನ ಮೂರು ವರ್ಷಗಳಿಗೆ ವಿಸ್ತರಣೆ ಮಾಡಿದೆ.
* ಪ್ರಸ್ತುತ ಗವರ್ನರ್ ಶಕ್ತಿಕಾಂತ ದಾಸ್ ಅವರು 2024ರ ಡಿಸೆಂಬರ್ ಕೊನೆಯವರೆಗೂ RBI'ನ ಗವರ್ನರ್ ಆಗಿ ಕಾರ್ಯವನ್ನು ನಿರ್ವಹಿಸಲಿದ್ದಾರೆ.
* ಈ ಹಿಂದಿನ RBI'ನ ಗವರ್ನರ್ ಊರ್ಜಿತ್ ಪಟೇಲ್ ಅವರು ರಾಜೀನಾಮೆ ನೀಡಿದ ತದನಂತರ, 2018ರ ಡಿಸೆಂಬರ್ 11ರಂದು ಶಕ್ತಿಕಾಂತ ದಾಸ್ ಅವರನ್ನು RBI'ನ 25ನೆಯ ಗವರ್ನರ್ ಆಗಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿತ್ತು, ಇದೀಗ ಮತ್ತೇ ಮುಂದಿನ ಮೂರೂ ವರ್ಷಗಳವರೆಗೆಇವರಅಧಿಕಾರಅವಧಿಯನ್ನುವಿಸ್ತರಿಸಲಾಗಿದೆಎಂದುಕೇಂದ್ರವುತಿಳಿಸಿದೆ.

## ರಾಷ್ಟ್ರವ್ಯಾಪಿ ನ್ಯೂಮೊಕೊಕಲ್ ಲಸಿಕೆಯ ಅಭಿಯಾನಕ್ಕೆ ಚಾಲನೆ




* ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯಾ ಅವರು ರಾಷ್ಟ್ರವ್ಯಾಪಿ ನ್ಯೂಮೊಕೊಕಲ್ ಲಸಿಕೆಯ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.
* ಈ ರಾಷ್ಟ್ರವ್ಯಾಪಿ ನ್ಯೂಮೊಕೊಕಲ್ ಲಸಿಕೆಯು ಬಾಲ್ಯದಲ್ಲಿನ ಮರಣ ಪ್ರಮಾಣವನ್ನು ಸರಿ ಸುಮಾರು ಶೇ. 60ರಷ್ಟು ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಈ ಲಸಿಕೆಯ ಬಗೆಗಿನ ಸಂವಹನ ಹಾಗೂ ಜಾಗೃತಿಕುರಿತ ಪ್ಯಾಕೇಜ್‌ಗಳನ್ನು ಬಿಡುಗಡೆ ಮಾಡಿದ್ದಾರೆ.
* ಪ್ರಸ್ತುತ ಇದೇ ಮೊದಲ ಬಾರಿಗೆ ದೇಶದಲ್ಲಿ ನ್ಯೂಮೊಕೊಕಲ್ ಲಸಿಕೆಯ ಸಾರ್ವತ್ರಿಕ ಬಳಕೆಗೆ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ.
* ಭಾರತದಲ್ಲಿ 5 ವರ್ಷದೊಳಗಿನ ಮಕ್ಕಳ ಸಾವಿಗೆ ನ್ಯೂಮೋನಿಯಾ ಮುಖ್ಯ ಕಾರಣವಾಗಿದೆ, ಇದು ನ್ಯೂಮೊಕೊಕಸ್ ಬ್ಯಾಕ್ಟೀರಿಯಾದಿಂದ ಉಂಟಾಗುತ್ತದೆ, ಸದ್ಯ ನ್ಯೂಮೋನಿಯಾದಿಂದಾಗಿ ದೇಶದಲ್ಲಿ ಶೇ. 16ರಷ್ಟು ಮಕ್ಕಳು ಮೃತಪಡುತ್ತಿದ್ದಾರೆ, ಈ ಸಾವಿನ ಪ್ರಕರಣ ತಡೆಗಟ್ಟುವ ನಿಟ್ಟಿನಲ್ಲಿ ಈ ನ್ಯೂಮೊಕೊಕಲ್ ಲಸಿಕೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದ್ದಾರೆ.

## ರಷ್ಯಾ ಭಾರತ ಜಂಟಿ ನಿರ್ಮಾಣದ 7ನೇ ಯುದ್ಧ ನೌಕೆ 'ತುಶಿಲ್' ಉದ್ಘಾಟಣೆ



* ಪ್ರಸ್ತುತ ಭಾರತೀಯ ನೌಕಾಪಡೆಯ 7ನೇ ಯುದ್ಧ ನೌಕೆ (ಪಿ1135.6)ನ್ನು ರಷ್ಯಾದ ಕಲಿನಿನ್‌ಗ್ರಾಡ್'ನಲ್ಲಿನ ಯಂತರ್ ಹಡಗು ನಿರ್ಮಾಣ ತಾಣ(ಶಿಪ್‌ಯಾರ್ಡ್)ದಲ್ಲಿ ರಷ್ಯಾದ ಭಾರತೀಯ ರಾಯಭಾರಿ ಡಿ. ಬಾಲಾ ವೆಂಕಟೇಶ್ ವರ್ಮಾರವರ ಮುಂದಾಳತ್ವದಲ್ಲಿ ಉದ್ಘಾಟಣೆ ಮಾಡಲಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯ ತಿಳಿಸಿದೆ.
* ಈ ಯುದ್ಧ ನೌಕೆಗೆ 'ತುಶಿಲ್' ಎಂದು ನಾಮಕರಣ ಮಾಡಲಾಗಿದೆ, 'ತುಶಿಲ್' ಎಂಬುವದು ಸಂಸ್ಕೃತ ಪದವಾಗಿದೆ, 'ರಕ್ಷಕ ಗುರಾಣಿ' ಎಂದು ಅರ್ಥವಿದೆ ಕೇಂದ್ರರಕ್ಷಣಾ ಸಚಿವಾಲಯ ತಿಳಿಸಿದೆ.
* ಪ್ರಸ್ತುತ ಭಾರತ ಮತ್ತು ರಷ್ಯಾ ಸರ್ಕಾರಗಳು ಈ ಹಿಂದೆ 2016ರ ಅಕ್ಟೋಬರ್'ನಲ್ಲಿ 4 ಹೆಚ್ಚುವರಿ ಪಿ1135.6 ವರ್ಗದ ಯುದ್ಧ ನೌಕೆಗಳನ್ನು ನಿರ್ಮಿಸಲು ಪರಸ್ಪರ ಒಪ್ಪಿಗೆ ನೀಡಿ ಜಂಟಿಯಾಗಿ ಸಹಿ ಹಾಕಿದ್ದವು.
* ಈ ಒಪ್ಪಂದದ ಪ್ರಕಾರ ತಲಾ ಎರಡು ಯುದ್ಧ ನೌಕೆಗಳನ್ನುರಷ್ಯಾಮತ್ತು ಭಾರತದೇಶಗಳಲ್ಲಿ ನಿರ್ಮಾಣ ಮಾಡುವುದಾಗಿಒಪ್ಪಿಕೊಂಡಿದ್ದವು.

## ರಾಷ್ಟ್ರೀಯಶಿಕ್ಷಣನೀತಿತಮಿಳುನಾಡಿನಲ್ಲಿ ಅನುಷ್ಠಾನವಿಲ್ಲ ಎಂದಸಿಎಂ ಎಮ್.ಕೆ.ಸ್ಟಾಲಿನ್



* ಪ್ರಸ್ತುತ ತಮಿಳುನಾಡು ರಾಜ್ಯದಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ಮಾಡಲಾಗುವದಿಲ್ಲ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಹೇಳಿಕೆ ನೀಡಿದ್ದಾರೆ, ಅಷ್ಟೇ ಅಲ್ಲದೇ ತಮಿಳುನಾಡು ರಾಜ್ಯಕ್ಕಾಗಿಯೇ ಪ್ರತ್ಯೇಕ ಶಿಕ್ಷಣ ನೀತಿಯನ್ನು ರಚಿಸಲು ತಜ್ಞರ ಸಮಿತಿಯನ್ನು ನೇಮಕ ಮಾಡಲಾಗುತ್ತದೆ ಎಂದು ತಿಳಿಸಿದರು.
* ಪ್ರಸ್ತುತ ತಮಿಳುನಾಡು ರಾಜ್ಯದಲ್ಲಿ ಅಲ್ಲಿನ ರಾಜ್ಯ ಸರ್ಕಾರವು ಇತ್ತೀಚಿಗಷ್ಟೇ ಮನೆಬಾಗಿಲಿಗೆ ಶಿಕ್ಷಣ ಒದಗಿಸುವ 'ಇಲ್ಲಂ ತೇಡಿ ಕಲ್ವಿ' ಯೋಜನೆಯು ಆರಂಭಿಸಿದೆ, ಇದು ರಾಜ್ಯದ ಶಿಕ್ಷಣ ಕ್ಷೇತ್ರವನ್ನು ಅಭಿವೃದ್ಧಿಪಡಿಸಲುಸಹಕಾರಿಯಾಗಲಿದೆಎಂದುಎಂದುಸ್ಟಾಲಿನ್‌ಅವರುತಿಳಿಸಿದ್ದಾರೆ.

## ಅಮೇರಿಕದಿಂದ ಆಫ್ಘಾನಿಸ್ತಾನಕ್ಕೆ 144 ಮಿಲಿಯನ್ ಡಾಲರ್ ಆರ್ಥಿಕ ನೆರವು



* ಸದ್ಯ ತಾಲಿಬಾನ್ ಆಡಳಿತದಲ್ಲಿರುವ ಆಫ್ಘಾನಿಸ್ತಾನ್ ರಾಷ್ಟ್ರಕ್ಕೆ ಮಾನವೀಯತೆಯ ದೃಷ್ಟಿಯಿಂದ ಅಮೇರಿಕ 144 ಮಿಲಿಯನ್ ಡಾಲರ್ ನೆರವು ನೀಡುವದಾಗಿ ಘೋಷಿಸಿದೆ, ಎಂದು ಅಮೇರಿಕದ ಕಾರ್ಯದರ್ಶಿಟೋನಿಬ್ಲಿಂಕೇನ್‌ಅವರುತಿಳಿಸಿದ್ದಾರೆ.
* ಪ್ರಸ್ತುತ ವಿಶ್ವಸಂಸ್ಥೆಯ ನಿರಾಶ್ರೀತರ ನಿಧಿ, ಹಾಗೂ ಅಮೇರಿಕ ಮಕ್ಕಳ ನಿಧಿ, ಅಂತರರಾಷ್ಟ್ರೀಯ ವಲಸಿಗರ ಅನುದಾನ, ಇದರ ಜೊತೆಗೆ ವಿಶ್ವ ಆರೋಗ್ಯ ಸಂಸ್ಥೆಯ ನೆರವನ್ನು ಕ್ರೋಢಿಕರಿಸಿ ನೆರವು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.
* ಅಮೇರಿಕದ ಈ 144 ಮಿಲಿಯನ್ ಡಾಲರ್ ಆರ್ಥಿಕ ನೆರವಿನಿಂದಾಗಿ ಆಫ್ಘಾನಿಸ್ತಾನದಲ್ಲಿ ಸಿಲುಕಿಕೊಂಡಿರುವ 18 ದಶಲಕ್ಷ ಜನರಿಗೆ ಬಳಸಲಾಗುತ್ತದೆ ಎಂದು ತಿಳಿಸಿದ್ದಾರೆ.

* ಒಟ್ಟಾರೆ 2021ರಲ್ಲಿ ಆಫ್ಘಾನಿಸ್ತಾನ ರಾಷ್ಟ್ರಕ್ಕೆ 474 ಮಿಲಿಯನ್ ಡಾಲರ್ ನೆರವು ನೀಡಲಾಗಿದೆ ಎಂದು ಅಮೇರಿಕದಕಾರ್ಯದರ್ಶಿಟೋನಿಬ್ಲಿಂಕೇನ್ಅವರುತಿಳಿಸಿದ್ದಾರೆ.

## ಪ್ರಧಾನಿ ಮೋದಿ ಜಿ20 ಶೃಂಗಸಭೆಯಲ್ಲಿ ಭಾಗವಹಿಸಲು ಇಟಲಿಗೆ ಪ್ರಯಾಣ



* ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿ ಅವರು ಜಿ20 ಶೃಂಗಸಭೆಯಲ್ಲಿ ಭಾಗವಹಿಸಲು ಇಟಲಿಗೆ ಪ್ರಯಾಣ ಬೆಳಸಿದ್ದಾರೆ.
* ಪ್ರಧಾನಿ ಮೋದಿ ಅವರು ಈ ಜಿ20 ಶೃಂಗಸಭೆಯಲ್ಲಿ ಕೋವಿಡ್ 19ರ ಸಾಂಕ್ರಾಮಿಕ ರೋಗ ಹಾಗೂ ಆರ್ಥಿಕ ಮತ್ತು ಆರೋಗ್ಯ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ.
* ಪ್ರಧಾನಿ ಮೋದಿ ಅವರು ಇಟಲಿ ಪ್ರಯಾಣದ ನಂತರ ವ್ಯಾಟಿಕನ್ ಸಿಟಿಗೆ ಪ್ರಯಾಣ ಬೆಳಸಲಿದ್ದಾರೆ.
* ಮೋದಿ ಅವರು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ಆಮಂತ್ರಣದ ಮೇರೆಗೆ ನವೆಂಬರ್. 1ರಂದು ಬ್ರಿಟನ್'ನ ಗ್ಲಾಸ್ಗೊಗೆ ಪ್ರಯಾಣ ಬೆಳಸಲಿದ್ದಾರೆ ಎಂದು ತಿಳಿದು ಬಂದಿದೆ.

## ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್ ಇತಿಹಾಸದ ಬಗ್ಗೆ ಮೆಚ್ಚುಗೆ: ಕೇಂದ್ರಸಚಿವಪ್ರಲ್ಹಾದ್‌ಜೋಶಿ



* ಒಡಿಶಾದಲ್ಲಿ ಪ್ರತಿದಿನ ಸರಾಸರಿ 5.25 ಲಕ್ಷ ಟನ್ ಕಲ್ಲಿದ್ದಲನ್ನು ಪೂರೈಸುತ್ತಿದ್ದ ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್ ಕಂಪನಿಯು 28 10 2021 ರಂದು ದಾಖಲೆಯ 6.04ಲಕ್ಷ ಟನ್ ಕಲ್ಲಿದ್ದಲನ್ನು ಗ್ರಾಹಕರಿಗೆ ರವಾನಿಸುವ ಮೂಲಕ ಹೊಸ ಇತಿಹಾಸವನ್ನು ಸೃಷ್ಟಿಸಿರುವುದಕ್ಕಾಗಿ ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಪ್ರಲ್ಹಾದ್ ಜೋಶಿ ಹಾಗೂ ರೈಲು, ಕಲ್ಲಿದ್ದಲು ಮತ್ತು ಗಣಿ ಖಾತೆ ಸಹಾಯಕ ಸಚಿವ ಶ್ರೀ ರಾವ್ ಸಾಹೇಬ್ ಪಾಟೀಲ್ ದನ್ವೆ ಅವರುಗಳು ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್ ಕಂಪನಿಯ ಅಧ್ಯಕ್ಷ ಮತ್ತು ಕಾರ್ಯಕಾರಿ ನಿರ್ದೇಶಕರನ್ನು ಸನ್ಮಾನಿಸಿದರು.
* ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್ ಕಂಪನಿಯು ತೋರಿದ ಐ ತಿಹಾಸಿಕ ದಾಖಲೆಯಲ್ಲಿ ಕಲ್ಲಿದ್ದಲು ಗಣಿಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ರೈಲ್ವೆ, ಕಾರ್ಮಿಕ ಸಂಘದ ನಾಯಕರು ಮತ್ತು ಸ್ಥಳೀಯ ಎಲ್ಲ ಮಧ್ಯಸ್ಥಗಾರರ ಪ್ರಯತ್ನವನ್ನು ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಶ್ಲಾಘಿಸಿದರು.
* ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್ (MCL)ನ ಹೆಚ್ಚುವರಿ ಜವಾಬ್ದಾರಿಯನ್ನು ಹೊತ್ತಿರುವ 'ನಾರ್ದರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್'ನ (NCL) ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸಿನ್ಹಾ ಅವರನ್ನೂ ಸಹ ಸಚಿವರು ಶ್ಲಾಘಿಸಿದರು.
* ಈ ಎರಡೂ ಅಂಗಸಂಸ್ಥೆಗಳು ಒಂದು ದಶಲಕ್ಷ ಟನ್ ಕಲ್ಲಿದ್ದಲು ರವಾನೆಯಲ್ಲಿ ದಾಖಲೆಯ ಗಡಿಯನ್ನು ದಾಟಿರುವ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.
* ದೇಶದಲ್ಲಿ ಇಂಧನ ಬೇಡಿಕೆ ಹೆಚ್ಚುತ್ತಿರುವ ಸಮಯದಲ್ಲಿ, ಶುಷ್ಕ ಇಂಧನಕ್ಕೆ ಬೇಡಿಕೆ ಹೆಚ್ಚುತ್ತಿದ್ದಾಗ 'MCL' ಮತ್ತು 'NCL' ಅತ್ಯಂತ ಕಠಿಣ ಸಮಯದಲ್ಲಿ ಉತ್ತಮ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಕ್ಕಾಗಿ ಸಚಿವಾಲಯವು ಈ ಎರಡೂ ಕಂಪನಿಗಳ ಪ್ರಯತ್ನಗಳನ್ನು ಗುರುತಿಸಿ 'MCL' ಮತ್ತು 'NCL'ನ ಕಾರ್ಯಕಾರಿ ನಿರ್ದೇಶಕರಿಗೆ ಮೆಚ್ಚುಗೆಪತ್ರಗಳನ್ನು ನೀಡಿದೆ.
*ಪ್ರಸಕ್ತ ಹಣಕಾಸು ವರ್ಷದಲ್ಲಿ, 'MCL' ಗ್ರಾಹಕರಿಗೆ 95.7 ದಶಲಕ್ಷ ಟನ್ ಕಲ್ಲಿದ್ದಲನ್ನು ಪೂರೈಸಿದ್ದರಿಂದ ಕಳೆದ ವರ್ಷಕ್ಕಿಂತ ಸುಮಾರು 21% ಬೆಳವಣಿಗೆಯನ್ನು ಹೊಂದಿದೆ.

## ಇಟಲಿಯವಿಶ್ವಯುದ್ಧಗಳಲ್ಲಿಹೋರಾಡಿದಭಾರತೀಯಸೈನಿಕರ ಸ್ಮರಣಾರ್ಥವಿವಿಧಸಂಸ್ಥೆಗಳಿಗೆಪ್ರಧಾನಿಭೇಟಿ



* ಇಟಲಿಯಲ್ಲಿ ನಡೆದ ಮೊದಲನೆಯ ಮತ್ತು ಎರಡನೆಯ ವಿಶ್ವ ಯುದ್ಧದಲ್ಲಿ ಹೋರಾಡಿದ ಸಿಖ್ ಸಮುದಾಯ ಮತ್ತು ಇತರೆ ಸಂಘಟನೆಗಳ ವಿವಿಧ ಸಮುದಾಯದ ಪ್ರತಿನಿಧಿಗಳನ್ನು ಪ್ರಧಾನಮಂತ್ರಿ ಶ್ರೀನರೇಂದ್ರ ಮೋದಿ ಅವರು ಭೇಟಿ ಮಾಡಿ ಸಂವಾದ ನಡೆಸಿದರು.
* ಈ ಯುದ್ಧಗಳಲ್ಲಿ ಶೌರ್ಯವನ್ನು ಪ್ರದರ್ಶಿಸಿದ ಭಾರತೀಯ ಸೈನಿಕರಿಗೆ ಗೌರವವನ್ನು ಸಹ ಪ್ರಧಾನಮಂತ್ರಿ ಅವರು ಸಲ್ಲಿಸಿದರು.

# 31-10-2021

## ಕನ್ನಡ ಚಿತ್ರರಂಗದ ಹೆಮ್ಮೆಯ ನಾಯಕ ನಟ ಪುನೀತ್ ರಾಜ್‌ಕುಮಾರ್ ನಿಧನ



* ಕನ್ನಡ ಚಿತ್ರರಂಗದ ಹೆಮ್ಮೆಯ ನಾಯಕ ನಟ ಹಾಗೂ ಕೋಟ್ಯಾಂತರ ಅಭಿಮಾನಿಗಳ ಆರಾಧ್ಯ ದೈವ್ಯ ಪುನೀತ್ ರಾಜ್‌ಕುಮಾರ್ ಅವರು ವಿಧಿವಶರಾಗಿದ್ದಾರೆ.
* ಪುನೀತ್ ರಾಜ್‌ಕುಮಾರ್ ಅವರು 1975 ರ ಮಾರ್ಚ್. 17 ರಂದು ಜನಿಸಿದ್ದರು, ಇತ್ತೀಚಿಗೆ ಇವರು 2021 ರ ಅಕ್ಟೋಬರ್. 29 ರಂದು ಹೃದಯಘಾತದಿಂದ ನಿಧನರಾಗಿದ್ದಾರೆ, ಜನಪ್ರಿಯವಾಗಿ ಇವರನ್ನು ಅಪ್ಪು ಎಂದು ಕರೆಯುತ್ತಾರೆ, ಅಷ್ಟೇ ಅಲ್ಲದೇ ಮಾಧ್ಯಮಗಳು ಮತ್ತು ಅಭಿಮಾನಿಗಳು 'ಪವರ್‌ಸ್ಟಾರ್' ಎಂದು ಕರೆಯುತ್ತಾರೆ, ಇವರು ಭಾರತೀಯ ನಟ, ಹಿನ್ನೆಲೆ ಗಾಯಕ, ದೂರದರ್ಶನ ನಿರೂಪಕ ಹಾಗೂ ನಿರ್ಮಾಪಕರಾಗಿ ಕೆಲಸ ಮಾಡಿದ್ದಾರೆ.
* ಪುನೀತ್ ರಾಜ್‌ಕುಮಾರ್ ಅವರು ಒಟ್ಟು 29 ಚಲನಚಿತ್ರಗಳಲ್ಲಿ ನಾಯಕ ನಟನಾಗಿ ನಟಿಸಿದ್ದಾರೆ, 1985 ರಲ್ಲಿ ಇವರು ಬಾಲ ನಟನಾಗಿ ಬೆಟ್ಟದ ಹೂವು ಎಂಬ ಚಿತ್ರದಲ್ಲಿ ಅಭಿನಯಿಸಿದ್ದಕ್ಕಾಗಿ ಇವರಿಗೆ ಅತ್ಯುತ್ತಮ ಬಾಲ ಕಲಾವಿದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸಿದೆ, ಅಷ್ಟೇ ಅಲ್ಲದೇ ಚಳಿಸುವ ಮೋಡಗಳು ಹಾಗೂ ಎರಡು ನಕ್ಷತ್ರಗಳು ಚಿತ್ರಕ್ಕಾಗಿ ಕರ್ನಾಟಕ ರಾಜ್ಯ ಅತ್ಯುತ್ತಮ ಬಾಲ ಕಲಾವಿದ ಪ್ರಶಸ್ತಿಯ ಕೂಡ ಲಭಿಸಿದೆ.
* ಪುನೀತ್ ರಾಜಕುಮಾರ ಅವರು ಮೊದಲ ಬಾರಿ ನಾಯಕ ನಟನಾಗಿ 2002 ರಲ್ಲಿ ಅಪ್ಪು ಚಿತ್ರಕ್ಕಾಗಿ ಬಣ್ಣ ಹಚ್ಚಿದ್ದರು.
* ಮತ್ತೇ ಇವರು 2012 ರಲ್ಲಿ ಕನ್ನಡದ ಕೋಟ್ಯಾಧಿಪತಿ ಗೇಮ್ ಶೋನಲ್ಲಿ ದೂರದರ್ಶನ ನಿರೂಪಕರಾಗಿ ಕೆಲಸ ಮಾಡಿದ್ದಾರೆ, ಅದೇ 2012ರಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಿಸಿದ 'ಅಣ್ಣಾ ಬಾಂಡ್' ಎಂಬ ಚಿತ್ರದಲ್ಲಿನ ಅಭಿನಯಕ್ಕಾಗಿ ಇವರಿಗೆ ಸುವರ್ಣ ಅತ್ಯುತ್ತಮ ನಟ

ಪ್ರಶಸ್ತಿಯ ಲಭಿಸಿತು, ಹಾಗೂ IIFA ಪ್ರಶಸ್ತಿಗೆ ಇವರು ನಾಮನಿರ್ದೇಶನಗೊಂಡರು.

* ಪುನೀತ್ ರಾಜಕುಮಾರ ಅವರು ನಾಯಕ ನಟ ಅಷ್ಟೇ ಅಲ್ಲದೇ ಹಿನ್ನೆಲೆ ಗಾಯಕರು ಕೂಡ ಆಗಿದ್ದರು, ಪ್ರಸ್ತುತ ಇವರ ಹೋಮ್ ಪ್ರೊಡಕ್ಷನ್ಸ್ ಹೊರತುಪಡಿಸಿ ಇತರ ಹಾಡುಗಳಿಗೆ ಇವರು ಪಡೆಯುವ ಸಂಭಾವನೆಯು ದಾನಕ್ಕೆ ಹೋಗುತ್ತದೆ ಎಂದು ಸ್ವತಃ ಅವರೇ ತಿಳಿಸಿದ್ದರು.

* ಪುನೀತ್ ರಾಜಕುಮಾರ ಅವರು ಕರ್ನಾಟಕ ಹಾಲು ಒಕ್ಕೂಟದ ನಂದಿನಿ ಹಾಲಿನ ಉತ್ಪನ್ನಗಳು, LED ಬಲ್ಬ್(ದೀಪ) ಪ್ರಾಜೆಕ್ಟ್, 7 ಅಪ್, F ಸ್ಕ್ವೇರ್, ಡಿಕ್ಸಿ ಸ್ಕಾಟ್, ಮಲಬಾರ್ ಗೋಲ್ಡ್'ನ ಬ್ರಾಂಡ್ ಅಂಬಾಸಿಡರ್ ಆಗಿದ್ದರು, ಅಷ್ಟೇ ಅಲ್ಲದೇ ಪೋಥಿ ಸಿಲ್ಕ್ಸ್, ಫ್ಲಿಪ್‌ಕಾರ್ಟ್ ಮತ್ತು ಮಣಪ್ಪುರಂ, ಇಂಡಿಯನ್ ಪ್ರೀಮಿಯರ್ ಲೀಗ್(IPL) ಕ್ರಿಕೆಟ್ ತಂಡದ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಬ್ರಾಂಡ್ ಅಂಬಾಸಿಡರ್ ಆಗಿದ್ದರು, ಹಾಗೂ ಬೆಂಗಳೂರು ಪ್ರೀಮಿಯರ್ ಫುಟ್ಸಲ್ ತಂಡದ ಮಾಲೀಕರಾಗಿದ್ದರು.

* ಪುನೀತ್ ಅವರು PRK ಆಡಿಯೊದ ಸ್ಥಾಪಕರು ಮತ್ತು ಮಾಲೀಕರಾಗಿದ್ದರು, ಇದೀಗ PRK ಆಡಿಯೊ 2021 ರ ಅಕ್ಟೋಬರ್ ಹೊತ್ತಿಗೆ 1.13 ಮಿಲಿಯನ್ ಚಂದಾದಾರರನ್ನು ಹೊಂದಿದೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App